
ಅಖಿಲ ಭಾರತ ಪತ್ರಿಕೆ
ಮೇ 2026



ಶ್ರೀಮಾತೆಯೊಡನೆ ನಿಕಟಭಾವ

ಬೆಲೆ: 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ಅಖಿಲ ಭಾರತ ಪತ್ರಿಕೆ
ಮೇ 2026

ಸಂಪುಟ: 36 ಸಂಚಿಕೆ: 05

ಪರಿವಿಡಿ

ಸಂಪಾದಕರು:
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

ಪರಿಶೀಲನಾ ಸಮಿತಿ:
ಡಾ॥ ಆರ್.ಕೆ. ಕುಲಕರ್ಣಿ

ಪ್ರಕಾಶಕರು:
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

ಪ್ರಾಯೋಜಕರು:
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

ಡಿ.ಟಿ.ಪಿ.:
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

ಆಫ್‌ಸೆಟ್ ಮುದ್ರಣ:
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

ಶ್ರೀಮಾತೆಯೊಡನೆ ನಿಕಟಭಾವ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

ಶ್ರೀಮಾತೆಯೊಡನೆ ನಿಕಟತಮ ಬಾಂಧವ್ಯ 3
ಅನು: ನಾಗಜ್ಯೋತಿ ಮಾನ್ವಿ

ನಿಕಟಗೊಳ್ಳಲು ಸೂಕ್ತ ವಿಧಾನ 10
ಅನು: ಶ್ರೀ ಕಿಶೋರಕುಮಾರ ಕಾಸಾರ

ನಾನು ಯಾವಾಗಲೂ ನಿನ್ನೊಂದಿಗೇ ಇದ್ದೇನೆ 17
ಅನು: ಶ್ರೀ ಪುಟ್ಟು ಕುಲಕರ್ಣಿ

ಶ್ರೀಮಾತೆಯವರಿಗೆ ಮತ್ತು ಸಮಗ್ರ ಯೋಗಕ್ಕೆ ತೆರೆದುಕೊಳ್ಳುವುದು 23
ಅನು: ಡಾ॥ ಮಹಾದೇವ ಸಕ್ರಿ
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

ಶ್ರೀ ಅರವಿಂದರ 'ಗೀತಾ ಪ್ರಬಂಧಗಳು' 50
ಅನು: ಜಾನ್ವಿ

ಶ್ರೀ ಅರವಿಂದರ 'ಉರ್ವಶಿ' 55
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

ಮುಖಪುಟದ ಕವನಗಳು 58
ಅನು: ಶ್ರೀ ಪುಟ್ಟು ಕುಲಕರ್ಣಿ

ವಾರ್ತಾಪತ್ರ 60

ಸಂಪಾದಕರ ಟಿಪ್ಪಣಿ

ದೈವತ್ವದೊಡನೆ ನಿಕಟತಮಗೊಳ್ಳುವದು ಮತ್ತು ಸಂಗತಿಯಾಗುವ ಘಟನೆಯು ಒಂದು ಅಪರೂಪದ ಸಂಗತಿಯಾಗಿದೆ. ಇದು ಸುದೀರ್ಘ ಅವಧಿಯಲ್ಲಿ ಅಭೀಪ್ಸೆಯ ಮೂಲಕ ಆಚರಿಸಲ್ಪಡುವ ತಪಸ್ಸಿನ ಫಲವಾಗಿರುತ್ತದೆ. ಇದೇ ದೃಢ ಸ್ವರೂಪದ ಭಕ್ತಿಯಾಗಿದೆ. ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು ಸದಾ ಸರ್ವರಿಗೂ ಲಭ್ಯವಾಗುವಂತೆಯೇ ಇದ್ದು, ಅದೂ ಸುಲಭಸಾಧ್ಯವಾಗಿರುವಂತೆಯೇ ಕೃಪೆ ತೋರುತ್ತಾರೆ. ಆದರೆ ಇದನ್ನು ಯಾವುದೇ ರೀತಿಯಿಂದ ಮೌಲ್ಯಕ್ಕೆ ಸೀಮಿತಗೊಳಿಸಲು ಸಾಧ್ಯವಿಲ್ಲ. ಅವರ ಭೌತಿಕ ಅಸ್ತಿತ್ವವು ಇಲ್ಲದಿದ್ದರೂ ಅಂದರೆ ತಮ್ಮನ್ನು ತಾವೇ ಈ ಭೌತಿಕ ಸ್ವರೂಪದಿಂದ ಮುಕ್ತಗೊಳಿಸಕೊಂಡಿದ್ದರೂ, ಸದಾ ಅವರ ನಿಕಟದಲ್ಲಿ ಅಥವಾ ಸಾಮಿಪ್ಯದಲ್ಲಿ ಸ್ಪಂದಗೊಳ್ಳಲು ಅವಕಾಶವಿರುತ್ತದೆ. ಇದು ಜೀವನವನ್ನು ಮಧುರಾತಿಮಧುರವಾದ ತೋಷವನ್ನು ಹೊಂದಲು ಮತ್ತು ಶಾಶ್ವತವಾದ ಹಾಗು ಅತ್ಯದ್ಭುತವಾಗಿರುವ ಜೊತೆಗೆ ಸಂತೋಷವನ್ನು ಒದಗಿಸುತ್ತದೆ. ಈ ವಿಷಯವಾಗಿ ಈ ಸಂಚಿಕೆಯು ರೂಪಿತಗೊಂಡಿದೆ. (ಎಐಎಮ್)

ಶ್ರೀಮಾತೆಯೊಡನೆ ನಿಕಟತಮ ಬಾಂಧವ್ಯ

– ಅನು: ನಾಗಜ್ಯೋತಿ ಮಾನ್ವಿ

ಶ್ರೀಮಾತೆಯವರ ಪ್ರಶಾಂತತೆಯನ್ನು ಮತ್ತು ಶಾಂತಿಯನ್ನು ನಿನ್ನ ಮನದಲ್ಲಿ ಸ್ವೀಕಾರ ಮಾಡುವದೇ ಏಕಾಗ್ರತೆಯನ್ನು ಅನುಭವಿಸಲು ಉತ್ತಮ ಸಹಾಯಕ ಅಂಶವಾಗಿದೆ. ಅದು ನಿಮ್ಮ ಮೇಲಿದೆ – ಕೇವಲ ಮನಸ್ಸು ಮತ್ತು ಅದರ ಚಕ್ರಗಳು ಇದಕ್ಕೆ ಸಂಪೂರ್ಣವಾಗಿ ತೆರೆದಿಟ್ಟುಕೊಳ್ಳಬೇಕಾಗುತ್ತದದೆ. ಶ್ರೀಮಾತೆಯವರು ಸಾಯಂಕಾಲದ ಧ್ಯಾನದ ಸಮಯದಲ್ಲಿ ಇದನ್ನೇ ನಿಮ್ಮಲ್ಲಿ ತುಂಬುತ್ತಾರೆ.

ಧ್ಯಾನದ ಉದ್ದೇಶವೆಂದರೆ, ಶ್ರೀಮಾತೆಯವರಿಗೆ ನಮ್ಮನ್ನು ನಾವು ತೆರೆದಿಟ್ಟುಕೊಳ್ಳುವದು ಎಂದರೆ ನಾವು ಮುಕ್ತವಾಗಿರುವದು ಎಂದರ್ಥ. ಈ ಮೂಲಕ ಅನೇಕ ಪ್ರಗತಿಪರ ಅನುಭವಗಳ ಮೂಲಕ ಬೆಳೆದು ದೈವದೊಂದಿಗೆ ಐಕ್ಯತೆಯನ್ನು ಹೊಂದಿ ಉನ್ನತ ಪ್ರಜ್ಞೆಯನ್ನು ಪಡೆಯುವದಾಗಿದೆ.

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/300

ಪ್ರಸ್ತುತ ಸ್ಥಿತಿಯಲ್ಲಿ ಶ್ರೀಮಾತೆಯವರ ಬಳಿಗೆ ಭೌತಿಕವಾಗಿ ತೆರೆದಿಟ್ಟುಕೊಳ್ಳುವದೇ ಹೆಚ್ಚಿನ ಲಾಭದಾಯಕವಾಗಿದೆ. ಕೆಲವೊಬ್ಬರು ಶ್ರೀಮಾತೆಯವರನ್ನು ಕರೆಯುವದರಿಂದ ಮುಂದೆ ಹೋಗುವ ಬದಲಾಗಿ ಹಿಂದೆ ಸರಿದಿದ್ದಾರೆ. ಏಕೆಂದರೆ ಇದಕ್ಕೇ ಹೆಚ್ಚಿನ ಒತ್ತು ಕೊಟ್ಟು ಅಲ್ಲಿ ಪ್ರಾಣಿಕ ಬಯಕೆಗಳ ತಳಹದಿಯನ್ನು ಸೃಷ್ಟಿ ಮಾಡುತ್ತಾರೆ. ಇದರಿಂದ ಶ್ರೀಮಾತೆಯವರ ಸಂಬಂಧದ ತಳಹದಿಯಲ್ಲಿ ಅಳುಕು ಸೃಷ್ಟಿಯಾಗುತ್ತದೆ.

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/501

ಯಾರು ತಮ್ಮ ಅಂತರಂಗದ ಸತ್ತೆಯಲ್ಲಿ ಹತ್ತಿರವಾಗಿರುತ್ತಾರೋ, ಶ್ರೀಮಾತೆಯ ಸಂಕಲ್ಪದೊಡನೆ ಒಂದಾಗಿರುತ್ತಾರೋ, ಯಾರು ತಮ್ಮನ್ನು ತಾವು ಆ ಮಾತೆಗೆ ಮುಕ್ತಗೊಳಿಸಿಕೊಂಡಿರುತ್ತಾರೆಯೋ, ಅವರು ಶ್ರೀಮಾತೆಗೆ ಅತ್ಯಂತ ನಿಕಟತಮ–ರಾಗುತ್ತಾರೆ. ಮತ್ತು ಆವರೇ ಶ್ರೀಮಾತೆಯಯವರ ಮಕ್ಕಳಾಗಿರುತ್ತಾರೆ. ಆದರೆ ಕೇವಲ ದೈಹಿಕವಾಗಿ ಆಕೆಗೆ ಹತ್ತಿರವಾಗಿರುವದಕ್ಕೆ ಸಾಧ್ಯವಿಲ್ಲ. 'ಕ್ಷ' ಅಥವಾ 'ಯ' ಎನ್ನುವವರು ಒಳಗೆ ಬರುವದರಿಂದ ಸಹಕಾರಿಯಾಯಿತೇ? ಎಲ್ಲರ ಬಹಿರಂಗದ ಬಯಕೆಗಳನ್ನು

ತೃಪ್ತಿಪಡಿಸುವದು ಶ್ರೀಮಾತೆಯವರಿಗೆ ಸಾಧ್ಯವಿಲ್ಲ, ಅದು ಕೇವಲ ಆಕೆಯ ಶರೀರವನ್ನು ಸವೆಸುತ್ತದೆಯೆ ವಿನಾ, ಇದರಿಂದ ಯಾರಿಗೂ ಸಹಾಯವಾಗುವದಿಲ್ಲ.

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/496 – ಶ್ರೀ ಅರವಿಂದರು

ಓ ದೇವಮಾತೆಯೇ, ಈ ಮುಂದಿನ ವಿಷಯಗಳ ಬಗೆಗೆ ತಾವು ಬೆಳಕು ಚೆಲ್ಲಬೇಕೆಂದು ಬಯಸುತ್ತೇವೆ.

1) ನನಗೆ ಸಾಮರ್ಥ್ಯವಿದೆಯೇ? ಮತ್ತು ಈ ಮಾರ್ಗದಲ್ಲಿ ಸಾಗಲು ಸಾಧ್ಯತೆಗಳು ಇವೆಯೇ?

ಪ್ರಶ್ನೆ ಇದಲ್ಲ, ಇಲ್ಲಿ ಪ್ರಶ್ನೆ ಏನೆಂದರೆ ನಿನ್ನಲ್ಲಿ ಅವಶ್ಯವಾಗಿರುವ ಅಭೀಪ್ಸೆ, ನಿರ್ಧಾರ ಮತ್ತು ಸತತ ಪ್ರಯತ್ನಗಳು ಇವೆಯೇ ಎನ್ನುವದಾಗಿದೆ. ನಿಮ್ಮ ಅಭೀಪ್ಸೆಯ ತೀವ್ರತೆ ಮತ್ತು ಸತತ ಪ್ರಯತ್ನದಿಂದ ನಿನ್ನ ಸತ್ತೆಯ ಎಲ್ಲಾ ಭಾಗಗಳು, ಆ ಕರೆಗೆ ಉತ್ತರಿಸಲು ಮತ್ತು ಏಕನಿಷ್ಠಗೊಳ್ಳಲು ಸಾಧ್ಯವೇ?

2) ನಾನು ಮನೆಗೆ ಹಿಂದಿರುಗಿದ ನಂತರದಲ್ಲಿ, ನನ್ನ ಸಾಧನದ ಅಭ್ಯಾಸವನ್ನು ನಾನು ಹೇಗೆ ಮುಂದುವರೆಸಲಿ?

ನಿನ್ನನ್ನು ನೀನು ಮೊದಲು ಶಾಂತಗೊಳಿಸಿಕೊ. ಜೊತೆಗೆ ಆ ಶಾಂತತೆಯಲ್ಲಿ ಶ್ರೀಮಾತೆಯವರನ್ನು ನೋಡು. ಅದೇ ರೀತಿಯಲ್ಲಿ ಭಾವಿಸಿಕೊಳ್ಳು.

3) ನಾನು ಹೇಗೆ ಧ್ಯಾನ ಮಾಡಲಿ? ತೆರೆದಿಟ್ಟುಕೊಳ್ಳುವದು ಎಂದರೇನು? ಎಲ್ಲಿ ನಾನು ತೆರೆದಿಟ್ಟುಕೊಳ್ಳಬೇಕು?

ಶ್ರೀಮಾತೆಯವರ ಪ್ರಭಾವವನ್ನು ನಿಮ್ಮ ಅಂತರಂಗದ ಪರಿಶುದ್ಧತೆ ಮತ್ತು ಸ್ವೀಕರಿಸುವಿಕೆಯ ಮೂಲಕ ಅದನ್ನು ಸ್ವತಂತ್ರವಾಗಿ ಅಂತರಂಗದಲ್ಲಿ ಹೊಂದಬೇಕು. ಇದನ್ನು ಹೃದಯದಿಂದ ಪ್ರಾರಂಭಿಸಿ.

4) ತನ್ನ ಉನ್ನತ ಜೀವನಕ್ಕಾಗಿ ನನ್ನ ತಲೆಯ ಮೇಲ್ಭಾಗದಲ್ಲಿ ಅಭೀಪ್ಸೆ ಪಡುತ್ತಿದ್ದೇನೆ; ಆದರೆ ಯಾವಾಗಲೂ ನನ್ನ ಹಣೆಯ ಮಧ್ಯದಲ್ಲಿ ಒತ್ತಡವನ್ನು ಅನುಭವಿಸುತ್ತೇನೆ, ನಾನೇನು ಮಾಡಲಿ?

ನಿನ್ನ ಮೇಲೆ ನೀನೇ ಒತ್ತಡವನ್ನು ಹೇರಿಕೊಳ್ಳಬೇಡ.

5) ಚೈತ್ಯ ಪುರುಷನು ಹೇಗೆ ತೆರೆದುಕೊಳ್ಳುತ್ತಾನೆ? ನಮ್ಮ ಆಧಾರದಲ್ಲಿ ಚೈತ್ಯ ಮತ್ತು ಪ್ರಾಣಿಕ ಸತ್ತೆಗಳನ್ನು ಹೇಗೆ ಅರ್ಥೈಸಿಕೊಳ್ಳಬೇಕು?

ಅಭೀಪ್ಸೆಯ ಶಕ್ತಿ ಮತ್ತು ಶ್ರೀಮಾತೆಯವರ ಕೃಪೆಯಿಂದ.

ಚೈತ್ಯ ಪುರುಷ: ನಿಮ್ಮ ನಿಜವಾದ ಸತ್ತೆ, ಈ ಸತ್ತೆಯು ನಿಮ್ಮ ಹೃದಯದಲ್ಲಿ ಇರುವದು ಮತ್ತು ಇದು ಶ್ರೀಮಾತೆಯವರ ಪ್ರಜ್ಞೆಯ ಕಿಡಿಯಾಗಿದೆ.

ಪ್ರಾಣ: ಆಶೆಗಳು, ಹಸಿವು ಮತ್ತು ಕ್ರಿಯಾಶೀಲ ಚಟುವಟಿಕೆಗಳು ಬರುವ ಭಾಗವಾಗಿದೆ, ನಾಭಿಯ ಸುತ್ತಲೂ ತನ್ನ ಭೌತಿಕ ತಳಹದಿಯನ್ನು ಹೊಂದಿದೆ.

6) ನನ್ನ ಕುಟುಂಬವು– ನಾನು, ಹೆಂಡತಿ, ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಮಗಳನ್ನು ಒಳಗೊಂಡಿದೆ. ನಾನು ಇಲ್ಲಿ ಬಂದು ಶಾಶ್ವತವಾಗಿ ಇರುವ ಬಯಕೆ ಇದೆ. ಆದರೆ ನನ್ನ ಹೆಂಡತಿ ಇದಕ್ಕೆ ಒಪ್ಪುತ್ತಿಲ್ಲ. ನಾನೇನು ಮಾಡಲಿ?

ನಿರ್ಮೋಹಿಯಾಗು.

7) ಕನಿಷ್ಠ ಮೂರು ತಿಂಗಳು ಮತ್ತೆ ಇಲ್ಲಿಗೆ ಬಂದು ಇರಬೇಕೆಂದು ಹೃದಯಪೂರ್ವಕವಾಗಿ ಬಯಸುತ್ತಿದ್ದೇನೆ, ದಯವಿಟ್ಟು ಒಪ್ಪಿಗೆ ನೀಡಿ.

ನೀನು ಯಾವಾಗ ಬರಲು ನಿರ್ಧರಿಸುವೆ ಎನ್ನುವದನ್ನು ನಮಗೆ ತಿಳಿಸಿ. ಆಗ ಮಾತ್ರವೇ ಒಪ್ಪಿಗೆಯನ್ನು ಕೊಡಲಾಗುವದು.

8) ನನ್ನ ದೈನಂದಿನ ಜೀವನದಲ್ಲಿ, ನಾನು ಹತಾಶನಾಗುತ್ತೇನೆ, ಮತ್ತು ಕೆಳ ಸ್ತರದಿಂದ ಶಕ್ತಿಗಳ (ಕಾಮ, ಕ್ರೋಧ, ಮುಂತಾದವುಗಳು) ಬಲಿ ಪಶು ಆಗುತ್ತೇನೆ. ನಾನು ದೀನ ಭಾವದಿಂದ ಶ್ರೀಮಾತೆಯವರಿಂದ ಸಹಾಯ ದೊರೆಯಲಿ ಎಂದು ವಿನಂತಿಸಿಕೊಳ್ಳುತ್ತೇನೆ.

ಮಮಕಾರರಹಿತ.

9) ನನ್ನ ಹೆಂಡತಿಯು ಅಂಬಾಜಿ ದೇವತೆಯ ಭಕ್ತಳಾಗಿದ್ದಾಳೆ. ಆಕೆಗೆ ತನ್ನ ಹೃದಯವನ್ನು ತೆರೆದಿಟ್ಟುಕೊಂಡಿದ್ದಾಳೆ. ಆದರೆ ಸಾಂಸಾರಿಕ ಮೋಹಗಳಿಂದ ಮುಕ್ತಳಾಗಲು ಸಾಧ್ಯವಾಗಿಲ್ಲ. ದಯವಿಟ್ಟು ಆಕೆಗೆ ಸಹಾಯ ಮಾಡಿ. ನಾನು ಆಕೆಯ ಭಾವಚಿತ್ರವನ್ನು ಕಳುಹಿಸಲೇ?

ನಿನ್ನ ಇಚ್ಛೆ ಹೇಗಿದೆಯೋ ಹಾಗೆ ಮಾಡು.

10) ನಾನು ಶ್ರೀಮಾತೆಯವರಿಗೆ ಪತ್ರವನ್ನು ಬರೆಯಲು ನಿಮ್ಮ ಒಪ್ಪಿಗೆಗಾಗಿ ವಿನಂತಿಸಿಕೊಳ್ಳುತ್ತೇನೆ.

ನೀನು ಪತ್ರವನ್ನು ಬರೆಯಬಹುದು.

11) ದಿನನಿತ್ಯದ ಜೀವನದ ಕೆಲಸಗಳನ್ನು ಮಾಡುವಾಗ ನನ್ನ ಮನೋಭಾವವೇನಿರಬೇಕು? ನಾನು ನನ್ನ ಕುಟುಂಬದ ಸದಸ್ಯರ, ಸಂಬಂಧಿಕರ ಮತ್ತು ಗೆಳೆಯರ ಜೊತೆಗೆ ಹೇಗೆ ಪ್ರತಿಕ್ರಿಯೆ ನೀಡಬೇಕು?

ನಿರ್ಮೋಹದಿಂದ.

12) ಪ್ರಸ್ತುತದಲ್ಲಿ ನಾನು ಏನನ್ನು ಓದಲಿ?

ಶ್ರೀ ಅರವಿಂದರ ಪುಸ್ತಕಗಳನ್ನು ಓದು.

*

ಶ್ರೀಮಾತೆಯವರೊಡನೆ ತೆರೆದಿಟ್ಟುಕೊಳ್ಳುವದು ಹೇಗೆ? ಈ ಕೆಳಗಿನ ಅಂಶಗಳು ಮಾರ್ಗದರ್ಶನ ಮಾಡುತ್ತಿವೆ;

1) "ನಿಮ್ಮನ್ನು" ಸತತವಾಗಿ ಅಥವಾ ಕಾಲ–ಕಾಲಕ್ಕೆ ನೆಪಿಟ್ಟುಕೊಳ್ಳುವದು.

2) ಜಪದ ಮೂಲಕ ನಿಮ್ಮ ನಾಮ ಸ್ಮರಿಸುವದು ಸಹಾಯಕವಾಗುತ್ತದೆ.

3) ಧ್ಯಾನದ ಸಹಾಯದಿಂದ.

ನಿಮಗೆ ಧ್ಯಾನದ ಅಭ್ಯಾಸವಿಲ್ಲದಿದ್ದಲ್ಲಿ ಬಹಳ ಕಷ್ಟವಾಗಬಹುದು.

4) ನಿಮ್ಮನ್ನು ಪ್ರೀತಿಸುವ ಮತ್ತು ಗೌರವಿಸುವರೊಂದಿಗೆ 'ನಿಮ್ಮ' ಬಗೆಗೆ ಸಂಭಾಷಿಸುವದು, ಕೆಲವೊಮ್ಮೆ ಅಪಾಯಕರವಾಗಿರುತ್ತದೆ, ಏಕೆಂದರೆ ಮಾತನಾಡುವಾಗ, ಕೆಲವೊಮ್ಮೊಮ್ಮೆ ಅಸಂಬದ್ಧ ಅಥವಾ ಕನಿಷ್ಠ ಅನುಪಯೋಗಿ ವಿಷಯಗಳು ಬರಬಹುದು.

5) 'ನಿಮ್ಮ' ಪುಸ್ತಕಗಳನ್ನು ಓದುವದೂ ಒಂದು ಉತ್ತಮ ಕಾರ್ಯವಾಗಿದೆ.

6) "ನಿಮ್ಮ" ಬಗೆಗೆ ಯೋಚಿಸುತ್ತಾ ಕಾಲ ಕಳೆಯುವದು ಉತ್ತಮ ಮಾರ್ಗವಾಗಿದೆ.

7) ಪ್ರಾಮಾಣಿಕ ಪ್ರಾರ್ಥನೆಯು ಉತ್ತಮವಾಗಿದೆ.

*

ಪ್ರಾರಂಭಿಸಲು ಬೇಕಾದ ಮೂರು ಅತ್ಯವಾಶ್ಯಕ ಅಂಶಗಳು:

ನಮ್ಮ ಇಡೀ ಸತ್ತೆಯಲ್ಲಿ ಮತ್ತು ಅದರ ಎಲ್ಲಾ ಚಟುವಟಿಕೆಗಳಲ್ಲಿ ಸಂಪೂರ್ಣ ಪ್ರಾಮಾಣಿಕತೆ ಇರಬೇಕು. ಯಾವುದೆ ಒಪ್ಪಂದದಂತಿರದ ಸಂಪೂರ್ಣ ಆತ್ಮಸಮರ್ಪಣೆ ಹೊಂದುವದು.

ತನ್ನನ್ನು ತಾನೇ ಸಹನೆಯಿಂದ ಸುಧಾರಿಸಿಕೊಳ್ಳುವದು ಮತ್ತು ಅದೇ ಸಮಯದಲ್ಲಿ ಪರಿಪೂರ್ಣವಾದ ಮತ್ತು ನಿಶ್ಚಲವಾದ ಶಾಂತ ಹಾಗು ಸಮತೆಯನ್ನು ನಿಧಾನವಾಗಿ ಜಯಿಸಬೇಕು.

*

ನಮ್ಮ ಮಾನವ ಪ್ರಜ್ಞೆಯಲ್ಲಿ ಅನಂತನಿಗೆ ತನ್ನನ್ನು ತಾನು ತೆರೆಡಿಟ್ಟುಕೊಳ್ಳುವ ಸಲುವಾಗಿ ಅನೇಕಾನೇಕ ಕಿಟಕಿಗಳಿವೆ. ಆದರೆ ಸಾಮಾನ್ಯವಾಗಿ ಮಾನವ ಕುಲವು ಈ ಕಿಟಕಿಗಳನ್ನು ಜಾಗರೂಕತೆಯಿಂದಲೇ ಮುಚ್ಚಿಟ್ಟುಕೊಂಡಿರುತ್ತಾರೆ. ಈ ಕಿಟಕಿಗಳು ಅನಂತನು ಸ್ವತಂತ್ರವಾಗಿ ನಮ್ಮಲ್ಲಿ ಪ್ರವೇಶಿಸಲು ಹಾಗು ರೂಪಾಂತರವಾಗಲು ಒಪ್ಪಬೇಕು ಮತ್ತು ಯಾವಾಗಲೂ ವಿಶಾಲವಾಗಿ ತೆರೆದುಕೊಂಡಿರಬೇಕಾಗುತ್ತದೆ.

ಈ ಕಿಟಕಿಗಳನ್ನು ತೆರೆಯಲು ಎರಡು ಅವಶ್ಯಕವಾದ ಸ್ಥಿತಿಗಳು ಬೇಕಾಗಿವೆ:

1) ಉನ್ನತವಾದ ಅಭೀಪ್ಸೆ.

2) ಪ್ರಗತಿಪರವಾಗಿ ಅಹಂಕಾರವನ್ನು ಕರಗಿಸಿಕೊಳ್ಳುವದು.

ಪ್ರಾಮಾಣಿಕವಾಗಿ ಪ್ರಾರಂಭಿಸುವವರಿಗೆ ದೈವೀ ಸಹಾಯವು ಖಚಿತವಾಗಿಯೂ ಸಿಗುತ್ತದೆ.

*

ನಮ್ಮಲ್ಲಿ, ನಮ್ಮ ಎಲ್ಲರಲ್ಲಿಯೂ ಮತ್ತು ಎಲ್ಲಾ ವಸ್ತುಗಳಲ್ಲಿರುವ ದೈವತ್ವವನ್ನು ಪಡೆದುಕೊಳ್ಳುವ ಶ್ರೇಷ್ಠ ವಿಧಾನ ಯಾವುದು?

ಅಭೀಪ್ಸೆ. ನಿಶ್ಚಲವಾದ ನೀರವತೆ.

ಹೃದಯ ಚಕ್ರದಲ್ಲಿ ಏಕಾಗ್ರತೆ. ಅವಶ್ಯಕತೆಯಿದ್ದಲ್ಲಿ ದೈವನಿಗಾಗಿ ಪ್ರಾರ್ಥಿಸಬಹುದು:

ನಾನು 'ನಿನಗೆ' ಸೇರಿದವನು ಮತ್ತು ನಾನು ನಿನ್ನನ್ನು ತಿಳಿಯಲು ಬಯಸುವೆ, ಹೀಗಾಗಿ ನಾನೇನು ಮಾಡುತ್ತೇನೆಯೋ ಅದೆಲ್ಲವೂ ನೀನು ಬಯಸಿದಂತೆಯೇ ಆಗಲಿ.

CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/38–42 – ಶ್ರೀಮಾತೆ

> *"ನೀವು ಶ್ರೀಮಾತೆಯವರಿಗೆ ತೆರೆದುಕೊಂಡಿದ್ದೀರಿ" ಎಂದು ಯಾರಿಗಾದರೂ ಹೇಳಿದಾಗ, ಅದು ಸಾಮಾನ್ಯ ರೀತಿಯಲ್ಲಿ ತೆರೆದಿಟ್ಟುಕೊಳ್ಳುವ ಅರ್ಥವೇ? ಆಶ್ರಮದಲ್ಲಿ ಇರುವವರೆಲ್ಲರೂ ಶ್ರೀಮಾತೆಯವರನ್ನು ಒಪ್ಪಿಕೊಂಡಾಗ ಹೆಚ್ಚು–ಕಡಿಮೆ ಅವರೆಲ್ಲರೂ ಶ್ರೀಮಾತೆಯವರಿಗೆ ತೆರೆದಿಟ್ಟುಕೊಂಡಂತೆ ಅಲ್ಲವೇ? ಮತ್ತು ಶ್ರೀಮಾತೆಯವರು ಒಬ್ಬ ಸಾಧಕನನ್ನು ಒಪ್ಪಿಕೊಂಡಾಗ, ಆಕೆಯ ಶಕ್ತಿಯು ಅವರಲ್ಲಿ ಪ್ರಾರಂಭವಾಗುವದಿಲ್ಲವೇ? ಮತ್ತು ಅದು ಅವರ ಜೊತೆಯಲ್ಲಿ ಯಾವಾಗಲೂ ಇರುತ್ತದೆಯೇ?*

ಎಲ್ಲರೂ 'ಆ ಶಕ್ತಿಗೆ' ತೆರೆದಿಟ್ಟುಕೊಂಡಿರುವದಿಲ್ಲ. 'ಅ'ನಲ್ಲಿ ಇದು ಸ್ವಲ್ಪವಾದರೂ ಇರಲಿಲ್ಲ. ಮತ್ತು ಬೇರೆಯವರು ತಮ್ಮದೇ ಸ್ವಯಂ ಸಂಕಲ್ಪ ಅಥವಾ ತಮ್ಮದೇ ರೂಪುರೇಷೆಗಳಲ್ಲಿ, ವಿಚಾರಗಳಲ್ಲಿ, ಆಶೆಗಳಲ್ಲಿ ಸಿಲುಕಿಕೊಂಡಿರುತ್ತಾರೆ. ಅಲ್ಲಿ ತೆರೆದಿಟ್ಟುಕೊಳ್ಳುವಿಕೆ ಇಲ್ಲದಿದ್ದಲ್ಲಿ, ಆ 'ಶಕ್ತಿ'ಯು ಬಹು ದಿನಗಳವರೆಗೆ ಯಾವುದೇ ಸ್ಪಂದನೆ ಇಲ್ಲದೇ ಕಾರ್ಯ ಮಾಡಬಹುದು – ಮತ್ತು ತಕ್ಕಮಟ್ಟಿಗೆ ತೆರೆದಿಟ್ಟುಕೊಳ್ಳುವಿಕೆ ಇಲ್ಲದಿದ್ದರೆ ಆಗ ಪ್ರಗತಿಯು ನಿಧಾನವಾಗುತ್ತದೆ ಮತ್ತು ಅತೀ ಕಷ್ಟಗಳಿಗೆ ಪಕ್ಕಾಗುತ್ತದೆ.

*

ನಿಮ್ಮ ಮತ್ತು ಶ್ರೀಮಾತೆಯವರ ಶಕ್ತಿಯ ನಡುವೆ ಯಾರೂ ಮತ್ತು ಯಾವುದೂ ಬರದಿರಲಿ. ಈ ಶಕ್ತಿಯನ್ನು ಒಪ್ಪಿಕೊಂಡು ಅದನ್ನು ಕಾಪಾಡಿಕೊಂಡು ಹಾಗೂ ನಿಜವಾದ ಸ್ಫೂರ್ತಿಗೆ ಸ್ಪಂದಿಸುತ್ತಿದ್ದಲ್ಲಿ ಮಾಡುವದರಲ್ಲಿ ನಿಮ್ಮ ಯಶಸ್ಸು ಅವಲಂಬನೆಯಾಗಿದೆಯೇ ವಿನಾ ಯಾವುದೇ ಮಾನಸಿಕ ವಿಚಾರಗಳ ಮೇಲೆ ಅಲ್ಲ.

ಕೆಲವು ವಿಚಾರಗಳು ಅಥವಾ ಯೋಜನೆಗಳು ಉಪಯೋಗಕರವಾಗಿದ್ದರೂ ಅದರ ಹಿಂದೆ ನಿಜವಾದ ಭಾವ ಮತ್ತು ನಿಜವಾದ ಶಕ್ತಿ ಹಾಗೂ ಸ್ವಭಾವವಿಲ್ಲದಿದ್ದರೆ ಅದು ಅಪಯಶಸ್ಸಿಗೆ ಕಾರಣವಾಗುತ್ತದೆ.

*

ದೈವೀ ಶಕ್ತಿಯ ಕಾರ್ಯಕ್ಕೆ ನಿಮ್ಮ ಭೌತಿಕ ಪ್ರಜ್ಞೆಯ ಪ್ರತಿರೋಧದ ಲಕ್ಷಣಗಳೇ ನಿನ್ನ ರೋಗಕ್ಕೆ ಕಾರಣವಾಗಿವೆ. ನಿಮ್ಮ ಸಾಧನದಲ್ಲಿ ಪ್ರಗತಿಯಾಗದಿರಲು ಕಾರಣವೇನೆಂದರೆ, ನಿಮ್ಮಲ್ಲಿಯೇ ವಿಭಜನೆಯೊಂದಿದೆ ಮತ್ತು ಕಾಯ್ದಿರಿಸಿಕೊಳ್ಳುವದು ಇಲ್ಲದೇ ನಿಮ್ಮನ್ನು ನೀವು ಕೊಟ್ಟುಕೊಳ್ಳುತ್ತಿಲ್ಲ. ಎಲ್ಲವನ್ನೂ ಶ್ರೀಮಾತೆಯವರಿಗೆ ಶರಣಾಗತಿಯಾಗಿ ಅರ್ಪಿಸಿದ್ದೇನೆ ಎಂದು ಮಾತನಾಡುತ್ತೀಯ, ಆದರೆ ಆಕೆಯು ಕೇಳಿದ ಒಂದೂ ಕೆಲಸವನ್ನೂ ನೀನು ಪಾಲಿಸಿಲ್ಲ, ಜೊತೆಗೆ ಪುನಃ ಪುನಃ ಪ್ರಮಾಣವನ್ನು ಮಾಡುತ್ತೀಯಾ, ಒಮ್ಮೆ ದೈವೀ ಶಕ್ತಿಯ ಕಾರ್ಯಾಚರಣೆಯನ್ನು ಆಹ್ವಾನಿಸಿದ ಮೇಲೆ ನೀನು ಬೇರೆ ಪ್ರಭಾವಕ್ಕೆ ಸಿಲುಕಿದಲ್ಲಿ, ಎಲ್ಲಾ ಅಡೆತಡೆಗಳು ಮತ್ತು ಕಷ್ಟಗಳಿಂದ ಮುಕ್ತಿಯ ನಿರೀಕ್ಷಣೆಯನ್ನು ಮಾಡುವದು ಹೇಗೆ ಸಾಧ್ಯ?

CWM (ಶ್ರೀಮಾತೆಯವರ ಸಮಗ್ರ ಸಂಪುಟ) 32/193–194

ಇತ್ತೀಚೆಗೆ ನನ್ನ ಪ್ರಾಣದ ಪ್ರಕೃತಿಯು ಯಾವುದೇ ಮತ್ತು ಪ್ರತಿಯೊಂದರಿಂದ ಮತ್ತು ಕ್ಷುಲ್ಲಕ ವಿಷಯಗಳಿಂದಲೂ ಸಹ ಬೆಳಿಗ್ಗೆಯಿಂದ ರಾತ್ರಿಯವರೆಗೂ ಅದು ಅಸಂತೋಷವನ್ನೇ ತರುತ್ತಿರುವ ಸ್ಥಿತಿಯಲ್ಲಿದೆ. ಅದನ್ನು ಬದಲಾಯಿಸಬಹುದು ಎನ್ನುವದರ ಬಗೆಗೆ ನನಗೆ ಸಂದೇಹಗಳಿವೆ. ನನ್ನ ಶಕ್ತಿಯಿಂದ ನನಗೆ ಈ ಕಾರ್ಯ ಮಾಡಲಾಗುವದಿಲ್ಲ ಎನ್ನವುದು ನನಗೆ ತಿಳಿದಿದೆ; ಕೇವಲ ಶ್ರೀಮಾತೆಯವರ ಕೃಪೆಯಿಂದ ಮಾತ್ರ ಇದನ್ನು ಮಾಡಲು ಸಾಧ್ಯ. ನನ್ನ ಬಹಿರಂಗದ ಮನಕ್ಕೆ ಭರವಸೆಯ ಕಿರಣಗಳ ಅವಶ್ಯಕತೆ ಇದೆ.

ನೀನು ಶ್ರೀಮಾತೆಯವರಿಂದ ಲಭ್ಯಗೊಳ್ಳುವ ರಕ್ಷಣೆ ಮತ್ತು ಸಾನಿಧ್ಯದ ಆದಿಯಲ್ಲಿ ಇರುವದರಿಂದ ನಿನಗೆ ಬದಲಾವಣೆ ತಂದುಕೊಳ್ಳುವ ಸಾಮರ್ಥ್ಯ–ವಿದೆಯೆಂದು ಹೇಳಬಹುದು. ಶ್ರೀಮಾತೆಯವರ ಶಕ್ತಿಯ ಸಹಾಯ ಮತ್ತು ಅವರ ಸ್ಪರ್ಶ ಯಾವಾಗಲೂ ಇದೆ, ನಿನ್ನ ಪ್ರಗತಿಯ ವೇಗವು ನಿನ್ನನ್ನು ನೀನು

ತೆರೆದಿಟ್ಟುಕೊಳ್ಳುವದರ ಮೇಲೆ ಅವಲಂಬಿತವಾಗಿದೆ ಮತ್ತು ನಿಶ್ಚಲವಾಗಿ ಶಾಂತವಾಗಿ ಸತತವಾಗಿ ಬೇರೆ ಶಕ್ತಿಗಳ ಸಲಹೆ ಹಾಗು ಆಕ್ರಮಣಗಳನ್ನು ತಿರಸ್ಕರಿಸಬೇಕಾಗುತ್ತದೆ. ಪ್ರಾಣದ ನರಗಳ ಪ್ರಚೋದನೆಯನ್ನು ವಿಶೇಷವಾಗಿ ತಿರಸ್ಕರಿಬೇಕಾಗುತ್ತದೆ; ದೇಹ ಮತ್ತು ನರಗಳ ಸತ್ತೆಯಲ್ಲಿ ನಿಶ್ಚಲತೆ ಮತ್ತು ಸಾಂತತೆಯಿಂದ ಕೂಡಿರುವ ಸಾಮರ್ಥ್ಯವು ಒಂದು ಉತ್ತಮ ತಳಹದಿಯಾಗಿರುತ್ತದೆ. ಯಾವಾಗಲೂ ನಿನ್ನನ್ನು ನೀನು ತೆರೆದಿಟ್ಟುಕೊಂಡೆಯಾದರೆ, ಅದನ್ನು ಸ್ವೀಕಾರ ಮಾಡಲು ಶ್ರೀಮಾತೆಯವರ ಕೃಪೆಯು ಯಾವಾಗಲೂ ಇರುತ್ತದೆ.

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/194 – ಶ್ರೀ ಅರವಿಂದರು

ನಿಕಟಗೊಳ್ಳಲು ಸೂಕ್ತ ವಿಧಾನ

– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ

ತಾಯಿ ಮತ್ತು ಮಗುವಿನ ನಡುವಿನ ಪ್ರೇಮ ಬಂಧನವೆಂದರೆ, ಅದು ಕೇವಲ ತಾಯಿ ತನ್ನ ಮಗುವಿನೆಡೆಗೆ ತೋರುವ ಪ್ರೀತಿಯಲ್ಲ. ಬದಲಾಗಿ ತಾಯಿ ಹರಿಸುವ ಪ್ರೀತಿಗೆ ಪ್ರತಿಯಾಗಿ ಮಗುವೂ ಸಹ ತನ್ನ ತಾಯಿಯೆಡೆಗೆ ಪ್ರೀತಿಯ ಭಾವನೆಯನ್ನು ಇರಿಸಿಕೊಂಡಿರಬೇಕು. ಅಷ್ಟೇ ಅಲ್ಲದೆ, ಅವಳ ನುಡಿಗಳನ್ನು ಪರಿಪಾಲಿಸಬೇಕು. ಅಂತೆಯೇ ನೀವು ಸಹ ದಿವ್ಯಮಾತೆಯ ನಿಜವಾದ ಪ್ರಿಯ ಪುತ್ರರಾಗ ಬಯಸಿದರೆ, ನೀವು ಮೊದಲು ಮಾಡಬೇಕಿರುವ ಕರ್ತವ್ಯವೆಂದರೆ, ನೀವು ನಿಮ್ಮತನವನ್ನು ಸಂಪೂರ್ಣವಾಗಿ ಅವಳಡಿಯಲ್ಲಿ ಸಮರ್ಪಿಸಬೇಕು ಮತ್ತು ಅವಳು ನಿರ್ದೇಶಿಸುವ ಆಜ್ಞೆಗಳನ್ನು ಪಾಲಿಸುತ್ತ, ಅವಳ ಇಚ್ಛೆಯಂತೆ ನಡೆಯಬೇಕು. ಹಾಗೂ ಯಾವುದೇ ಸಂದರ್ಭದಲ್ಲೂ ಅವಳಿಚ್ಛೆ–ಸಲಹೆಗಳನ್ನು ಧಿಕ್ಕರಿಸಿ ದಂಗೆಯೇಳಲು ಪ್ರಯತ್ನಿಸಬಾರದು. ಶ್ರೀಮಾತೆಯು ನಿಮಗಾಗಿ ಒಳ್ಳೆಯದನ್ನೇ ನಿರ್ದೇಶಿಸುತ್ತಿರಬೇಕಾದರೆ ನೀವೇಕೆ ಅದನ್ನು ನಿರ್ಲಕ್ಷಿಸುವಿರಿ?

ಮಗುವು ತನ್ನದೇ ಆದ ಬೌದ್ಧಿಕ ಮಟ್ಟದಲ್ಲಿ ಬಯಸುವ ಎಲ್ಲಾ ಬಯಕೆಗಳನ್ನು ಮಾತೆಯಾದವಳು ಈಡೇರಿಸುವದಿಲ್ಲ. ಏಕೆಂದರೆ ಮಗುವು ಬಯಸುತ್ತಿರುವ ದ್ರವ್ಯವು ಅವನಿಗೆ ಅಪಾಯಕಾರಿಯಾಗಬಹುದೆಂಬ ಸತ್ಯವು ಮಾತೆಗೆ ತಿಳಿದಿರುತ್ತದೆ.

ಹಾಗಾಗಿಯೇ ಅವಳು ತನ್ನ ಮಗುವಿನ ಬಯಕೆಯನ್ನು ನಿಷ್ಠುರವಾಗಿಯೇ ತಿರಸ್ಕರಿಸುತ್ತಾಳೆ. ಇದೇ ಅವಳ ನಿಜವಾದ ಪ್ರೀತಿಯುತ ಭಾವನೆಯಾಗಿದೆ. ಹಾಗೆಂದ ಮಾತ್ರಕ್ಕೆ ಮನುಷ್ಯ ಮಾತ್ರನು ಬಯಸುವ ಬಯಕೆಗಳೆಲ್ಲವೂ ಕೆಟ್ಟದ್ದೆಂದು ಹೇಳಲಾಗದು. ನಿಮ್ಮ ವೈಚಾರಿಕ ಮಿತಿಯೊಳಗೆ ನುಸುಳುವ ಎಲ್ಲ ಪ್ರಚೋದನೆಗಳನ್ನು ಸ್ವೀಕರಸದೇ, ಅವುಗಳನ್ನು ನಿಮ್ಮ ಗ್ರಹಿಕೆಯ ಮಿತಿಯಲ್ಲಿ ಪರಾಮರ್ಶಿಸಿ. ಅವುಗಳು ಯೋಗ್ಯವೆಂದು ನಿಮಗನ್ನಿಸಿದ್ದಲ್ಲಿ, ದಿವ್ಯಮಾತೆಯ ಇಚ್ಛೆಗೆ ನಿಮ್ಮನ್ನು ಒಂದು ಮಾಧ್ಯಮವನ್ನಾಗಿಸಿಕೊಂಡು ಮುನ್ನಡೆಯಿರಿ. ಏಕೆಂದರೆ ಅವಳ ಇಚ್ಛೆಯೊಂದಿದ್ದರೆ ನೀವು ನಿಮ್ಮದೇ ಆದ ಮಾರ್ಗದಲ್ಲಿ ಸಾಧನೆಗೈಯಲು ಸಮರ್ಥರಾಗುವಿರಿ.

ದಿವ್ಯತೆಯೆಡೆಗೆ ಮುಖ ಮಾಡಿರುವ ಪ್ರೇಮ

ದಿವ್ಯತೆಯೆಡೆಗೆ ಮುಖ ಮಾಡಿರುವ ಪ್ರೇಮವೆಂಬುದು ಮನುಷ್ಯಮಾತ್ರನು ದಿನನಿತ್ಯದಲಿ ಬಳಸುವ ಸಾಮಾನ್ಯ ಪ್ರೀತಿಯ ಭಾವನೆಯಾಗಿರಬಾರದು. ಏಕೆಂದರೆ ಅದು ಪ್ರೇಮವಲ್ಲ, ಬದಲಾಗಿ ಕೇವಲ ಒಂದು ವೈಚಾರಿಕ ಬಯಕೆಯಾಗಿದೆ; ಅದು ದಿವ್ಯ ಪ್ರೇಮವಲ್ಲ, ಬದಲಾಗಿ ಸರ್ವವನ್ನೂ ಸ್ವಾಧೀನಪಡಿಸಿಕೊಂಡು ಅದರ ಮೇಲೆ ತನ್ನ ಏಕಸ್ವಾಮಿತ್ವವನ್ನು ಜಾರಿಗೆ ತರಬೇಕೆಂಬ ಪ್ರಚೋದನೆಯಾಗಿದೆ; ಹಾಗಾಗಿ ಇಂತಹ ಕ್ಷುದ್ರ ಪ್ರಚೋದನೆಯನ್ನು ಅಲ್ಪ ಪ್ರಮಾಣದಲ್ಲೂ ಸಹ ಯೋಗ ಸಾಧನೆಯೊಳಗೆ ಪ್ರವೇಶಿಸದಂತೆ ಪ್ರತಿಬಂಧಿಸಬೇಕು. ನಿಜವಾದ ದಿವ್ಯ ಪ್ರೇಮವೆಂದರೆ, ಯಾವುದೇ ಸ್ವಾರ್ಥ–ಅಪೇಕ್ಷೆಗಳಿಲ್ಲದೆ ದಿವ್ಯಮಾತೆಯಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ಸ್ವ–ಅರ್ಪಣೆ, ಸಮರ್ಪಣೆಗೊಳ್ಳುವುದೇ ಆಗಿದೆ. ಇಂತಹ ದಿವ್ಯ ಪ್ರೇಮವು ಯಾವುದೇ ತೆರನಾದ ಹಕ್ಕನ್ನು ಚಲಾಯಿಸುವದಿಲ್ಲ, ಘೋರ ಷರತ್ತುಗಳನ್ನು ವಿಧಿಸುವದಿಲ್ಲ, ಕರಾರುಗಳನ್ನು ಹೇರುವದಿಲ್ಲ, ಅಸೂಯೆ–ಹೆಮ್ಮೆ–ಕೋಪಗಳಂತಹ ತ್ರಿವಿಧ ಭಾವನೆಗಳಿಂದ ಉದಿಸುವ ಹಿಂಸಾತ್ಮಕ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವದಿಲ್ಲ. ಏಕೆಂದರೆ ದಿವ್ಯ ಪ್ರೇಮವು ಇಂತಹ ಅಸುರೀ ಭಾವನೆಗಳಿಂದ ಮುಕ್ತವಾಗಿದ್ದು, ನಮ್ಮಿಂದ ಹರಿಯುವ ದಿವ್ಯ ಪ್ರೇಮಕ್ಕೆ ಪ್ರತಿಯಾಗಿ ದಿವ್ಯಮಾತೆಯೂ ತನ್ನನ್ನು ತಾನೇ ಸಮರ್ಪಿಸಿಕೊಳ್ಳುತ್ತಾಳೆ. ದಿವ್ಯಮಾತೆಯ ಈ ಸಮರ್ಪಣೆಯ ಪ್ರಕ್ರಿಯೆಯು ನಿಮ್ಮ ಅಂತರಂಗದಲ್ಲಿ ನೆಲೆಗೊಂಡ ಸಮರ್ಪಣಾ ಮನೋಭಾವನೆಯನ್ನು ಪ್ರತಿನಿಧಿಸುವ ಸಾಂಕೇತಿಕ ನಿರೂಪಣೆಯೇ ಆಗಿದೆ.

ಏಕೆಂದರೆ, ನಿಮ್ಮ ಅನ್ನಮಯ–ಪ್ರಾಣಮಯ–ಮನೋಮಯಗಳಲ್ಲಿ ಅವಳ ಸನ್ನಿಧಿಯಿದ್ದು, ಅಲ್ಲಿಯಿಂದಲೇ ಅವಳು ನಿಮ್ಮನ್ನು ದಿವ್ಯ ಸಾಮ್ರಾಜ್ಯಕ್ಕೆಂದು ಸಿದ್ಧಪಡಿಸುತ್ತಿದ್ದಾಳೆ. ನಿಮ್ಮ ಅಸ್ತಿತ್ವದ ಎಲ್ಲಾ ಚಾಲಕ ಶಕ್ತಿಗಳನ್ನು ಏಕೀಕರಿಸಿ, ಅವುಗಳನ್ನು ಪ್ರಜ್ಞೆಯ ಪೂರ್ಣತ್ವದೆಡೆಗೆ ಪ್ರವಹಿಸುತ್ತಿದ್ದಾಳೆ, ಕೊನೆಗೊಮ್ಮೆ ತನ್ನ ದಿವ್ಯ ಪ್ರೇಮದ ತೋಳ್ಬಂಧನದಲ್ಲಿ ನಿಮ್ಮನ್ನು ಸುರಕ್ಷಿತವಾಗಿ ಎತ್ತಿಕೊಂಡು ಪರಮ ಪುರುಷನೆಡೆಗೆ ಕರೆದೊಯ್ಯುತ್ತಾಳೆ. ಈ ಅನುಭವವನ್ನು ನೀವೆಲ್ಲರೂ ಅನುಭವಿಸಲೇಬೇಕು ಮತ್ತು ಆ ಆನಂದವನ್ನು ನಿಮ್ಮ ದೇಹ–ಪ್ರಾಣ–ಮನಗಳ ತುಂಬ ತುಂಬಿಸಿಕೊಳ್ಳಬೇಕು. ಈ ದರ್ಶನಕ್ಕೆ ಕಾಲ ಮತ್ತು ಪೂರ್ಣತೆಯ ಮಿತಿಯಿಲ್ಲ. ಒಮ್ಮೆ ಈ ಅನುಭವವನ್ನು ಪಡೆದದ್ದೇ ಆದಲ್ಲಿ, ನಿಮಗೆ ಭೌತಿಕ ಪ್ರಪಂಚದ ಬೇರಾವ ನಿರಾಶಾದಾಯಕ ಬಯಕೆಗಳು ಕಾಡುವದಿಲ್ಲ. ಈ ದಿವ್ಯಾನುಭವವನ್ನು ಅಪೇಕ್ಷಿಸುವ ಪ್ರತಿಯೊಬ್ಬ ಮನುಷ್ಯನಿಗೂ ಅದನ್ನು ಒದಗಿಸಿಕೊಡಲೆಂದು ಪ್ರಕೃತಿಯು ಶುದ್ಧೀಕರಣ ಪ್ರಕ್ರಿಯೆಯನ್ನು ಆರಂಭಿಸುತ್ತದೆ. ಅದರ ಮುಖಾಂತರ ಸಾಧಕನು ಆ ಅನುಭವವನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾನೆ.

ನೀವು ನಿಮ್ಮ ಪ್ರೇಮವನ್ನು ಸ್ವಾರ್ಥ ಮತ್ತು ಅಪೇಕ್ಷೆಗಳಿಂದ ಮುಕ್ತವಾಗಿಸಿ ಶುದ್ಧವಾಗಿರಿಸಿಕೊಳ್ಳಿ. ಆಗ ಮಾತ್ರ ನೀವು ನಿಮ್ಮ ಸಾಧನೆಗೆ ಪ್ರತಿಯಾಗಿ ದಿವ್ಯ ಪ್ರೇಮವನ್ನು ಪಡೆಯುತ್ತೀರಿ.

ದಿವ್ಯಮಾತೆಯಲ್ಲಿ ಅರ್ಪಣೆಗೊಳ್ಳುವುದು

ಶ್ರೀಮಾತೆಯು ಮರ್ತ್ಯದ ಪ್ರತಿಯೋರ್ವ ಮನುಜನು ಬಯಸುವ ಸಕಲ ದ್ರವ್ಯಗಳನ್ನೂ ನೀಡಲು ಸಿದ್ಧಳಿದ್ದಾಳೆ. ಅವಳೆಂದಿಗೂ ತನ್ನ ಮಕ್ಕಳ ಅಪೇಕ್ಷೆಯನ್ನು ತಿರಸ್ಕರಿಸುವದಿಲ್ಲ. ಅಲ್ಲದೆ ತಾನು ನೀಡುವ ಫಲಗಳನ್ನು ಸ್ವೀಕರಿಸುವಂತೆ ಮನುಜರನ್ನು ಸಿದ್ಧಪಡಿಸುತ್ತಾಳೆ. ಆದರೆ ನಾವು ಮಾತ್ರ ಅವಳು ಕರುಣಿಸುವ ಫಲವನ್ನು ಸ್ವೀಕರಿಸಲು ಸಿದ್ಧರಾಗಿಲ್ಲ.

ಹೌದು ಶ್ರೀಮಾತೆಯು ಯಾವಾಗಲೂ ಫಲಗಳನ್ನು ಕರುಣಿಸಲು ಸಿದ್ಧಳಾಗಿರುತ್ತಾಳೆ. ಅವಳು ನೀಡುವ ದ್ರವ್ಯಗಳನ್ನು ಸ್ವೀಕರಿಸಿ ಅವಳನ್ನು ಮೆಚ್ಚಿಸುವುದೊಂದೇ ನಾವು ಮಾಡಬೇಕಿರುವ ಕರ್ತವ್ಯವಾಗಿದೆ.

ಶ್ರೀಮಾತೆಯೊಂದಿಗಿನ ದಿವ್ಯ ಬಂಧನ

ನನ್ನ ವೈಚಾರಿಕ ಮಿತಿಯು ತನ್ನ ದಿನನಿತ್ಯದ ಜಂಜಡಗಳಿಂದ ಬೇಸತ್ತು ದುಃಖಿಸುತ್ತದೆ. ಶ್ರೀಮಾತೆಯು ತನ್ನ ಮೇಲೆ ಅನುಕಂಪ–ಸಹಾನುಭೂತಿಯನ್ನು ತೋರುತ್ತಿಲ್ಲವೆಂದು ಭಾವಿಸುತ್ತದೆ. ಮತ್ತು ಶ್ರೀಮಾತೆಯ ವಾತ್ಸಲ್ಯದಿಂದ ವಂಚಿತನಾಗಿರುವೆಂದು ಶೋಕಿಸುತ್ತದೆ. ತನ್ನ ತಾಪತ್ರಯಗಳಿಗೆ ಅವಳು ಕಿವಿಗೊಡುತ್ತಿಲ್ಲವೆಂದು ಅವಳ ಅಖಂಡ ಮೌನಕ್ಕೆ ಮುಗ್ಗರಿಸಿ ಬೀಳುತ್ತದೆ; ಅವಳ ನಿರ್ಲಕ್ಷ್ಯದಿಂದ ಕುಗ್ಗಿಹೋಗುತ್ತದೆ.

ನವೀಕರಣಗೊಳ್ಳದ, ಪುನರುಜ್ಜೀವನಗೊಳ್ಳದ ನಮ್ಮ ವೈಚಾರಿಕತೆಯು ಅಹಂಕಾರ, ಬಯಕೆ ಮತ್ತು ಬೇಡಿಕೆಗಳಿಂದ ತುಂಬಿದ್ದು ನಮ್ಮಲ್ಲಿ ಅತೃಪ್ತತೆ–ವೈಫಲ್ಯತೆಗಳನ್ನು ಸೃಜಿಸಿ ನಮ್ಮನ್ನು ಸ್ವಯಂನಿರ್ಮಿತ ದುಃಖಿಗಳ ಕೋಟಲೆಯೊಳಗೆ ಬಂಧಿಯಾಗಿರುವಂತೆ ಮಾಡುತ್ತದೆ.

ಆದರೆ ಈ ಜಡದ ಸುಖ–ದುಃಖಿಗಳನ್ನೆಲ್ಲ ಮೀರಿ ಮೇಲೆರುವ ವಿಧಾನವೊಂದನ್ನು ನಾನು ಬಲ್ಲೆ. ಅದುವೇ ದಿವ್ಯಮಾತೆಯೆಡೆಗಿನ ಸಮರ್ಪಣಾ ಮನೋಭಾವನೆ. ಈ ಪ್ರಕ್ರಿಯೆಯಲ್ಲಿ ಪ್ರಜ್ಞೆಯು ಅವಳಿಂದ ಯಾವುದೇ ಫಲಾಪೇಕ್ಷೆಗಳನ್ನು ಬಯಸುವದಿಲ್ಲ. ಅದು ಕೇವಲ ತನ್ನನ್ನು ತಾನು ಅವಳಡಿಯಲ್ಲಿ ಸಮರ್ಪಿಸಿಕೊಳ್ಳಲು ಬಯಸುತ್ತಿರುತ್ತದೆ. ಆ ಮೂಲಕ ದಿವ್ಯಮಾತೆಯೇ ಮೃಣ್ಮಯಕ್ಕೆ ಅವರೋಹಿಸಿ ತನ್ನ ಪ್ರಜ್ಞೆಯನ್ನು ಊರ್ಧ್ವ ಲೋಕದೆಡೆಗೆ ಹಿಡಿದೆತ್ತುವಂತೆ ಪ್ರಾರ್ಥಿಸುತ್ತದೆ. ಈ ಪ್ರಾರ್ಥನೆಯು ಹೃದಯದಿಂದ ಹೊರಡುವದು. ಮತ್ತು ಇದರ ಮುಖ್ಯ ಲಕ್ಷಣವೆಂದರೆ ದಿವ್ಯಮಾತೆಯಲ್ಲಿ ನಮಗಿರುವ ಸಮರ್ಪಣಾ ಮನೋಭಾವನೆಯಾಗಿದೆ.

ಮಾತೆಯೆಡೆಗಿನ ದಿವ್ಯ ಪ್ರೇಮ

ಶ್ರೀಮಾತೆಯ ದರ್ಶನ ಮಾತ್ರದಿಂದ ಲಭಿಸುವ ಆನಂದ ಮತ್ತು ತೃಪ್ತಿಯು ಅನುಭವಕ್ಕೆ ಏನೆಂದು ಕರೆಯಬಹುದು?

ಅದುವೇ ದಿವ್ಯಾನುಭವ.

ಶ್ರೀಮಾತೆಯ ಸ್ಮೃತಿ ಮಾತ್ರದಿಂದ ಲಭಿಸುವ ಆನಂದ ಮತ್ತು ತೃಪ್ತಿಯು ಅನುಭವಕ್ಕೆ ಏನೆಂದು ಕರೆಯಬಹುದು?

ಅದುವೇ ದಿವ್ಯಾನುಭವ.

ಶ್ರೀಮಾತೆಯ ಬಗೆಗಿನ ವ್ಯತಿರಿಕ್ತ ನುಡಿಗಳನ್ನು ಕೇಳಿದಾಕ್ಷಣ ಹೃದಯ ಘಾಸಿಯಾಗುವ ಅನುಭವಕ್ಕೆ ಏನೆಂದು ಕರೆಯಬಹುದು?

ಅದುವೇ ದಿವ್ಯಾನುಭವ.

ಶ್ರೀಮಾತೆಯು ನಮ್ಮಿಂದ ಬಹು ದೂರದ ದಿವ್ಯ ಲೋಕದಲ್ಲಿ ನೆಲೆಸಿದ್ದರೂ ನೆನೆದಾಕ್ಷಣ ಹೃದಯ ಗಹ್ವರದಲ್ಲಿ ಅವಳ ಸನ್ನಿಧಿಯನ್ನು ಕಾಣುವ ಅನುಭವಕ್ಕೆ ಏನೆಂದು ಕರೆಯಬಹುದು?

ಅದುವೇ ದಿವ್ಯಾನುಭವ.

ನಾನು ಪೂರ್ಣ ರೂಪದ ದಿವ್ಯ ಪ್ರೇಮದ ವಲಯದಲ್ಲಿರುವೆನೆಂದು ನಿರ್ಧರಿಸುವ ಬಗೆ ಹೇಗೆ?

ಅಹಂಕಾರದ ಅಳಿವು, ಭಕ್ತಿಯ ಗೆಲುವು ಮತ್ತು ದಿವ್ಯತೆಯೆಡೆಗಿನ ಅರ್ಪಣೆ–ಸಮರ್ಪಣೆ ಮನೋಭಾವನೆಗಳು ಜಾಗೃತವಾಗಿದ್ದರೆ ಅದುವೇ ದಿವ್ಯ ಪ್ರೇಮದ ಸನ್ನಿಧಿಯಾಗಿರುತ್ತದೆ.

*

ಬಾಹ್ಯದ ಜಡದ್ರವ್ಯಗಳೆಲ್ಲದರಿಂದ ಕದವಿಕ್ಕಿ, ಸುತ್ತೆಲ್ಲ ಸ್ತಬ್ದತೆ ಮತ್ತು ಶಾಂತತೆಯಿಂದ ಕೂಡಿರುವಾಗ ನಾನು ನನ್ನ ಹೃದಯಾಂತರಾಳದ ದಿವ್ಯಾನುಭವವೊಂದನ್ನು ಪಡೆಯುತ್ತೇನೆ; ಆಗ ಹೃತ್ಕಮಲದಿಂದ ಉದ್ಭವಿಸುವ ಸಿಹಿ–ಮಧುರವಾದ ಭಾವನೆಯೊಂದು ದೇಹ ವ್ಯಾಪಿಯಾಗಿ ಸಂಚರಿಸಿ, ಎನ್ನಾತ್ಮವನ್ನು ದಿವ್ಯಮಾತೆಯೆಡೆಗೆ ಕೊಂಡೊಯ್ಯುತ್ತದೆ. ಅಲ್ಲಿ ದಿವ್ಯತೆಯೊಡನೆ ಮೃದು–ಮಧುರವಾದ ಸಂಬಂಧವನ್ನು ಬೆಸೆಯುತ್ತದೆ. ಅದು ಸರ್ವ ಚೇತನಗಳನ್ನು ಹದಗೊಳಿಸುವ ಸ್ತಬ್ಧ ಮತ್ತು ಶಾಂತ ವಲಯವಾಗಿದ್ದು, ದೈವಿಕ ತೃಪ್ತಿಯೊಂದು ಸದಾ ಅಲ್ಲಿ ನಿತಾಂತವಾಗಿರುತ್ತದೆ.

ಅದುವೇ ದಿವ್ಯ ಪ್ರೀತಿಯಾಗಿದೆ.

*

ಮುಂಜಾವಿನಿಂದಲೂ ನಾನು ದಿವ್ಯಮಾತೆಯೊಡನೆ ತಾದ್ಯಾತ್ಮವನ್ನು ಹೊಂದುತ್ತಲೇ ಇದ್ದೇನೆ. ಅವಳ ಸನ್ನಿಧಿಯ ಸಾಮಿಪ್ಯವನ್ನು ಅನುಭವಿಸುತ್ತಲೇ ಇದ್ದೇನೆ. ಅವಳ ಮತ್ತು ನನ್ನ ನಡುವೆ ಯಾವುದೇ ವ್ಯತ್ಯಾಸವೇ ಇಲ್ಲವೇನೋ ಎಂಬಂತೆ ನನ್ನ ಪ್ರಜ್ಞೆಯು ಆ ದಿವ್ಯ ಪ್ರಜ್ಞೆಯೊಡನೆ ಸಂಪರ್ಕವನ್ನು ಸಾಧಿಸಿದೆ. ಆದರೆ ನಮ್ಮಿಬ್ಬರ ನಡುವೆ ಇರುವ ಅಗಾಧವಾದ ವ್ಯತ್ಯಾಸವೆಂದರೆ ನಾನು ಮಾನಸ ಸ್ತರದಲ್ಲಿದ್ದರೆ ಅವಳು ಸುಪ್ರಮಾನಸದ ಸ್ತರದಲ್ಲಿರುವಳು.

ದಿವ್ಯಮಾತೆಯು ಸುಪ್ರಮಾನಸದ ಪ್ರಭೃತಿಯಾದರೂ ಅವಳು ಎಲ್ಲ ಸ್ತರಗಳಲ್ಲೂ ನೆಲೆಸಿರುತ್ತಾಳೆ. ಪ್ರಮುಖವಾಗಿ ಅವಳು ಪ್ರತಿಯೋರ್ವ ಮರ್ತ್ಯನ ಹೃದಯಾಂತರಾಳದಲ್ಲಿ ನೆಲೆಸಿದ್ದು, ಮೃಣ್ಮಯವು ತನ್ನ ಹೃದಯದ ಕವಾಟವನ್ನು ತೆರೆದು ತನ್ನನ್ನು ನೇರವಾಗಿ–ನಿಕಟವಾಗಿ ದರ್ಶನಗೈಯಲೆಂದು ಬಯಸುತ್ತಾಳೆ. ಹಾಗಾಗಿ ನಾವು ಆಂತರಿಕ ಹೃದಯದ ದ್ವಾರವನ್ನು ತೆರೆದಲ್ಲಿ ಸಹಜವಾಗಿಯೇ ದಿವ್ಯಮಾತೆಯೊಡನೆ ತಾದ್ಯಾತ್ಮ ಹೊಂದಬಹುದು.

> *ನಾನು ಪ್ರತಿಯೊಂದು ಬಾರಿಯೂ ದಿವ್ಯಮಾತೆಯನ್ನು ದರ್ಶನಗೈದಾಗಲೂ ಪ್ರೇಮ–ಆನಂದವನ್ನೇಕೆ ಅನುಭವಿಸುತ್ತಿಲ್ಲ?*

ದಿವ್ಯಮಾತೆಯ ಪ್ರೇಮ ಮತ್ತು ಆನಂದದ ಅನುಭವವು ಸಾಧಕನ ಮಾನಸಿಕ ಸ್ಥಿತಿಗತಿಯ ಮೇಲೆ ನಿರ್ಧರಿತವಾಗಿರುತ್ತದೆ.

*

> *ಕಳೆದ ಎರಡು ದಿನಗಳಿಂದ ನನ್ನೊಳಗೆ ದಿವ್ಯಮಾತೆ ಮತ್ತು ನಿನ್ನ ಮೇಲೆ ಅತೀವ ಪ್ರೇಮವೊಂದು ಮನೆಮಾಡಿತ್ತು. ಆ ಪ್ರೇಮವು ಸುತ್ತಣ ಪ್ರಭಾವಲಯವನ್ನು ಚೈತನ್ಯಯುತವಾಗಿರಿಸಿತ್ತು. ನಂತರ ಆ ಪ್ರೇಮದ ಭಾಗಾಂಶವೊಂದು ಉಳಿದುಕೊಂಡಿತು. ಅದುವೇ ಮಹಾತ್ಮರ ಮತ್ತು ದಿವ್ಯಮಾತೆಯ ಮೇಲಿನ ಅಚಲ ಶ್ರದ್ಧೆ. ಅದೊಂದು ಭೌತಿಕತೆಯು ತುಂಬಲಶಕ್ಯವಾದ ಅವರ್ಣನೀಯ ಆನಂದದ ಕೇಂದ್ರವಾಗಿತ್ತು.*

ಅದುವೇ ಮಾನಸ ಶಕ್ತಿ.

> *ದಿವ್ಯತೆಯ ಮೇಲಿರುವ ಪ್ರೇಮದ ಭಾವನೆಯು ಕಂಬನಿಯ ರೂಪದಲ್ಲಿ ನನ್ನಿಂದ ಹೊರಬರುವುದನ್ನು ನೋಡಿದ್ದೇನೆ.*

ಆ ಕಂಬನಿಯೇ ಭಕ್ತಿಯಾಧಿಕ್ಯದ ಸಂಕೇತ.

ಇಂದು ಮಹಿಳಾ ಅತಿಥಿಯೊಬ್ಬರು ಆಶ್ರಮದಿಂದ ನಿರ್ಗಮಿಸಲು ಸಿದ್ಧರಾಗಿದ್ದರು. ಶ್ರೀಮಾತೆಯವರು ಅವರಿಗೆ ದರ್ಶನವನ್ನು ನೀಡಿ ಪ್ರಣಾಮ ಸಭೆಯನ್ನು ಮುಗಿಸಿ ಮೆಟ್ಟಿಲುಗಳನ್ನೇರಿ ಮೇಲೇರುತ್ತಿದ್ದಂತೆಯೇ, ಈ ಮಹಿಳೆಯು ಕಂಬನಿ ಹರಿಸುತ್ತ ಅಳಲು ಪ್ರಾರಂಭಿಸಿದಳು. ಇದು ಅವಳಲ್ಲಿದ್ದ ಭಕ್ತಿಯಾಧಿಕ್ಯವು ಹೊರಹರಿಯುತ್ತಿದ್ದ ಸಂಕೇತವಾಗಿತ್ತೇ?

ಅದು ಭಕ್ತಿಯ ಹೊರಹರಿವಿನ ಪ್ರಶ್ನೆಯಲ್ಲ. ಬದಲಾಗಿ ಅವರಂತರಂಗದಲ್ಲಿ ಉಸಿರಾಡುತಿಹ ದಿವ್ಯ ಚೇತನವು ಸದಾ ಜಾಗೃತವಾಗಿದ್ದು, ಅದು ಶ್ರೀಮಾತೆಯ ಅಂತರಂಗದೊಡನೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಇಂದು ಆಶ್ರಮವನ್ನು ತೊರೆದು ಹೋಗುತ್ತಿರುವ ಭಾವನೆಯನ್ನು ಪ್ರಕಟಿಸುತ್ತಿರುವ ಸಂಕೇತವಾಗಿದೆ.

*

ನನಗಾದ ದರ್ಶನದ ಸ್ತರದಲ್ಲಿ ನನ್ನ ಪ್ರಜ್ಞೆಯು ಮಂತ್ರಮುಗ್ಧವಾಗಿ ರೋಮಾಂಚನದ ಅನುಭವವನ್ನು ಪಡೆಯಿತು. ಅದೊಂದು ಅದ್ಭುತ ಕ್ಷಣ. ಆ ದರ್ಶನವು ನನ್ನ ಅಸ್ತಿತ್ವವನ್ನು ಮಾನಸ ಹಂತಕ್ಕೆ ಏರುವಂತೆ ಪ್ರೇರಿಸಿತು. ಹಾಗೆ ನನ್ನನ್ನು ರೋಮಾಂಚಿತಗೊಳಿಸಿ ನನ್ನನ್ನು ಆರೋಹಣಗೈಯಲು ಸಹಕಾರಿಯಾದ ಆ ದೈವೀಕ ದ್ರವ್ಯವಾದರೂ ಯಾವುದು?

ಅದುವೇ ಮಾತೆಯ ದಿವ್ಯ ಹಸ್ತ ಸ್ಪರ್ಶದ ಅನುಭವ. ಅದು ಮರ್ತ್ಯದ ವೈಚಾರಿಕ ಮತ್ತು ಮಾನಸಿಕ ಎರಡೂ ಸ್ತರಗಳನ್ನು ಜಾಗೃತಗೊಳಿಸಲು ಶಕ್ಯವಾಗಿದೆ.

*

ನಮ್ಮ ಪ್ರಜ್ಞೆಯು ಮಾನಸ ಹಂತಕ್ಕೆ ಏರುವದಕ್ಕೂ ಮುನ್ನವೇ ನಮ್ಮ ಮನವು ದಿವ್ಯಮಾತೆಯೊಡನೆ ಸಂಪರ್ಕವನ್ನಿರಿಸಿಕೊಂಡಿತ್ತೇ?

ಹೌದು ಮರ್ತ್ಯ ಮನವು ದಿವ್ಯಮಾತೆಯೊಂದಿಗೆ ನಿರಂತರ ಸಂಪರ್ಕದಲ್ಲಿರುತ್ತದೆ. (ಆದರೆ ಅದನ್ನು ಅನುಭವಿಸಲು ಸಾಧನೆಯ ಅವಶ್ಯಕತೆಯಿದೆ.)

*

ದಿವ್ಯಮಾತೆಯ ಪ್ರೇಮವು ಭೌತಿಕ ವಲಯದಲ್ಲಿ ಪ್ರಾಪ್ತವಾಗದೇ ಇದ್ದಲ್ಲಿ, ನಾನು ನಿಶ್ಚಲನಾಗಿರಲು ಸಾಧ್ಯವೇ ಇಲ್ಲ. (ನಾನು ನನ್ನ ಸ್ವ–ಪ್ರಯತ್ನದಿಂದ ಮುನ್ನುಗ್ಗಲೇಬೇಕು!)

ಭೌತಿಕ ಸ್ತರದಲ್ಲಿ ದಿವ್ಯ ಪ್ರೇಮದ ಅಸ್ತಿತ್ವಕ್ಕಾಗಿ ಕಾದು ಕುಳಿತುಕೊಳ್ಳುವ ನಮ್ಮ ಮನಸ್ಥಿತಿಯು ಮೊದಲು ತೊಲಗಬೇಕು. ಈ ಬಯಕೆಯ ಒಡ್ಡು(ಅಡೆತಡೆ) ನಮ್ಮ ಸಾಧನೆಯ ಹಾದಿಯಲ್ಲಿ ಮಾರ್ಗ ಪ್ರತಿಬಂಧಕವನ್ನೊಡ್ಡಿ ಅಪಾಯಕಾರಿ ತಿರುವನ್ನು ನೀಡಬಹುದು. ಭೋಗ ಪ್ರಧಾನವಾದ ನಿಲುವಿನಿಂದ ರಚಿತವಾದ ಈ ಸಿದ್ಧಾಂತವು ಅಸುರಕ್ಷಿತವಾಗಿದ್ದು, ಒಂದೊಮ್ಮೆ ತನ್ನನ್ನು ರೂಪಿಸಿದ ಕ್ಷುದ್ರಶಕ್ತಿಯಿಂದಲೇ ಇದು ನಾಶವಾಗುವುದು.

*

ಇಂದು ಸಾಯಂಕಾಲ ಶ್ರೀಮಾತೆಯವರು ಮಹಡಿ ಮೇಲಿನಿಂದ ನನ್ನೆಡೆಗೆ ಒಮ್ಮೆ ದೃಷ್ಟಿ ಹಾಯಿಸಿದರಷ್ಟೇ, ಅದೇ ಕ್ಷಣಕ್ಕೆ ನಾನು ಅವರೆಡೆಗಿನ ಅಸದಳವಾದ ಭಕ್ತಿಯಾಧಿಕ್ಯದ ಭಾವಪರವಶತೆಯಲ್ಲಿ ಮುಳುಮುಳುಗಿ ಎದ್ದಂತೆ ಭಾಸವಾಯಿತು. ನಾನು ಹಲವು ದಿನಗಳಿಂದ ಇಂತಹ ದಿವ್ಯಾನುಭೂತಿಗಾಗಿಯೇ ಹಂಬಲಿಸಿದ್ದೆ. ಭಕ್ತಿಯಾಳದಲ್ಲಿ ನಾನು ಈ ಅನುಭೂತಿಯನ್ನು ಪಡೆಯುವದಕ್ಕೂ ಪೂರ್ವದಲ್ಲಿ, ಇಂತಹ ಆನಂದದ ಪರಿಧಿಯೊಂದು ಅಸ್ತಿತ್ವದಲ್ಲಿದೆ ಎಂಬುದನ್ನೇ ನಾನು ಅರಿತಿರಲಿಲ್ಲ. ಹಾಗಾಗಿ ನಾನು ಸದಾ ಶ್ರೀಮಾತೆಯ ಅಹೇತುಕ–ಭಕ್ತಿ(ಪ್ರಾರ್ಥನೆ–ಯಿಲ್ಲದಾಗ್ಯೂ ದೊರೆಯುವ ಭಕ್ತಿ)ಯನ್ನು ಅಪೇಕ್ಷಿಸುತ್ತೇನೆ. ಶ್ರೀ ರಾಮಕೃಷ್ಣರು ಹೇಳುವಂತೆ, 'ಭಕ್ತಿಯ ಅಪೇಕ್ಷೆಯೇ ಪರಮಾಧಿಕ್ಯದ ಅಭೀಪ್ಸೆಯಲ್ಲ.' ಹಾಗಾಗಿ ನಾನು ಭಕ್ತಿಯನ್ನು ಅಪೇಕ್ಷಿಸುತ್ತಾ ಬೇರೆ ಇನ್ನೇನೋ ಮಹತ್ತರವಾದುದನ್ನು ಬೇಕೆಂದು ವಾದ ಹೂಡುತ್ತಿಲ್ಲವೆಂಬ ಸತ್ಯವನ್ನು ಅರಿತಿದ್ದೇನೆ. ಭಕ್ತಿ ಎಂಬುದು ನಿತ್ಯ ಸತ್ಯವಾದ ಋತದ ಅವಿಭಾಜ್ಯ ಅಂಗವೇ ಆಗಿರುವದರಿಂದ ಅದನ್ನು ಹೃದಯಪೂರಿತವಾಗಿ–ನ್ಯಾಯಪೂರಿತವಾಗಿ ಪಡೆಯಬೇಕೆಂಬುದೇ ನಿಯಮ. ಅಲ್ಲವೇ?

*

ಶ್ರೀಮಾತೆಯ ಬಗೆಗಿನ ಶುದ್ಧ ಭಕ್ತಿಯನ್ನು ಪಡೆಯುವ ಬಗೆ ಹೇಗೆ?

ಪರಿಶುದ್ಧ ಆರಾಧನೆ, ಶ್ರದ್ಧೆ ಮತ್ತು ಒತ್ತಡವಿಲ್ಲದ ದಿವ್ಯ ಪ್ರೇಮವೇ ಶುದ್ಧ ಭಕ್ತಿಯನ್ನು ಪಡೆಯುವ ಮಾರ್ಗವಾಗಿದೆ.

ಇದು ಯಾವ ಸ್ತರದಿಂದ ವ್ಯಕ್ತಗೊಳ್ಳುತ್ತದೆ.

ಮಾನಸ ಹಂತದಿಂದ.

*

ನಾನು ಯಾವಾಗಲೂ ನಿನ್ನೊಂದಿಗೇ ಇದ್ದೇನೆ

– ಅನು: ಪುಟ್ಟು ಕುಲಕರ್ಣಿ

"ನಾನು ಸದಾ ನಿನ್ನೊಂದಿಗೇ ಇದ್ದೇನೆ"

ಶ್ರೀಮಾತೆಯು ಪ್ರತಿಯೊಬ್ಬರಿಗೂ ಅವರಿಗೆ ಅವಶ್ಯಕವಿರುವ ಪ್ರೇಮವನ್ನೇ ಯಾವಾಗಲೂ ಕೊಡುತ್ತಾಳೆ.

*

ನಾನು ಸದಾ ನಿಮ್ಮ ಹೃದಯದಲ್ಲಿಯೇ ಪ್ರತಿಷ್ಠಾಪನೆಗೊಂಡಿದ್ದೇನೆ, ಅಲ್ಲಿಯೇ ಸ್ಥಿತಳಿದ್ದೇನೆ. ಪ್ರಜ್ಞಾಪೂರ್ವಕವಾಗಿಯೇ ನಾನು ಇಲ್ಲಿ ಸ್ಥಿತಗೊಂಡಿರುವದು.

*

ನಿಮ್ಮ ನಿಮ್ಮ ಹೃದಯವನ್ನು ಸದಾ ತೆರೆದಿಟ್ಟುಕೊಂಡಿರಿ, ಆ ಕ್ಷಣವೇ ನೀವು ಸದಾ ನನ್ನನ್ನು ಅಲ್ಲಿ ಕಾಣುತ್ತೀರಿ.

ನೀವೆಂದೂ ಉದ್ವಿಗ್ನರಾಗಬೇಡಿ. ನಿಮ್ಮ ಹೃದಯವನ್ನು ಸದಾ ಶಾಂತವಾಗಿರಿಸಿಕೊಂಡು ಅಲ್ಲಿಯೇ ಪ್ರಶಾಂತತೆಯಲ್ಲಿ ಸ್ಥಿರವಾಗಿರಿ, ಆಗಲೂ ಅಲ್ಲಿ ನನ್ನನ್ನು ಕಾಣುತ್ತೀರಿ.

*

ದೇವಾಲಯದೊಳಗೆ ಪ್ರವೇಶಿಸುವದಿದ್ದಲ್ಲಿ ತಲ್ಲೀನರಾಗಿ ಪ್ರವೇಶಿಸಿ, ಅಲ್ಲಿ ನನ್ನನ್ನು ಕಾಣುತ್ತೀರಿ.

*

ಅಭೀಪ್ಸೆಯಲ್ಲಿ ಇರುವ ಆತ್ಮಗಳೇಲ್ಲವೂ ನನ್ನ ಕೃಪೆಯಲ್ಲಿಯೇ ಇರುತ್ತವೆ.

*

ಪ್ರಾಮಾಣಿಕವಾಗಿರುವ ಆಕಾಂಕ್ಷೆ ಇರುವ ಸರ್ವರಲ್ಲಿಯೂ ಶ್ರೀಮಾತೆ ಇರುತ್ತಾಳೆ, ಮತ್ತು ದೈವಿಕ ಸ್ವರೂಪದ ಜೀವನದ ಕಡೆಗೆ ಕರೆದೊಯ್ಯುತ್ತಾಳೆ.

*

ನಾನು ಸದಾ ಸರ್ವದಾ ನಿಮ್ಮ ಹತ್ತಿರ, ನಿಮ್ಮ ಸಮೀಪ, ನಿಮ್ಮಲ್ಲಿಯೇ ಇರುತ್ತೇನೆ. ನನ್ನ ಆಶೀರ್ವಾದಗಳು ನನ್ನ ಸಂಗಡವೇ ಇಗಮಿಸುತ್ತವೆ.

*

ನಿಮ್ಮ ಕಾರ್ಯಗಳಲ್ಲಿ, ನಿಮ್ಮ ಸಾಧನೆಯ ಪಥದಲ್ಲಿ ನಿಮಗೆ ಮಾರ್ಗದರ್ಶನ ಮಾಡಲು ಮತ್ತು ಸಹಾಯ ಮಾಡಲು ನಾನು ಸದಾ ನಿಮ್ಮ ಮಧ್ಯದಲ್ಲಿಯೇ ಇರುತ್ತೇನೆ, ಈ ವಿಷಯವನ್ನು ನೀವು ಮನದಟ್ಟು ಮಾಡಿಕೊಳ್ಳಿರಿ.

*

ಈ ವ್ಯಾಪ್ತತ್ವವನ್ನು ಪ್ರಗತಿಗೊಳಿಸಿಕೊಳ್ಳುವದು ಮತ್ತು ಪ್ರಜ್ಞೆಯನ್ನು ಗಾಢಗೊಳಿಸಿಕೊಳ್ಳುವದು ಮತ್ತು ಅದನ್ನು ನೀವು ಅನುಭವಿಸುವ–ಅನುಭಾವಿಸುವದು ಈಗ ಅವಶ್ಯವಿರುವ ಸಂಗತಿಯಾಗಿದೆ. ಇದು ಅತ್ಯಂತ ಸುಭದ್ರವಾದ, ನೈಜವಾಗಿರುವ ಮತ್ತು ಶಾಶ್ವತದ ಶಾಂತಿಯನ್ನು ಒದಗಿಸುತ್ತದೆ.

*

ನನ್ನ ಈ ಶಾಶ್ವತದ ಪ್ರೇಮದ ಅಸ್ತಿತ್ವವನ್ನು ನೀವು ಸದಾ ಹೊಂದಿರಬೇಕು, ಇದು ಸರ್ವ ರೀತಿಯಿಂದಲೂ ಸೂಕ್ತವಾಗಿರುತ್ತದೆ.

ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ಪ್ರೇಮ

ನೀವು ಯಾವ ಸ್ಥಿತಿಯಲ್ಲಿ ಇರುವಿರಿ ಎನ್ನುವದು ನಿಮಗಿಂತ ಚೆನ್ನಾಗಿ ಅರಿವಿದೆ; ನಿಮ್ಮನ್ನು ನೀವೇ ಅಲ್ಪ–ಪ್ರಾಮುಖ್ಯತೆ ಹೊಂದಿದವರು ಭಾವಿಸಿಕೊಂಡಿರುವ ಅಮೂಲ್ಯ ನಿಧಿಗಳು ಎನ್ನುವದು ನನಗೆ ತಿಳಿದಿದೆ.

ಪ್ರೀತಿ, ಪ್ರೇಮ ಮತ್ತು ನಿಸ್ವಾರ್ಥತೆ ಇವೆಲ್ಲವೂ ಯಾವಾಗಲೂ ಯಾವುದೇ ಕರಾರು ಹೊಂದಿಕೊಂಡು ರೂಪಿತಗೊಳ್ಳುವ ವಿಷಯವಲ್ಲ ಎಂದು ನೀವು ಹೇಳುತ್ತಿರುವದು ನಿಜವಾಗಿದೆ.

ಶ್ರೀ ಅರವಿಂದರ ಕುರಿತು ಮತ್ತು ನನ್ನ ನಿಮ್ಮ ಬಗೆಗೆ ಹೊದಿರುವ ಪ್ರೀತಿಯೇ ಈ ರೀತಿಯಲ್ಲಿರುತ್ತದೆ. ಅದಕ್ಕಾಗಿಯೇ ಇತರ ಎಲ್ಲಾ ಅಸಂಬದ್ಧತೆಗಳನ್ನು ಮತ್ತು ಬಯಕೆಗಳನ್ನು ನಾವು ಯಾವಾಗಲೂ ಆಲಿಸುವದಿಲ್ಲ.

ಆದರೆ ಒಂದು ಸಂಗತಿ ಮಾತ್ರ ನಿಜ, ನಾನು ನಿಜವಾಗಿಯೂ ನಿನ್ನನ್ನು ಪ್ರೀತಿಸುತ್ತೇನೆ, ನಾನು ನಿನ್ನನ್ನು ಹೆದರಿಸುವದಿಲ್ಲ, ಕೋಪದ ಕಣ್ಣುಗಳಿಂದ ನೋಡುವದಿಲ್ಲ. ಯಾವುದೇ ಅಂಜಕೆ ಇಲ್ಲದೇ ಇಲ್ಲಿಗೆ ಬಾ.

*

ಶ್ರೀ ಅರವಿಂದರು ಅಭಿವ್ಯಕ್ತಗೊಳಿಸರುವದನ್ನು ನೀವು ಜ್ಞಾಪಿಸಿಕೊಳ್ಳಿ. ಇವೆಲ್ಲವೂ ನಿಮಗೆ ಯಾವಾಗ ಮನದಾಳದಲ್ಲಿ ಇಳಿಯುತ್ತವೆ? ನೀವೇಕೆ ಶ್ರೀಮಾತೆಯಿಂದ ದೂರವಿರಲು ಓಡಿ ಹೋಗುತ್ತೀರಿ? ಬನ್ನಿ, ಅವಳ ಸಮೀಪವೇ ಬನ್ನಿ. ಅವಳು ಅತ್ಯಂತ ಪ್ರೀತಿಯಿಂದಲೇ ಗುಣಪಡಿಸುತ್ತಾಳೆ. ಇದುವೇ ನಿಜವಾದ ಸಂಗತಿಯಾಗಿದೆ.

*

ನನ್ನ ಎಲ್ಲಾ ಮಕ್ಕಳನ್ನೂ ನಾನು ಸದಾ ಸಮಾನವಾಗಿಯೇ ಜ್ಞಾಪಿಸಿಕೊಳ್ಳುತ್ತಿರುತ್ತೇನೆ, ಜೊತೆಜೊತೆಗೆ ಪ್ರೀತಿಸುತ್ತಾ ಇರುತ್ತೇನೆ.

ನೀವು ನನಗೇ ನೇರವಾಗಿ ಬರೆಯಿರಿ, ನಿಮ್ಮ ಎಲ್ಲಾ ಪ್ರಾಮಾಣಿಕ ಪ್ರಾರ್ಥನೆಗಳಿಗೆ ಉತ್ತರಿಸುತ್ತೇನೆ. ನಾನೇ ಲಿಖಿಸುತ್ತೇನೆ. ಯಾವ ಯಾತನೆಯನ್ನೂ ಅನುಭವಿಸದೇ ಸದಾ ಹರ್ಷಚಿತ್ತರಾಗಿರಿ.

*

ನಾನು ಪ್ರತಿಯೊಂದು ಕ್ಷಣದಲ್ಲೂ ಸಹಿತ, ಯಾರಾದರೂ ನಿಮ್ಮನ್ನು ಕರೆಯುತ್ತಿದ್ದಾರೆ ಮತ್ತು ನೀವು ಅದಕ್ಕೆ ಉತ್ತರಿಸುತ್ತಾ ಇರುತ್ತೀರಿ ಎಂದು ಭಾವಿಸುತ್ತಾ ಇರುತ್ತೇನೆ. ಇದು ನಿಮ್ಮ ನಿದ್ರೆಗೆ ಮತ್ತು ವಿಶ್ರಾಂತಿಗೆ ಅಡೆತಡೆ ಉಂಟು ಮಾಡುವದಿಲ್ಲವೇ?

ಹಗಲಿರುಲೂ ಸತತವಾಗಿ ಕರೆಗಳು ಬರುತ್ತಲೇ ಇರುತ್ತವೆ. ಆದರೆ ನನ್ನ ಪ್ರಜ್ಞೆ ಸದಾ ಅವುಗಳನ್ನು ಗಮನಿಸುತ್ತಲೇ ಇರುತ್ತದೆ ಮತ್ತು ಅವುಗಳಿಗೆ ಉತ್ತರವನ್ನೂ ಒದಗಿಸುತ್ತಿದೆ.

ವ್ಯಕ್ತಿ ಎನ್ನುವದು ಕಾಲ ಮತ್ತು ಅವಕಾಶದಲ್ಲಿ ಮಾತ್ರ ಸೀಮಿತವಾಗಿರುತ್ತಾನೆ.

*

ಶ್ರೀಮಾತೆಯವರಿಗೆ ಮತ್ತು ಸಮಗ್ರ ಯೋಗಕ್ಕೆ ತೆರೆದುಕೊಳ್ಳುವುದು

– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ

ನಾನು ಯೋಗವನ್ನು ಮಾಡುತ್ತಿದ್ದೇನೆಯೆ ಎನ್ನುವುದು ನನಗೆ ತಿಳಿಯುತ್ತಿಲ್ಲ. ನಾನು ನಿಮ್ಮ ಪೂರ್ಣ ಯೋಗವನ್ನು ಮಾಡುತ್ತಿದ್ದೇನೆ ಎಂದು ಹೇಳಬಹುದೆ?

ಶ್ರೀಮಾತೆಯವರೆಡೆಗೆ ಹೊರಳಿದ ಎಲ್ಲರೂ ನನ್ನ ಯೋಗವನ್ನು ಮಾಡುತ್ತಿದ್ದಾರೆ. ಒಬ್ಬರು ಪೂರ್ಣ ಯೋಗವನ್ನು **"ಮಾಡಬಹುದು"** ಎಂದು ಭಾವಿಸುವುದು ಒಂದು ದೊಡ್ಡ ತಪ್ಪು – ಅಂದರೆ, ನಮ್ಮ ಸ್ವಂತ ಪ್ರಯತ್ನದಿಂದ ಯೋಗದ ಎಲ್ಲ ಮಗ್ಗಲುಗಳನ್ನು ಆಚರಿಸುವುದು ಮತ್ತು ಈಡೇರಿಸುವುದು. ಯಾವ ಮನುಷ್ಯನೂ ಹಾಗೆ ಮಾಡಲು ಸಾಧ್ಯವಿಲ್ಲ. ನಾವು ಮಾಡಬೇಕಾಗಿರುವುದೇನೆಂದರೆ, ನಮ್ಮನ್ನು ನಾವು ಶ್ರೀಮಾತೆಯವರಿಗೆ ಸಮರ್ಪಿಸಿಕೊಳ್ಳುವುದು ಮತ್ತು ಸೇವೆಯಿಂದ, ಭಕ್ತಿಯಿಂದ, ಆಕಾಂಕ್ಷೆಯಿಂದ ಅವರಿಗೆ ತೆರೆದುಕೊಳ್ಳುವುದು; ಆಗ ಶ್ರೀಮಾತೆಯವರು ತಮ್ಮ ಬೆಳಕು (ಜ್ಞಾನ) ಮತ್ತು ಬಲದಿಂದ ನಮ್ಮಲ್ಲಿ ಕೆಲಸ ಮಾಡುತ್ತಾರೆ, ಇದರಿಂದ ಸಾಧನೆಯು ಪೂರ್ಣಗೊಳ್ಳುತ್ತದೆ. ತಾನೊಬ್ಬ ದೊಡ್ಡ ಪೂರ್ಣ ಯೋಗಿಯಾಗಬೇಕು ಅಥವಾ ಒಬ್ಬ ಸುಪ್ರಮಾನಸ ಜೀವಿಯಾಗಬೇಕು ಎಂಬ ಮಹತ್ವಾಕಾಂಕ್ಷೆಯನ್ನು ಹೊಂದಿರುವುದು ಮತ್ತು ನಾನು ಅದರ ಕಡೆಗೆ ಎಷ್ಟು ದೂರ ಪಯಣಿಸಿದ್ದೇನೆ ಎಂದು ತನ್ನನ್ನು ತಾನು ಕೇಳಿಕೊಳ್ಳುವುದು ಸಹ ತಪ್ಪು. ಸರಿಯಾದ ಮನೋಭಾವನೆ ಎಂದರೆ ಶ್ರೀಮಾತೆಯವರಿಗೆ ಸಮರ್ಪಿತರಾಗಿರುವುದು ಮತ್ತು ಅವರು ನಿಮ್ಮನ್ನು ಏನಾಗಿ ನೋಡಲು ಬಯಸುತ್ತಾರೋ ಅದೇ ಆಗಲು ಇಚ್ಛಿಸುವುದು. ನಿರ್ಧರಿಸುವುದು ಮತ್ತು ನಿಮ್ಮಲ್ಲಿ (ಏನನ್ನು ಮಾಡಬೇಕೊ ಅದನ್ನು) ಮಾಡುವುದು ಶ್ರೀಮಾತೆಯವರಿಗೆ ಬಿಟ್ಟದ್ದು.

*

ನನ್ನನ್ನು ನಾನು ತಮ್ಮ ಪಾದಗಳಿಗೆ ಅರ್ಪಿಸಿಕೊಳ್ಳುತ್ತೇನೆ. ನನ್ನನ್ನು ನಿಮ್ಮ ಮಗುವನ್ನಾಗಿ ಸ್ವೀಕರಿಸಿರಿ ಮತ್ತು ನನಗೆ ದೈವೀ ಪಥವನ್ನು ತೋರಿಸಿರಿ. ನನಗೆ ಮಾರ್ಗದರ್ಶನ ನೀಡಿ ಮತ್ತು ನನ್ನ ಸಾಧನೆಯಲ್ಲಿ ಮನೋವೃತ್ತಿ ಏನಾಗಿರುವುದೆಂದು ನನಗೆ ತಿಳಿಸಿರಿ.

ಅವನು ನಿಜವಾಗಿಯೂ ಸಾಧನೆಯ ಕರೆ ಎಂದು ಭಾವಿಸಿದರೆ, ಅವನು ಸಾಧನೆಯನ್ನು ಪ್ರಾರಂಭಿಸಬಹುದೆಂದು ಅವನಿಗೆ ಬರೆದು ತಿಳಿಸಿರಿ. ಮೊದಲಿಗೆ ಅವನು ಏನನ್ನೂ ಮಾಡಬೇಕಾಗಿಲ್ಲ, ಆದರೆ ದಿನಾಲೂ ಅಲ್ಪ ಸಮಯದವರೆಗೆ ಧ್ಯಾನಾವಸ್ಥೆಯಲ್ಲಿ ಕುಳಿತುಕೊಳ್ಳಬೇಕು ಮತ್ತು ಶ್ರೀಮಾತೆಯವರ ಪ್ರಭಾವಕ್ಕೆ ತನ್ನನ್ನು ತಾನು ತೆರೆದುಕೊಳ್ಳಲು ಪ್ರಯತ್ನಿಸಬೇಕು, ತೆರೆದುಕೊಳ್ಳುವಿಕೆಗೆ ಆಶಿಸುತ್ತ, ಪ್ರಜ್ಞೆಯ ನೈಜ ಬದಲಾವಣೆಗಾಗಿ, ಶಾಂತಿಗಾಗಿ, ಶುದ್ಧತೆಗಾಗಿ ಮತ್ತು ಸಾಧನೆಯನ್ನು ಮಾಡಲು ಶಕ್ತಿಗಾಗಿ, ಎಲ್ಲ ತೊಂದರೆಗಳ ಹಾಗೂ ತಪ್ಪುಗಳ ವಿರುದ್ಧ ಅವರ ರಕ್ಷಣೆಗಾಗಿ ಮತ್ತು ಯಾವಾಗಲೂ ಹೆಚ್ಚಾಗುವ ಭಕ್ತಿಗಾಗಿ ಪ್ರಯತ್ನಿಸಬೇಕು. ಅವನು ಹೀಗೆ ಯಶಸ್ವಿಯಾಗಿ ತನ್ನನ್ನು ತಾನು ತೆರೆದುಕೊಳ್ಳಬಹುದೇ ಎಂದು ಅವನು ಮೊದಲು ನೋಡಲಿ.

*

ಇಂದು, ತಿಳಿಸಾರು (soup) ಕುಡಿಯುವ ಸಮಯದಲ್ಲಿ ನಾನು ಏಕಾಗ್ರ ಸ್ಥಿತಿಯಲ್ಲಿದ್ದೆ. ಎಲ್ಲ ರೀತಿಯ ವಿಲಕ್ಷಣವಾದ ಚಲನೆಗಳು ಮೇಲೇಳುವುದನ್ನು ನಾನು ಅನುಭವಿಸಿದೆ, ಆದರೆ ಅವುಗಳು ಶ್ರೀಮಾತೆಯವರೊಡನೆ ಸಂಪರ್ಕದಲ್ಲಿ ಇರಲಿಲ್ಲ. ಶ್ರೀಮಾತೆಯವರ ಶಕ್ತಿ ಹಾಗೂ ಸ್ಪರ್ಶದ ಸಂಪರ್ಕ ಹೊಂದಲು ಕೆಲವೊಮ್ಮೆ ನಾನು ಏಕಾಗ್ರಸ್ಥಿತಿಯಲ್ಲಿದ್ದಾಗ, ನನ್ನ ತಲೆಯು ಒಂದು (ಇಟ್ಟಿಗೆಯಂತೆ) ಗಟ್ಟಿಯಾಗುವುದನ್ನು, ಸಂಕುಚಿತವಾಗುವುದನ್ನು, ಮತ್ತು ನನ್ನ ಮನಸ್ಸು ಶೂನ್ಯವಾಗುವುದನ್ನು ಅನುಭವಿಸಿದೆ. ಆದರೆ ಇದು ತೆರೆದುಕೊಳ್ಳುವಿಕೆಯನ್ನು ತಡೆಯುತ್ತದೆ ಮತ್ತು ಪ್ರಜ್ಞೆಯು ನಿಮ್ಮ ಸ್ತರಕ್ಕೆ ಹೋದಾಗ ಮೇಲಿನ ಹೊಡೆತಗಳಿಗೆ ಅನುಮತಿ ಕೊಡುತ್ತದೆ ಎಂದು ನನ್ನ ಎಣಿಕೆ.

ಗೊಂದಲಮಯವಾದ ಮಾನಸಿಕ ಮತ್ತು ಪ್ರಾಣಿಕ ಚಲನೆಗಳು, ಆಲೋಚನೆಗಳು, ಧ್ವನಿಗಳು ಇತ್ಯಾದಿಗಳಿಗೆ ಎಲ್ಲಾ ತೆರೆಯುವಿಕೆಗಳು ಇರಬೇಕು ಎಂಬಂತೆ ನೀವು

ಯಾವಾಗಲೂ ಬರೆಯುತ್ತೀರಿ. ಅದು ಹಾಗಲ್ಲ. ನಿಮ್ಮ ಎಲ್ಲಾ ಇರುವಿಕೆಯಲ್ಲಿ ನೀವು ಮುಕ್ತವಾಗಿರಬಹುದು, ಆದರೆ ಶ್ರೀಮಾತೆಯವರಿಗೆ ಮಾತ್ರ, ದೈವಿಕತೆಗೆ ಮಾತ್ರ ಮತ್ತು ಬೇರೆ ಯಾವುದಕ್ಕೂ ಅಲ್ಲ.

*

ಪ್ರಜ್ಞೆಯು ಶ್ರೀಮಾತೆಯವರ ಶಕ್ತಿಯಿಂದ ತುಂಬಿದಾಗ, ನೀನು ತಲೆಯಲ್ಲಿ ಭಾವಿಸಿದ ಸ್ಥಿತಿಯ ಬಗ್ಗೆ ಮಾತನಾಡುವಿ – ಒಂದು ಘನವಾದ (ಇಟ್ಟಿಗೆಯ), ಸಂಕುಚಿತ, ಶಾಂತ, ಗೊತ್ತು ಗುರಿಯಿಲ್ಲದ ಆಲೋಚನೆಗಳಿಂದ ಮತ್ತು ಚಲನೆಗಳಿಂದ ಮುಕ್ತವಾದ ಸ್ಥಿತಿ. ಆದರೆ ಇದನ್ನು ತಲೆಯಲ್ಲಿ ಮಾತ್ರವಲ್ಲದೆ ಪೂರ್ತಿ ದೇಹದಲ್ಲಿ ಮತ್ತು ದೇಹದ ಮೇಲೆ, ದೇಹದ ಸುತ್ತಲೂ ಮತ್ತು ದೇಹದ ಕೆಳಗಿನ ಎಲ್ಲಾ ಪ್ರಜ್ಞೆಯಲ್ಲಿಯೂ ಸಹ ಅನುಭವಿಸಬಹುದು. ಹಾಗಿರುವಾಗ ಎಲ್ಲಾ ಬಾಹ್ಯ ಅತಿಕ್ರಮಣಗಳು ಸ್ವಯಂಚಾಲಿತವಾಗಿ ತೊಲಗಿಸಲ್ಪಡುತ್ತವೆ ಅಥವಾ ಅವುಗಳು ಬಂದರೆ, ಅವುಗಳು ನಮಗೆ ಹಾಗೂ ದೇವರಿಗೆ ಸೇರಿದವುಗಳಲ್ಲವೆಂದು ಸುಲಭವಾಗಿ ತಿರಸ್ಕರಿಸಲ್ಪಡುತ್ತವೆ. ಒಬ್ಬ ವ್ಯಕ್ತಿಯು ದೈವೀ ಪ್ರಭಾವದಿಂದ ತುಂಬಿರುವಂತೆ, ಶ್ರೀಮಾತೆಯವರ ಶಕ್ತಿ ಮತ್ತು ಅವರ ಉಪಸ್ಥಿತಿಯಿಂದ ತುಂಬಿರುವಂತೆ ಭಾಸವಾಗುತ್ತದೆ, ಇದರಿಂದ ಬೇರೆ ಯಾವುದೂ ಆತನನ್ನು ಪ್ರವೇಶಿಸುವುದಿಲ್ಲ ಮತ್ತು ಮನಸ್ಸು, ಪ್ರಾಣ ಅಥವಾ ದೇಹವನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲ.

*

ರಾಮನಿಲ್ಲದೆ ಸೀತೆಯು ನೋವು ಅನುಭವಿಸಿದಳು, ಕೃಷ್ಣನಿಲ್ಲದೆ ಗೋಪಿಯರು ನೋವು ಅನುಭವಿಸಿದರು – ಅವರು ದೇವರಿಗಾಗಿ ಎಷ್ಟೊಂದು ಹಂಬಲಿಸುತ್ತಿದ್ದರು! ನೀವು ಮತ್ತು ಶ್ರೀಮಾತೆಯವರು ನಮ್ಮೊಂದಿಗಿರುವುದರಿಂದ ಇದು ನಮಗೆ ಸಂಭವಿಸುವುದಿಲ್ಲ. ಇದುವೇ ಸತ್ಯ ಸಂಗತಿಯಾಗಿದ್ದರೆ ಕೆಲವೊಮ್ಮೆ ನಾವು ಇನ್ನೂ ಏಕೆ ಅತೃಪ್ತರಾಗಿದ್ದೇವೆ? ಅತೃಪ್ತಿಯ ಭಾವನೆಗಳನ್ನು ಅಂತ್ಯಗೊಳಿಸಬೇಕಾದರೆ ಮನಸ್ಸಿನಲ್ಲಿ ಮತ್ತು ಪ್ರಾಣದಲ್ಲಿ ಸತ್ಯವನ್ನು ಹೇಗೆ ಸ್ಥಾಪಿಸುವುದು?

ನಿಮಗೆ ಸತ್ಯ ಸಂಗತಿ ಎಂದರೆ ನಿಮ್ಮಲ್ಲಿರುವ ದೈವಿಕತೆಯನ್ನು ಅನುಭವಿಸುವುದಾಗಿದೆ, ಶ್ರೀಮಾತೆಯವರಿಗೆ ತೆರೆದುಕೊಳ್ಳುವುದು ಮತ್ತು ನಿಮ್ಮ ಎಲ್ಲಾ ಕ್ರಿಯೆಗಳಲ್ಲಿ ನೀವು ಅವರನ್ನು ಅರಿತುಕೊಳ್ಳುವವರೆಗೆ ದೈವಿಕತೆಗಾಗಿ ಕೆಲಸ ಮಾಡುವುದಾಗಿದೆ. ಇಲ್ಲಿ ಭೌತಿಕ ಉಪಸ್ಥಿತಿಯು ಸಾಕಾಗುವುದಿಲ್ಲ; ನಿಮ್ಮ ಹೃದಯದಲ್ಲಿ ದೈವೀ ಉಪಸ್ಥಿತಿಯ ಈ ಪ್ರಜ್ಞೆ ಮತ್ತು ನಿಮ್ಮ ಕಾರ್ಯಗಳಲ್ಲಿ ದೈವೀ ಮಾರ್ಗದರ್ಶನವು ಇರಬೇಕು. ಈ ಚೈತ್ಯ ಪುರುಷನು ಸಂಪೂರ್ಣವಾಗಿ ಜಾಗೃತನಾಗಿದ್ದರೆ ಸುಲಭವಾಗಿ, ಕ್ಷಿಪ್ರವಾಗಿ, ಆಳವಾಗಿ ಅನುಭವಿಸಬಹುದು: ಒಮ್ಮೆ ಈ ಚೈತ್ಯ ಪುರುಷನು ಅದನ್ನು ಅನುಭವಿಸಿದ ನಂತರ, ಅದು ಮಾನಸಿಕ ಮತ್ತು ಪ್ರಾಣಕ್ಕೂ ಹರಡಬಹುದು.

*

ಚೈತ್ಯ ಪ್ರಜ್ಞೆಯಲ್ಲಿರುವ ಪ್ರಯೋಜನವೆಂದರೆ, ನೀವು ಸರಿಯಾದ ಅರಿವನ್ನು ಹೊಂದಿದ್ದೀರಿ ಮತ್ತು ಅದು ಶ್ರೀಮಾತೆಯವರ ಇಚ್ಛೆಗೆ ಅನುಗುಣವಾಗಿರುವುರಿಂದ ಬದಲಾವಣೆಯನ್ನು ಮಾಡಲು ನೀವು ಶ್ರೀಮಾತೆಯವರ ಬಲವನ್ನು ಕರೆಯಬಹುದು. ಮಾನಸಿಕ ಮತ್ತು ಪ್ರಾಣಿಕ ಸ್ತರದಲ್ಲಿರುವವರು, ಇದನ್ನು ಅಷ್ಟೊಂದು ಉತ್ತಮವಾಗಿ ಮಾಡಲು ಶಕ್ತರಲ್ಲ; ಅವರು ಹೆಚ್ಚಾಗಿ ತಮ್ಮ ವೈಯಕ್ತಿಕ ಪ್ರಯತ್ನವನ್ನು ಬಳಸಲು ಬದ್ಧರಾಗಿರುತ್ತಾರೆ ಮತ್ತು ಮನಸ್ಸು ಮತ್ತು ಪ್ರಾಣ ಶಕ್ತಿಯ ಅರಿವು ಮತ್ತು ಇಚ್ಛೆ ಮತ್ತು ಬಲವು ವಿಭಜನೆಯಾಗಿ ಕ್ಷೀಣಗೊಂಡಿದ್ದರಿಂದ ಮತ್ತು ಅಪೂರ್ಣವಾಗಿರುವುದರಿಂದ, ಮಾಡಿದ ಕೆಲಸವು ಅಪೂರ್ಣವಾಗಿರುತ್ತದೆ ಮತ್ತು ನಿರ್ಣಾಯಕವಾಗಿರುವುದಿಲ್ಲ. ಅರಿವು, ಇಚ್ಛೆ, ಬಲ, ಇವುಗಳು ಯಾವಾಗಲೂ ಒಟ್ಟಿಗೆ ಕೆಲಸ ಮಾಡುವುದು ಮತ್ತು ತಾನಾಗಿಯೇ ಪರಿಣಾಮಕಾರಿಯಾಗುವುದು ಸುಪ್ರಮಾನಸದಲ್ಲಿ ಮಾತ್ರ.

*

ನಿಮ್ಮನ್ನು ನೀವು ಶ್ರೀಮಾತೆಯವರಿಗೆ ಮುಕ್ತವಾಗಿರಿಸಿಕೊಳ್ಳಲು, ಅವರ ಇಚ್ಛೆಗೆ ವಿರುದ್ಧವಾದ ಎಲ್ಲವನ್ನೂ ತಿರಸ್ಕರಿಸಲು ಮತ್ತು ಅವರು ನಿಮ್ಮಲ್ಲಿ ಕೆಲಸ ಮಾಡಲು, ನೀವು ಕೇವಲ ಹಂಬಲಿಸಬೇಕು – ಅವರಿಗಾಗಿ ನಿಮ್ಮ ಎಲ್ಲಾ ಕೆಲಸಗಳನ್ನು ಸಹ ಮಾಡುವುದು ಮತ್ತು ಅವರ ಬಲದ ಮೂಲಕ ನೀವು ಅದನ್ನು ಮಾಡಬಹುದು

ಎಂಬ ನಂಬಿಕೆಯಿಂದ. ನೀವು ಈ ರೀತಿಯಲ್ಲಿ ಮುಕ್ತವಾಗಿದ್ದರೆ ನಿಮಗೆ ಸರಿಯಾದ ಸಮಯದಲ್ಲಿ ಜ್ಞಾನ ಮತ್ತು ಸಾಕ್ಷಾತ್ಕಾರವು ಲಭಿಸುತ್ತದೆ.

*

ಶರಣಾಗತಿಯ ಸರಿಯಾದ ಮನೋಭಾವದಲ್ಲಿ ನಿಮ್ಮನ್ನು ನೀವು ಶ್ರೀಮಾತೆಯವರಿಗೆ ಮುಕ್ತವಾಗಿರಿಸಿಕೊಳ್ಳಿ ಮತ್ತು ನಿಮ್ಮಲ್ಲಿ ನಿಮಗೆ ಬೇಕಾದುದನ್ನು ಕ್ರಮೇಣವಾಗಿ ನೀವು ಅವರಿಂದ ಪಡೆದುಕೊಳ್ಳುವಿರಿ.

*

> *ನಾನು ಒಂದು ತಿಂಗಳ ಹಿಂದೆ ಈ ಕಠಿಣ ಯೋಜನೆಯ (ವ್ಯಕ್ತಿಗತ ಬೆಳವಣಿಗೆಯ) ಕೆಲಸವನ್ನು ಪ್ರಾರಂಭಿಸಿದೆ. ಮೊದಲಿಗೆ ನಾನು ಕೆಲಸದ ಸಾಮಾನ್ಯ ಕಲ್ಪನೆಯನ್ನು ಮಾತ್ರ ಹೊಂದಿದ್ದೆ. ನಂತರ, ಅಗತ್ಯವಾದ ಶಕ್ತಿಯನ್ನು ಹಾಗೂ ಅಭಿರುಚಿಯನ್ನು ಹೊಂದಿದೆ. ಈಗ ಶ್ರೀಮಾತೆಯವರ ನಾಲ್ಕನೇ ಅಂಶ – ವಿಸ್ತಾರದಲ್ಲಿ ಶ್ರೀಮಂತಿಕೆ, ಸಂಪೂರ್ಣತೆ, ಪರಿಪೂರ್ಣತೆ – ಬರುತ್ತಿದೆ ಎಂದು ನಾನು ಭಾವಿಸುತ್ತೇನೆ. ನಾನು ಹೆಚ್ಚಿನ ಸಲಹೆಗಳಿಗಾಗಿ ಕಾಯುತ್ತಿದ್ದೇನೆ.*

ಇದು ತುಂಬಾ ಚೆನ್ನಾಗಿದೆ. ಶ್ರೀಮಾತೆಯವರಿಗೆ ಅಲೌಕಿಕವಾಗಿ ತೆರೆದುಕೊಳ್ಳುವ ಮೂಲಕ, ಕಾರ್ಯಕ್ಕೆ ಅಥವಾ ಸಾಧನೆಗೆ ಅಗತ್ಯವಿರುವ ಎಲ್ಲವೂ ಹಂತಹಂತವಾಗಿ ಅಭಿವೃದ್ಧಿ ಹೊಂದುತ್ತದೆ, ಅದು ಮುಖ್ಯ ರಹಸ್ಯಗಳಲ್ಲಿ ಒಂದಾಗಿದೆ, ಸಾಧನೆಯ ಪ್ರಮುಖ ರಹಸ್ಯ.

*

ನಿಮ್ಮಲ್ಲಿ ಮುಕ್ತವಾಗದ ಯಾವುದೇ ಭಾಗವಿಲ್ಲ, ಆದರೆ ನೀವು ಆ ತೆರೆಯುವಿಕೆಯನ್ನು ಯಾವಾಗಲೂ ವಿಶಾಲವಾಗಿಸಬೇಕು ಮತ್ತು ಸ್ವೀಕರಿಸುವುದನ್ನು ಹೆಚ್ಚು ಪೂರ್ಣಗೊಳಿಸಬೇಕು; ಆದರೆ ನೀವು ಎಲ್ಲಾ ಸಮಯದಲ್ಲೂ ಶ್ರೀಮಾತೆಯವರ ಬಲವನ್ನು ಸ್ಮರಿಸಿಕೊಂಡು ಕರೆದರೆ ಮತ್ತು ನೀವು ಈ ಹಿಂದೆ ಇದ್ದಂತೆ ಮತ್ತು ಈಗಿರುವಂತೆ ವಿಶ್ವಾಸದಿಂದ, ಜಾಗರೂಕತೆಯಿಂದ ಮತ್ತು ಭಕ್ತಿಯಿಂದ ಇದ್ದರೆ, ಅದು ಕೂಡ ಕ್ರಮೇಣ ಈಡೇರುತ್ತದೆ.

*

ನಿನ್ನ ಪತ್ರಕ್ಕೆ ಉತ್ತರವಾಗಿ, ನೀನು ಶ್ರೀಮಾತೆಯವರನ್ನು ಕುರಿತು ಹೃದಯದಲ್ಲಿ ಧ್ಯಾನಿಸಬಹುದು ಮತ್ತು ಅವರನ್ನು ಬೇಡಿಕೊಳ್ಳಬಹುದು ಎಂದು ಶ್ರೀ ಅರವಿಂದರು ಹೇಳುತ್ತಾರೆ – ಅವರನ್ನು ಸ್ಮರಿಸು ಮತ್ತು ನಿನ್ನೆಲ್ಲ ಜೀವನವನ್ನು, ಯೋಚನೆಗಳನ್ನು ಮತ್ತು ಕ್ರಿಯೆಗಳನ್ನು ಅವರಿಗೆ ಸಮರ್ಪಿಸು ಅಥವಾ ನಿವೇದಿಸು. ನೀನು ಇಷ್ಟಪಟ್ಟರೆ, ನೀನು ಅವರ ಹೆಸರಿನ ಜಪ ಮಾಡಬಹುದು. ನಿನ್ನನ್ನು ಶುದ್ಧೀಕರಿಸಲು ಮತ್ತು ನಿನ್ನ ಸ್ವಭಾವವನ್ನು ಬದಲಾಯಿಸಲು ನೀನು ಅವರನ್ನು ಬೇಡಿಕೊಳ್ಳಬಹುದು.

ಅಥವಾ ನೀವು ನಿಮ್ಮ ಮೇಲಿನಿಂದ (ಅದು ಯಾವಾಗಲೂ ಇರುವಲ್ಲಿಂದ) ಮೊದಲು ಶ್ರೀಮಾತೆಯವರ ಸ್ತಬ್ಧತೆ ಮತ್ತು ಶಾಂತಿಯನ್ನು, ನಂತರ ಅವರ ಪ್ರಭಾವ ಮತ್ತು ಬೆಳಕನ್ನು ಮತ್ತು ಅವರ ಆನಂದವನ್ನು ಕೆಳಗೆ ಕರೆಯಲು ನಿಮ್ಮ ಗಮನವನ್ನು ಕೇಂದ್ರೀಕರಿಸಬಹುದು. ಅದು ಯಾವಾಗಲೂ ತಲೆಯ ಮೇಲಿರುತ್ತದೆ – ಆದರೆ ಮಾನವ ಮನಸ್ಸಿಗಿಂತ ಉನ್ನತ ಪ್ರಜ್ಞೆ – ಹಂಬಲದಿಂದ ಮತ್ತು ಏಕಾಗ್ರತೆಯಿಂದ ಅದು ಜಾಗೃತಗೊಳ್ಳಬಹುದು ಮತ್ತು ಅಧರವು (ಮೂಲವು) ಅದಕ್ಕೆ ತೆರೆದುಕೊಳ್ಳಬಹುದು, ಹಾಗಾಗುವುದರಿಂದ ಅದು ಕೆಳಗಿಳಿದು ಮನಸ್ಸು, ಜೀವ ಮತ್ತು ದೇಹವನ್ನು ಪ್ರವೇಶಿಸುತ್ತದೆ.

*

ಒಬ್ಬ ಸಾಧಕನು ಬಹಳ ಸಮಯದ ನಂತರವೂ ತನ್ನ ಸ್ವಭಾವದಲ್ಲಿನ ದೊಡ್ಡ ಅಡೆತಡೆಗಳಿಂದಾಗಿ ತನ್ನನ್ನು ತಾನು ಸಂಪೂರ್ಣವಾಗಿ ಮತ್ತು ನಿರಂತರವಾಗಿ ಶ್ರೀಮಾತೆಯವರಿಗೆ ತೆರೆದುಕೊಳ್ಳಲು ಸಾಧ್ಯವಾಗದಿದ್ದರೆ, ಅವನು ಮಧ್ಯದಲ್ಲಿ ಸಾಯುತ್ತಾನೆಯೇ ಮತ್ತು ಶ್ರೀಮಾತೆಯವರಿಂದ ಸ್ವೀಕರಿಸಲ್ಪಡುವುದಿಲ್ಲವೇ?

ಇಂತಹ ಪ್ರಶ್ನೆಗೆ ಯಾವುದೇ ಅರ್ಥವಿಲ್ಲ. ಇಲ್ಲಿ ಯೋಗವನ್ನು ಯಾರು ಅನುಸರಿಸುತ್ತಾರೊ ಶ್ರೀಮಾತೆಯವರು ಅವರನ್ನು ಸ್ವೀಕರಿಸುತ್ತಾರೆ – "ಸ್ವೀಕರಿಸಲಾಗಿದೆ" ಎಂದರೆ "ಯೋಗಕ್ಕೆ ಸೇರಿಸಿಕೊಳ್ಳಲಾಗಿದೆ, ಶಿಷ್ಯನನ್ನಾಗಿ ಸ್ವೀಕರಿಸಲಾಗಿದೆ" ಎಂದು ಅರ್ಥ. ಆದರೆ ಯೋಗದಲ್ಲಿನ ಪ್ರಗತಿ ಮತ್ತು ಯೋಗದಲ್ಲಿನ ಸಿದ್ಧಿಯು ತೆರೆದುಕೊಳ್ಳುವಿಕೆಯ ಮಟ್ಟವನ್ನು ಅವಲಂಬಿಸಿರುತ್ತದೆ.

*

ಶ್ರೀಮಾತೆಯವರಿಗೆ (ನಿಮ್ಮ ಹೃದಯ ಹಾಗೂ ಮನಸ್ಸನ್ನು) ತೆರೆದುಕೊಳ್ಳಿ – ನಿಮ್ಮಷ್ಟಕ್ಕೆ ನೀವು ಬದಲಾಯಿಸಬಹುದಾದ ಗುಣಗಳ ಲೋಪಗಳನ್ನು ಮತ್ತು ದೋಷಗಳನ್ನು ಆಚೆಗೆ ಎಸೆಯಿರಿ – ಶ್ರೀಮಾತೆಯವರ ಶಕ್ತಿಯನ್ನು ನಿಮ್ಮಲ್ಲಿ ಕೆಲಸ ಮಾಡಲು ಅನುಮತಿಸಿ – ಆಗ ಈ ತೊಂದರೆಗಳು ಕಣ್ಮರೆಯಾಗುವಂತೆ ಮಾಡಬಹುದು, ಆಗ ಮನಸ್ಸು ತೆರೆದುಕೊಳ್ಳುತ್ತದೆ.

> *ಒಂದು ಮೋಡವು ನನ್ನನ್ನು ಆವರಿಸುತ್ತದೆ. ನನ್ನನ್ನು ರಕ್ಷಿಸಿರಿ ಮತ್ತು ನನಗೆ ಬಲವನ್ನು ದಯಪಾಲಿಸಿರಿ. ಶ್ರೀಮಾತೆವರಿಗೆ ನನ್ನನ್ನು ನಾನು ತೆರೆದುಕೊಳ್ಳಲು ಬಿಡಿ.*

ಶ್ರೀಮಾತೆಯವರಿಗೆ ಸಂಪೂರ್ಣವಾಗಿ ಮುಕ್ತವಾಗಿರಲು, ನೀವು ಒಳಗೆ ಮತ್ತು ಹೊರಗೆ ಎರಡರಲ್ಲೂ ಮುಕ್ತವಾಗಿರಬೇಕು. ನೀವು ನೇರ ಹಾಗೂ ಸರಳವಾಗಿರಬೇಕು ಮತ್ತು ಶ್ರೀಮಾತೆಯವರಿಗೆ ಎಲ್ಲವನ್ನೂ ಹೇಳಬೇಕು – ನಿಮ್ಮೊಳಗಿರುವುದೆಲ್ಲವನ್ನೂ ಅವರಿಗೆ ನಿರ್ಭೀತವಾಗಿ ತೋರಿಸಲು ಹಿಂಜರಿಯಬೇಡಿ. ಅದು ನೀವು ಸಂಪೂರ್ಣ ಮುಕ್ತವಾಗಿರಲು ಮತ್ತು ಶ್ರೀಮಾತೆಯವರು ನಿಮಗೆ ಹೆಚ್ಚಿಗೆ ಸಹಾಯ ಮಾಡಲೂ ಸಹ ಸಾಧ್ಯವಾಗಿಸುತ್ತದೆ.

*

> *ಧ್ಯಾನಕ್ಕೆ ಕುಳಿತುಕೊಳ್ಳಲು ನನಗೆ ಹೆಚ್ಚು ಸಮಯ ದೊರೆಯುತ್ತಿಲ್ಲ, ಆದರೆ ಪ್ರಶಾಂತತೆಯು ನನ್ನ ಕಾರ್ಯದುದ್ದಕ್ಕೂ ಉಳಿದುಕೊಂಡು ಬರುತ್ತದೆ. ನಾನು ಧ್ಯಾನಕ್ಕೆ ಸಮಯವನ್ನು ಹೊಂದಿಸಲಾರನೆಂದರೆ ನಾನೇನು ಮಾಡಬೇಕು?*

ನಿಮ್ಮನ್ನು ನೀವು ಮುಕ್ತವಾಗಿರಿಸಿಕೊಳ್ಳಿ, ಯಾವಾಗಲೂ ಶ್ರೀಮಾತೆಯವರನ್ನು ಸ್ಮರಿಸಿರಿ – ನಿಮ್ಮ ಕಾರ್ಯದಲ್ಲಿ ಸಹಾಯಕ್ಕಾಗಿ ಮತ್ತು ಮಾರ್ಗದರ್ಶನಕ್ಕಾಗಿ ಶ್ರೀಮಾತೆಯವರನ್ನು ಬೇಡಿಕೊಳ್ಳಿ. ನೀವು ಎಂತಹ ಸ್ಥಿತಿಯನ್ನು ಹೊಂದಬೇಕೆಂದರೆ, ಆ ಸ್ಥಿತಿಯಲ್ಲಿ ಪ್ರಶಾಂತತೆಯು ಯಾವಾಗಲೂ ಇರುವುದು ಮಾತ್ರವಲ್ಲದೆ, ಕೆಲಸದಲ್ಲಿ, ವಿರಾಮದಲ್ಲಿ ಮತ್ತು ಧ್ಯಾನದಲ್ಲಿಯೂ ಸಾಧನೆಯು ಸಂಭವಿಸುತ್ತಿರಬೇಕು.

*

ಶ್ರೀಮಾತೆಯವರು, ಒಮ್ಮೆ ನಮ್ಮನ್ನು ಶಿಷ್ಯರನ್ನಾಗಿ ಸ್ವೀಕರಿಸಿದರೆ, ನಾವು ನೇರವಾಗಿ ಅವರಲ್ಲಿಗೆ ಹೋಗಬಹುದೆಂದು ನಾನು ಅರ್ಥಮಾಡಿಕೊಂಡಿದ್ದೇನೆ. ಹೃದಯದಲ್ಲಿ ನಾವು ಅವರನ್ನು ಕಾಣದಿದ್ದರೆ ವ್ಯಥೆ ಪಡಬಾರದು. ನಾವು ಅವರೊಂದಿಗೆ ಆಶ್ರಮದಲ್ಲಿ ಮಾತ್ರ ಉಳಿದುಕೊಳ್ಳಬೇಕು.

ಇಲ್ಲ, ಆಶ್ರಮದಲ್ಲಿರುವುದು ಸಾಕಾಗುವುದಿಲ್ಲ – ನಾವು ಶ್ರೀಮಾತೆಯವರಿಗೆ ತೆರೆದುಕೊಳ್ಳಬೇಕು ಮತ್ತು ಪ್ರಪಂಚದಲ್ಲಿ ನಾವು ಆಡುತ್ತಿರುವ ಕೆಸರಾಟವನ್ನು (ಕೊಳಕಾದ ಕ್ರಿಯೆಗಳನ್ನು) ಬಿಟ್ಟು ಬಿಡಬೇಕು.

*

ಪ್ರಸ್ತುತ ನನ್ನ ಕೆಲಸವನ್ನು ತ್ಯಜಿಸಬೇಕೆ ಅಥವಾ ಅದನ್ನು ಬದಲಾಯಿಬೇಕೆ ಎನ್ನುವುದನ್ನು ನಾನು ನಿರ್ಧರಿಸಲು ಸಾಧ್ಯವಾಗಲಿಲ್ಲ. ನಂತರ, ಧ್ಯಾನ ಮಾಡುವುದಕ್ಕಾಗಿ ನಾನು ಕೆಲಸವನ್ನು ಬಿಡಬೇಕೆಂದು ಯೋಚಿಸಿದೆ. ಆದರೆ ನನಗೆ ಉತ್ತಮವಾದುದು ಏನೆಂದು ಗೊತ್ತಿಲ್ಲ. ನಿಮಗೆ ಮಾತ್ರ ಎಲ್ಲವೂ ಗೊತ್ತು.

ಈ ಸಂಗತಿಗಳ ಬಗ್ಗೆ ಮನಸ್ಸನ್ನು ತರಬೇತುಗೊಳಿಸುವುದು ಮತ್ತು ಅವುಗಳನ್ನು ಸಾಮಾನ್ಯ ಮನಸ್ಸಿನೊಂದಿಗೆ ಹೊಂದಿಸಲು ಪ್ರಯತ್ನಿಸುವುದು ತಪ್ಪು. ನಿಮ್ಮ ಪ್ರಜ್ಞೆಯು ಸಿದ್ಧವಿದ್ದಾಗ, ಶ್ರೀಮಾತೆಯವರಲ್ಲಿ ಭರವಸೆಯನ್ನು ಹೊಂದುವುದರಿಂದ ನಮಗೆ ಅಗತ್ಯವಾದ ತೆರೆದುಕೊಳ್ಳುವಿಕೆಯು ಬರುತ್ತದೆ. ಧ್ಯಾನಕ್ಕೆ ಸಮಯ ಹಾಗೂ ಚೇತನವು ಬೇಕೆಂದರೆ ಈಗಿರುವ ನಿಮ್ಮ ಕೆಲಸವನ್ನು ಅಣಿಗೊಳಿಸುವುದರಲ್ಲಿ ಹಾನಿ ಇಲ್ಲ, ಆದರೆ ಅಗತ್ಯವಿರುವಂಥದ್ದು ಬರಬೇಕೆಂದರೆ, ಅದು ಧ್ಯಾನದಿಂದ ಮಾತ್ರವಲ್ಲ. ಅದು ಶ್ರೀಮಾತೆಯವರಲ್ಲಿನ ನಂಬಿಕೆಯಿಂದ ಮತ್ತು ಅವರಿಗೆ ಮುಕ್ತವಾಗಿರುವುದರಿಂದ ಮಾತ್ರ ಸಾಧ್ಯ.

*

ಮೊದಲಿನಿಂದಲೇ ತೆರೆಯುವಿಕೆಯು ಯಾವಾಗಲೂ ಪೂರ್ಣವಾಗಿರುವುದಿಲ್ಲ – ನಮ್ಮ ಅಸ್ತಿತ್ವದ ಒಂದು ಭಾಗ ಮುಕ್ತವಾಗುತ್ತದೆ, ಪ್ರಜ್ಞೆಯ ಕೆಲವು ಭಾಗಗಳು ಇನ್ನೂ

ಮುಚ್ಚಿಕೊಂಡಿರುತ್ತವೆ ಅಥವಾ ಅರ್ಧ ತೆರೆದುಕೊಂಡಿರುತ್ತವೆ – ಎಲ್ಲವೂ ತೆರೆದುಕೊಳ್ಳುವವರೆಗೆ ನಾವು ಹಂಬಲಿಸಬೇಕು. ಅತ್ಯಂತ ಉತ್ತಮ ಮತ್ತು ಪ್ರಭಾವಿ ಸಾಧಕನಾಗಿದ್ದರೂ, ಸಂಪೂರ್ಣವಾಗಿ ತೆರೆದುಕೊಳ್ಳಲು ಸಮಯ ತೆಗೆದುಕೊಳ್ಳುತ್ತದೆ; ಯಾವುದೇ ಪ್ರಯಾಸವಿಲ್ಲದೆ ಒಮ್ಮೆಗೇ ಎಲ್ಲವನ್ನೂ ತ್ಯಜಿಸಲು ಸಾಧ್ಯವಾದವರು ಯಾರೂ ಇಲ್ಲ. ಆದ್ದರಿಂದ ನೀವು ಕರೆದರೆ, ನೀಮ್ಮ ಕರೆಯು ಕೇಳಿಸಿಕೊಳ್ಳಲ್ಪಡುವುದಿಲ್ಲ ಎಂದು ಭಾವಿಸಲು ಯಾವುದೇ ಕಾರಣವಿಲ್ಲ – ಶ್ರೀಮಾತೆಯವರು ಮಾನವ ಸ್ವಭಾವದ ತೊಂದರೆಗಳನ್ನು ತಿಳಿದಿದ್ದಾರೆ ಮತ್ತು ನಿಮಗೆ ಸಹಾಯ ಮಾಡುತ್ತಾರೆ. ಯಾವಾಗಲೂ ತಾಳ್ಮೆಯಿಂದಿರಿ, ಯಾವಾಗಲೂ ಶ್ರೀಮಾತೆಯವರ ಅನುಗ್ರಹಕ್ಕಾಗಿ ಬೇಡಿಕೊಳ್ಳಿ ಆಗ ಪ್ರತಿ ಕಷ್ಟದ ನಂತರ ಪ್ರಗತಿ ಇರುತ್ತದೆ.

*

ಸುಪ್ರಮಾನಸದ ಅವರೋಹಣಕ್ಕಾಗಿ ನಾವು ಯಾವ ಸಮಸ್ಥಿತಿಯನ್ನು ಅಥವಾ ವಿಧಾನವನ್ನು ಇಟ್ಟುಕೊಳ್ಳಬೇಕು?

ಸಮಸ್ಥಿತಿ ಅಥವಾ ವಿಧಾನಕ್ಕೆ ಸಂಬಂಧಿಸಿದಂತೆ – ನೀವೇ ತೊಂದರೆ ಮಾಡಿಕೊಳ್ಳುವ ಅಗತ್ಯವಿಲ್ಲ. ಸಂಪೂರ್ಣ ನಂಬಿಕೆ, ತೆರೆದುಕೊಳ್ಳುವಿಕೆ, ಶ್ರೀಮಾತೆಯವರಿಗೆ ಸ್ವಯಂ ಸಮರ್ಪಣೆ ಇವುಗಳು ಎಲ್ಲ ಹಂತದಲ್ಲೂ ಅಗತ್ಯವಾದ ಒಂದೇ ಒಂದು ಷರತ್ತಾಗಿದೆ.

*

ತಪ್ಪು ಕ್ರಿಯೆಗಳಿಂದ ಹೊರಬರಲು ಅತ್ಯುತ್ತಮ ಜಾಗ ಆಶ್ರಮವೆಂದು ನನಗೆ ಅನಿಸುತ್ತೆ, ಶ್ರೀಮಾತೆಯವರ ಆಶೀರ್ವಾದ, ಸಹಾಯ, ರಕ್ಷಣೆ ಮತ್ತು ಭೌತಿಕ ಸಾಮಿಪ್ಯ ಎಲ್ಲವೂ ಲಭಿಸುತ್ತವೆ.

ನಮ್ಮನ್ನು ನಾವು ಶ್ರೀಮಾತೆಯವರಿಗೆ ತೆರೆದುಕೊಳ್ಳುವುದು ಮಾತ್ರ ಸತ್ಯ ಸಂಗತಿಯಾಗಿದೆ. ಇಲ್ಲಿರುವುದು ಮತ್ತು ಶ್ರೀಮಾತೆಯವರಿಗೆ ತೆರೆದುಕೊಳ್ಳದೇ ಇರುವುದು ಮತ್ತು ಇನ್ನೊಂದರ ನಿಯಂತ್ರಣದಲ್ಲಿರುವುದು ಸಹಾಯ ಮಾಡುವುದಿಲ್ಲ.

*

ಮಾಡಬೇಕಾದದ್ದು ಅದನ್ನೇ. ಶ್ರೀಮಾತೆಯವರಲ್ಲಿ ಭರವಸೆ ಇಟ್ಟುಕೊಳ್ಳಿ ಮತ್ತು ಅವರಿಗೆ ಯಾವಾಗಲೂ ಮುಕ್ತವಾಗಿರಲು ಮತ್ತು ಸಾಧ್ಯವಾದಷ್ಟು ಶಾಂತವಾಗಿ, ಆತ್ಮವಿಶ್ವಾಸದಿಂದ ಇರಲು ಮಾತ್ರ ಬಯಸಿರಿ. ಮಾಡಬೇಕಾದ ಕಾರ್ಯ ಬಹಳ ದೊಡ್ಡದಾಗಿದೆ, ಅದು ಹೇಗೆ ಮಾಡಲ್ಪಡಬೇಕು ಎಂಬುದು ಬಾಹ್ಯ ಮನಸ್ಸಿಗೆ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ; ಜ್ಞಾನ ಮತ್ತು ಅನುಭವವನ್ನು ವೃದ್ಧಿಸುವ ಮೂಲಕ ಮಾತ್ರ ಒಂದು ದಿನ ಅದು ಅರ್ಥಮಾಡಿಕೊಳ್ಳಲು ಪ್ರಾರಂಭಿಸುತ್ತದೆ – ತನ್ನಷ್ಟಕ್ಕೆ ತಾನು ಅದಕ್ಕೆ ಮಾಡಲು ಅದು ತುಂಬಾ ದೊಡ್ಡದು ಮತ್ತು ಕಷ್ಟವಾದದ್ದಾಗಿದೆ, – ಅದು ಕೇವಲ ತನ್ನ ಸಿದ್ಧತೆಯ, ಆಕಾಂಕ್ಷೆಯ, ನಂಬಿಕೆಯ, ಶಾಂತತೆಯ ಮೂಲಕ ಕೆಲಸ ಮಾಡುತ್ತಿರುವ ಪ್ರಭಾವಕ್ಕೆ ಸಹಾಯ ಮಾಡಬಹುದು. ಆದರೆ ಯಾವುದೇ ಸಾಧಕನಲ್ಲಿ ಈ ಸಂಗತಿಗಳು ನಿರಂತರವಾಗಿರುವುದಿಲ್ಲ – ಆಕಾಂಕ್ಷೆಯು ನಿಂತು ಹೋಗುತ್ತದೆ, ನಂಬಿಕೆಯು ಕ್ಷೀಣಿಸುತ್ತದೆ, ಶಾಂತತೆಯು ಭಂಗಗೊಳ್ಳುತ್ತದೆ ಅಥವಾ ಕಂಪಿಸುತ್ತದೆ – ಆದರೆ ಶ್ರೀಮಾತೆಯವರು ಕಾರ್ಯ ಮಾಡುತ್ತಿರುತ್ತಾರೆ ಮತ್ತು ನಾವು ನಿರಂತರವಾಗಿ ಶ್ರಮಿಸಬೇಕು, – ಅಂತಿಮವಾಗಿ, ಪರಿಶ್ರಮವು ಫಲಿತಾಂಶದಿಂದ ಸಮರ್ಥಿಸಲ್ಪಡುತ್ತದೆ. ಮಾರ್ಗ ಮಧ್ಯೆ ಬಿಟ್ಟುಕೊಡುವುದನ್ನು ನಾವು ಎಂದಿಗೂ ಮಾಡಬಾರದು.

*

ಮನಸ್ಸು ಹೆಚ್ಚು ಹೆಚ್ಚು ಬಾಹ್ಯ ವಸ್ತುಗಳಿಂದ ದೂರ ಹೋಗುತ್ತಿದೆ ಮತ್ತು ಸಂಪೂರ್ಣವಾಗಿ ಶ್ರೀಮಾತೆಯವರ ಕಡೆಗೆ ತಿರುಗಬೇಕೆನ್ನುವ ಇಚ್ಛೆಯು ಬೆಳೆಯುತ್ತಿದೆ, ಇದು ತುಂಬಾ ಒಳ್ಳೆಯದು, ಏಕೆಂದರೆ ಅದು ಪ್ರಥಮ ಅಗತ್ಯವಾಗಿದೆ. ಹಾಗೆ ತಿರುಗಿದ ಮತ್ತು ಸಂಪೂರ್ಣವಾಗಿ ತೆರೆದಿರುವ ಸ್ಥಿತಿಯು ನಂತರ ಹೆಚ್ಚು ಸುಲಭವಾಗಿ ಬೆಳೆಯಬಹುದು. ಆರಂಭದ ಎರಡು ನಿಮಿಷಗಳ ಹೊಳಹು ನಿಮಗೆ ಅದು ಹೇಗೆ ಬರುತ್ತದೆ ಎಂಬುದನ್ನು ತೋರಿಸಿತು; ಏಕೆಂದರೆ ಅದು ಆ ರೀತಿ ಬರುತ್ತದೆ, ಮೊದಲು ಕ್ಷಣಿಕ ದರ್ಶನದೊಂದಿಗೆ, ಆದರೆ ನಂತರ ಅದು ಶಾಶ್ವತತೆಗೆ ಸಿದ್ಧವಾಗುವವರೆಗೆ ಹಿಡಿದಿಟ್ಟುಕೊಳ್ಳುತ್ತದೆ ಮತ್ತು ಕಾಲಾವಧಿಯಲ್ಲಿ ಬೆಳೆಯುತ್ತದೆ. ಇದು ಪ್ರಕೃತಿಯಲ್ಲಿ ಹೊಸ ಜನ್ಮವಾಗಿದೆ ಮತ್ತು ಅದು ಒಂದೇ ಬಾರಿಗೆ ಬರಲು ಸಾಧ್ಯವಿಲ್ಲ, ಆದರೆ ಒಮ್ಮೆ ಪ್ರಾರಂಭವಾದರೆ ಅದು

ಪರಿಪೂರ್ಣವಾಗುವವರೆಗೆ ಬೆಳೆಯುತ್ತದೆ. ಖಂಡಿತ, ಪ್ರಜ್ಞೆಯು ಸ್ಥಿರವಾಗಿ ಎಷ್ಟು ಶಾಂತವಾಗಿರಬಲ್ಲದೋ, ಇದಕ್ಕೆ ಈ ಸ್ಥಿತಿ ಬರಲು ಹೆಚ್ಚು ಅನುಕೂಲಕರವಾಗುತ್ತದೆ.

ನಾವು ಮೊದಲು ಏನು ಮಾಡಬಾರದೆಂದರೆ, ಯಾವುದೇ ರೀತಿಯಲ್ಲಿ ಶ್ರೀಮಾತೆಯವರಿಗೆ ನಾವು ತೆರೆದುಕೊಳ್ಳದೇ ಇರಬಾರದು. ನಮ್ಮಲ್ಲಿ ನಡೆಯುತ್ತಿರುವುದನ್ನು ಶ್ರೀಮಾತೆಯವರಿಂದ ಮುಚ್ಚಿಟ್ಟರೆ, ಏನೋ ಒಂದು ಸಂಗತಿಯು ಮುಚ್ಚಿಹೋಗುತ್ತದೆ. ಎಕ್ಸ (X) ಎನ್ನುವವರು ಮಾಡುತ್ತಿರುವ ತಪ್ಪು ಇದೇ ಆಗಿದೆ. ಮೊದಲು ಅವರು ತುಂಬಾ ಮುಕ್ತವಾಗಿದ್ದರು ಮತ್ತು ಯಾವುದೇ ಸಂಕೋಚ ಇಲ್ಲದೆ ಇದ್ದರು, ಮತ್ತು ಕಷ್ಟ ಬಂದಾಗಲೆಲ್ಲ ಅವರಿಗೆ ಪೂರ್ಣ ಸಹಾಯ ಸಿಗುತ್ತಿತ್ತು. ಶ್ರೀಮಾತೆಯವರು ಅವರಿಗೆ ಸಂಪೂರ್ಣವಾಗಿ ಮುಕ್ತವಾಗಿರಲು ಮತ್ತು ಏನನ್ನೂ ಮುಚ್ಚಿಡದಂತೆ ಹೇಳಿದ್ದರು; ಅವರು ಹಾಗೆ ಮಾಡಿದರೆ, ಅವರು ಬೇಗನೆ ಸುಧಾರಿಸಿಕೊಳ್ಳುತ್ತಾರೆ.

ಶ್ರೀಮಾತೆಯವರಿಗೆ ಎಲ್ಲವನ್ನೂ ತಿಳಿಯುವ ಶಕ್ತಿ ಮಾತ್ರವಲ್ಲ, ಅವರು ನಿರ್ಧರಿಸಿದರೆ ಎಲ್ಲವನ್ನೂ ಮಾಡುವ ಶಕ್ತಿಯೂ ಇದೆ – ಆದರೆ ಅವರು ಹಾಗೆ ಮಾಡಿದರೆ, ಸಾಧನೆ ಎನ್ನುವುದು ಎಲ್ಲಿರುತ್ತದೆ? ನಾವೆಲ್ಲರೂ ಅವರ ಕೈಯಲ್ಲಿ ಚಲಿಸುವ ಬೊಂಬೆಗಳು ಮಾತ್ರ. ಸಾಧಕನು ಕೆಲವು ನಿಯಮಗಳನ್ನು ಈಡೇರಿಸಲೇಬೇಕು, ಮತ್ತು ದೈವಿಕ ಶಕ್ತಿಯು ತನ್ನ ಪ್ರಭಾವ ಮತ್ತು ಜ್ಞಾನವನ್ನು ಮರೆಮಾಚುತ್ತದೆ, ಇದರಿಂದ ಸಾಧಕನಿಗೆ ಪ್ರೀತಿಸಲು, ಬಯಸಲು, ಯೋಚಿಸಲು, ಕಾರ್ಯವೆಸಗಲು ಮತ್ತು ನೈಜ ಪ್ರಜ್ಞೆಯಲ್ಲಿ ಬೆಳೆಯಲು ಅವಕಾಶ ಸಿಗುತ್ತದೆ.

ಶ್ರೀಮಾತೆಯವರಿಗೆ, ಇನ್ನು ಎಂದಿಗೂ ಬರೆಯಲು ಸಮಯವಿಲ್ಲ ಅದಕ್ಕಾಗಿ ಅವರು ಅದನ್ನು ನನಗೆ ಬಿಟ್ಟಿದ್ದಾರೆ. ಎಕ್ಸ (X) ಅವರು ಮೊದಲು ಶ್ರೀಮಾತೆಯವರಿಗೆ ಪೂರ್ಣ ವಿಶ್ರಾಂತಿ ತೆಗೆದುಕೊಳ್ಳಲು ಮತ್ತು ತಮ್ಮನ್ನು ತಾವು ದಣಿಸಿಕೊಳ್ಳಲು ಬೇಡವೆಂದು ಹೇಳುತ್ತಿದ್ದರು – ಶ್ರೀಮಾತೆಯವರು ಬರೆಯುತ್ತಿಲ್ಲವೆಂದು ಅವರು ಈಗ್ಯಾಕೆ ಅಳುತ್ತಿದ್ದಾರೆ? ಅವಳು ಹಿಂದಿನ ವರ್ತನೆ ನಿಜವಾಗಿತ್ತು – ಅವಳು ಚೈತ್ಯ ಪ್ರಜ್ಞೆಯಲ್ಲಿ ಮತ್ತು ಯಾವಾಗಲೂ ಶ್ರೀಮಾತೆಯವರ ಉಪಸ್ಥಿತಿಯೊಂದಿಗೆ ಅವರ ಹತ್ತಿರ ಇರುತ್ತಿದ್ದಳು.

*

ಧ್ಯಾನದಲ್ಲಿ ನೀವು ಶ್ರೀಮಾತೆಯವರನ್ನು ಕರೆಯಬೇಕು ಮತ್ತು ನಿಮ್ಮ ಹೃದಯದಲ್ಲಿ ಆ ಕರೆಯ ಮೇಲೆ ಅವರಿಗೆ ತೆರೆದುಕೊಳ್ಳುವವರೆಗೆ ಅಥವಾ ಅವರೊಂದಿಗೆ ಆಂತರಿಕ ಸಂಪರ್ಕದ ಅನುಭವವಾಗುವವರೆಗೆ ಕೇಂದ್ರೀಕರಿಸಬೇಕು.

*

ನಾನು ಧ್ಯಾನ ಮಾಡಲಾರೆ, ಏಕೆಂದರೆ ನಾನು ಧ್ಯಾನ ಮಾಡಲು ಕುಳಿತುಕೊಂಡಾಗ ಅನೇಕ ಆಲೋಚನೆಗಳು ನನ್ನಲ್ಲಿ ಬರುತ್ತವೆ. ಮುಂದುವರೆಯಲು ಮತ್ತು ಶ್ರೀಮಾತೆಯವರು ನನ್ನಲ್ಲಿ ಕಾರ್ಯ ಮಾಡುವುದನ್ನು ಸುಲಭವಾಗಿಸಲು ನಾನು ಯಾವ ಮಾರ್ಗವನ್ನು ಅನುಸರಿಸಬೇಕು?

ನಿಮಗೆ ಧ್ಯಾನ ಮಾಡಲು ಆಗದಿದ್ದರೆ, ಪ್ರಾರ್ಥನೆಯನ್ನು ಮಾಡಿ. ನೀವು ಮಾಡುವುದೆಲ್ಲವನ್ನೂ ಶ್ರೀಮಾತೆಯವರಿಗೆ ನಿವೇದಿಸಿ ಮತ್ತು ನಿಮ್ಮ ಕ್ರಿಯೆಗಳ ಮತ್ತು ನಿಮ್ಮ ಸ್ವಭಾವದ ನಿಯಂತ್ರಣವನ್ನು ತೆಗೆದುಕೊಳ್ಳಲು ಅವರನ್ನು ಪ್ರಾರ್ಥಿಸಿ. ಪ್ರೀತಿಸಿ ಮತ್ತು ಆರಾಧಿಸಿ. ಬೇಕಾಗಿರುವುದೇನೆಂದರೆ, ನೀವು ಶ್ರೀಮಾತೆಯವರ ಬಗ್ಗೆ ಜಾಗೃತರಾಗುವಂಥ ಒಂದು ಪೂರ್ಣ ತೆರೆದುಕೊಳ್ಳುವಿಕೆಯನ್ನು ಹೊಂದುವುದು. ಈ ಸಂಗತಿಗಳು ತೆರೆದುಕೊಳ್ಳುವಿಕೆಯನ್ನು ಒದಗಿಸುತ್ತವೆ. ಸಮಯ ತೆಗೆದುಕೊಂಡರೂ ಸಹ, ನೀವು ಖಿನ್ನತೆ, ನಿರಾಶೆ ಅಥವಾ ಪ್ರತಿಭಟನೆಗೆ ಒಳಗಾಗಬಾರದು – ಏಕೆಂದರೆ ಈ ವಿಷಯಗಳು ತೆರೆಯುವಿಕೆಯ ಮಾರ್ಗದಲ್ಲಿ ಅಡ್ಡಿಯಾಗುತ್ತವೆ.

*

ನೀವು ಶ್ರೀಮಾತೆಯವರಿಗೆ ತೆರೆದುಕೊಳ್ಳುವುದೇ ಸರ್ವ ಸಂಗತಿಯಾಗಿದೆ. ನಿರ್ಣಾಯಕ ಅನುಭವಗಳಿಗಾಗಿ ಪ್ರಕೃತಿಯ ಸಿದ್ಧತೆಯು ಯಾವಾಗಲೂ ಸಮಯ ತೆಗೆದುಕೊಳ್ಳುತ್ತದೆ ಮತ್ತು ತಕ್ಷಣದ ಫಲಿತಾಂಶಗಳಿಗಾಗಿ ನಿರುತ್ಸಾಹ ಅಥವಾ ಅಸಹನೆ ಇಲ್ಲದೆ ಒಂದು ನಿರಂತರ ಸ್ವಯಂ–ತೆರೆದುಕೊಳ್ಳುವಿಕೆಯಾಗಿರಬೇಕು.

*

ಶ್ರೀಮಾತೆಯವರಲ್ಲಿ ವಿಶ್ವಾಸ ಮತ್ತು ಅವರಿಗೆ ಪೂರ್ಣ ತೆರೆದುಕೊಳ್ಳುವಿಕೆಯೇ ಉತ್ತಮ ಮಾರ್ಗವಾಗಿದೆ.

*

ಓ ಶ್ರೀಮಾತೆಯವರೆ, ಎಲ್ಲಿಯವರೆಗೆ ನೀವು ನನ್ನಿಂದ ದೂರವಿರುವಿರಿ? ನಾನು ನಿಮ್ಮ ಮಗುವಲ್ಲವೆ?

ಶ್ರೀಮಾತೆಯವರು ಯಾವತ್ತಿಗೂ ನಿಮ್ಮಿಂದ ದೂರವಿಲ್ಲ. ನೀವು ಮುಕ್ತವಾಗಿದ್ದರೆ, ನೀವು ಯಾವಾಗಲೂ ನಿಮ್ಮೊಂದಿಗೆ ಅವರ ಇರುವನ್ನು ಅನುಭವಿಸುತ್ತೀರಿ.

ನನ್ನ ಪ್ರೀತಿಯ ಮಾತೆಯವರೆ, ನಾನು ನಿಮ್ಮಲ್ಲಿರಲು ಬಿಡಿ.

ಶ್ರೀಮಾತೆಯವರ ಶಾಂತಿ ಮತ್ತು ಆನಂದಕ್ಕೆ ನಿಮ್ಮನ್ನು ತೆರೆದಿಟ್ಟುಕೊಳ್ಳಿ – ಅದರಲ್ಲಿ ಜೀವಿಸುವ ಮೂಲಕ ನೀವು ಅವರಲ್ಲಿ ಜೀವಿಸಲು ಶುರು ಮಾಡುತ್ತೀರಿ.

ಶ್ರೀಮಾತೆಯವರು ನನಗಾಗಿ ಎಲ್ಲವನ್ನು ಮಾಡುವರು ಎಂದು ನಾನು ನಂಬುವುದು ಸರಿಯೇ?

ಹೌದು, ಆದರೆ ಅದು ನಿಮ್ಮ ಒಳಗಿನ ಒಪ್ಪಿಗೆಯಿಂದ ಮಾಡಬೇಕು ಮತ್ತು ನೀವು ಶ್ರೀಮಾತೆಯವರ ಬಗ್ಗೆ ಸರಿಯಾದ ಮನೋಭಾವ ಮತ್ತು ತೆರೆದ ಮನಸ್ಸನ್ನು ಹೊಂದಿರಬೇಕು.

ಶ್ರೀಮಾತೆ, ನಾವು ನಿಮ್ಮಿಂದ ಯಾವಾಗಲೂ ಆನಂದವನ್ನು ಹೇಗೆ ಪಡೆದುಕೊಳ್ಳಬಹುದು?

ನಮ್ಮ ಬಗ್ಗೆ ಅತಿ ಕಡಿಮೆ ಮತ್ತು ದೇವರ ಬಗ್ಗೆ ಅತಿ ಹೆಚ್ಚು ಯೋಚಿಸುವುದರ ಮೂಲಕ.

ಶ್ರೀಮಾತೆ, ನನ್ನನ್ನು ನಾನು ನಿಮಗೆ ಹೇಗೆ ತೆರೆದುಕೊಳ್ಳಲಿ?

ಮನಸ್ಸು ಮತ್ತು ಪ್ರಾಣ ಶಕ್ತಿಯನ್ನು ಶಾಂತಗೊಳಿಸುವ ಮೂಲಕ, ಶ್ರೀಮಾತೆಯವರ ಮೇಲೆ ಹೆಚ್ಚು ಕೇಂದ್ರೀಕರಿಸುವ ಮೂಲಕ ಮತ್ತು ಅವರ ಬಲವು ನಮ್ಮೊಳಗೆ ಬಂದು ಕಾರ್ಯ ಮಾಡಲು ಆಗ್ರಹಿಸುವ ಮೂಲಕ.

ಶ್ರೀಮಾತೆ, ನಾವು ಯಾರೊಂದಿಗಾದರೂ ಸಂಬಂಧವನ್ನು ಹೊಂದಿದಾಗ ನಮಗೇಕೆ ಹಾನಿಯಾಗುತ್ತದೆ?

ಏಕೆಂದರೆ ನಾವು ಇತರರಿಂದ ಮಾನಸಿಕ ಮತ್ತು ಪ್ರಾಣಿಕ ಪ್ರಭಾವಗಳನ್ನು ಪಡೆಯುತ್ತೇವೆ ಮತ್ತು ಅವುಗಳಲ್ಲಿ ಕೆಲವು ಹಾನಿಕಾರಕವಾಗಿರುತ್ತವೆ.

ಪ್ರಭು, ನನ್ನ ಎಲ್ಲಾ ಅವಾಂಛಿತ ಚಟುವಟಿಕೆಗಳು ಯಾವಾಗ ಕೊನೆಗೊಳ್ಳುತ್ತವೆ ಮತ್ತು ಕೇವಲ ದೈವೀ ಚಟುವಟಿಕೆಗಳು ಮಾತ್ರ ಉಳಿದುಕೊಳ್ಳುತ್ತವೆ? ಅಂದರೆ, ನಾನು ಯಾವಾಗ ಶ್ರೀಮಾತೆಯವರು ಬಯಸಿದಂತೆ ಮಾತ್ರ ವರ್ತಿಸುತ್ತೇನೆ?

ಚೈತ್ಯ ಪುರುಷನು ಮುನ್ನೆಲೆಗೆ ಬಂದಾಗ.

ಶ್ರೀಮಾತೆ, ನಾವು ಬುದ್ಧಿಯನ್ನು ಹೇಗೆ ವೃದ್ಧಿಪಡಿಸಿಕೊಳ್ಳಬಹುದು?

ಮಾಮೂಲಿನ ಮಾರ್ಗವೆಂದರೆ ಅಭ್ಯಸಿಸುವುದು ಅಥವಾ ಎಲ್ಲ ಸಂಗತಿಗಳನ್ನು ಗಮನಿಸಲು ಹಾಗೂ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು; ತನ್ನ ಮನಸ್ಸನ್ನು ಮೇಲಿನ ಬೆಳಕಿಗೆ ತೆರೆಯುವುದು ಸಾಧಕನ ಮಾರ್ಗವಾಗಿದೆ.

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/151–60 – ಶ್ರೀ ಅರವಿಂದರು

ಕಷ್ಟದ ಸಮಯದಲ್ಲಿ ಶ್ರೀಮಾತೆಯವರಿಗೆ ತೆರೆದುಕೊಳ್ಳುವುದು

ನಿಮ್ಮ ಅನುಭವದಲ್ಲಿ ಯಾವುದೇ ತಪ್ಪಿಲ್ಲ ಅಥವಾ ನಿಮ್ಮ ಅಭಿವ್ಯಕ್ತಿಯಲ್ಲಿ ನಿಷ್ಕಪಟವಿಲ್ಲ; ಬರೆಯೋದು ಸಹಾಯಕವಾಗಿದೆ ಮತ್ತು ನೀವು ಅದನ್ನ ಮುಂದುವರಿಸಬೇಕು ಅನ್ನೋದು ನಮ್ಮ ಆಸೆ. ಸಾಂದರ್ಭಿಕವಾಗಿ ಪ್ರಜ್ಞೆ ಮುಳುಗುವುದು ಎಲ್ಲರಿಗೂ ಸಂಭವಿಸುವಂಥ ಸಂಗತಿಯಾಗಿದೆ. ಕಾರಣಗಳು ವಿವಿಧ ರೀತಿಯಾಗಿವೆ, ಇನ್ನೂ ಬದಲಾಗದ ಅಥವಾ ಪ್ರಾಣದಲ್ಲಿ, ವಿಶೇಷವಾಗಿ ನಿಮ್ಮ ಪ್ರಾಣದಲ್ಲಿ ಸಾಕಷ್ಟು ಬದಲಾವಣೆ ಹೊಂದದ ಕೆಲವು ಸಂಗತಿಗಳು ಹೊರಗಿನಿಂದ ಸ್ಪರ್ಶಿಸುತ್ತವೆ, ಕೊಂಚ ಜಡತ್ವ ಅಥವಾ ಅಸ್ಪಷ್ಟತೆ ಪ್ರಕೃತಿಯ ಭೌತಿಕ ಭಾಗಗಳಿಂದ ಮೇಲೇರುತ್ತದೆ. ಅದು ಬಂದಾಗ, ಮೌನವಾಗಿರಿ, ಶ್ರೀಮಾತೆಯವರಿಗೆ ನಿಮ್ಮನ್ನು ತೆರೆದುಕೊಳ್ಳಿ ಮತ್ತು ನಿಜವಾದ ಸ್ಥಿತಿಯನ್ನು ಮತ್ತೆ ಕರೆಯಿರಿ, ಮತ್ತು ನಿಮ್ಮ ಒಳಗಿನಿಂದಲೇ ಕಾರಣವನ್ನು ಅಥವಾ ಸರಿಪಡಿಸಬೇಕಾದ ವಿಷಯವನ್ನು ತೋರಿಸುವ ಸ್ಪಷ್ಟ ಮತ್ತು ಅವಿಚಲಿತ ವಿವೇಚನೆಗೆ ಹಾತೊರೆಯಿರಿ.

*

ಕತ್ತಲೆಯ (ದುಷ್ಟ ಶಕ್ತಿಯ/ಅಜ್ಞಾನದ) ಆಕ್ರಮಣವು ಮುಗಿದು ಹೋಗಿದೆ, ಆದರೆ ನನ್ನ ದೇಹವು ಇನ್ನೂ ಪ್ರಕ್ಷುಬ್ಧವಾಗಿದೆ ಮತ್ತು ನನ್ನ ಪ್ರಜ್ಞೆಯು

ತೊಂದರೆಗೊಳಗಾಗಿದೆ. ಅನುಭವಗಳನ್ನು ಸಮಾಧಾನಗೊಳಿಸುವಂಥ ಮತ್ತು ದೇಹವನ್ನು ವಿಶ್ರಾಂತಗೊಳಿಸುವಂಥ ನಿಮ್ಮ ಶಾಂತ ಸ್ಥಿತಿಯೊಂದಿಗೆ ನನ್ನ ಸಂಪರ್ಕವನ್ನು ಕಳೆದುಕೊಂಡಿದ್ದೇನೆ, ಆದರೆ ನಾನು ಇನ್ನೂ ಹಂಬಲಿಸಬಲ್ಲೆ ಮತ್ತು ನಿಮ್ಮ ಸ್ಪರ್ಶವನ್ನು ಮರಳಿ ಪಡೆಯುವ ಭರವಸೆವುಳ್ಳವನಾಗಿದ್ದೇನೆ.

ಆ ಆಕ್ರಮಣವು ಎಷ್ಟೇ ಶಕ್ತಿಶಾಲಿಯಾಗಿದ್ದರೂ ಮತ್ತು ಅದು ತಾತ್ಕಾಲಿಕವಾಗಿ ಜಯಶಾಲಿಯಾದರೂ, ನೀವು ಶ್ರೀಮಾತೆಯವರಿಗೆ ನಿಮ್ಮನ್ನು ತೆರೆದುಕೊಳ್ಳುವ ಹವ್ಯಾಸವನ್ನು ರೂಢಿಸಿಕೊಂಡಿದ್ದರೆ, ಅದು ಬೇಗನೇ ಕಳೆದುಹೋಗುತ್ತದೆ. ನೀವು ಶಾಂತವಾಗಿದ್ದು ನಿಮ್ಮನ್ನು ಅದಕ್ಕೆ ಮತ್ತು ಶಕ್ತಿಗೆ ತೆರೆದುಕೊಂಡರೆ, ಶಾಂತಿ ಮರಳಿ ಬರುತ್ತದೆ. ಸತ್ಯದ ಯಾವುದೋ ಒಂದು ಸಂಗತಿಯು ನಿಮ್ಮೊಳಗೆ ತನ್ನನ್ನು ತಾನು ಪ್ರಕಟಪಡಿಸಿಕೊಂಡರೆ, ಅದು ಸ್ವಲ್ಪ ಸಮಯದವರೆಗೆ ತಪ್ಪಾದ ಚಲನೆಗಳಿಂದ ಮೋಡಗಳಿಂದ ಮುಸುಕಿದ್ದರೂ ಸಹ, ಆಕಾಶದಲ್ಲಿರುವ ಸೂರ್ಯನಂತೆ ಮತ್ತೆ ಪ್ರಕಾಶಿಸುತ್ತದೆ. ಆದ್ದರಿಂದ ಆತ್ಮವಿಶ್ವಾಸದಿಂದ ಮುನ್ನುಗ್ಗಿ ಮತ್ತು ಎಂದಿಗೂ ಧೈರ್ಯವನ್ನು ಕಳೆದುಕೊಳ್ಳಬೇಡಿ.

*

ಇಂತಹ ಅಲ್ಪ ಸಂಗತಿಗಳಿಂದ ನಿನ್ನನ್ನು ನೀನು ಅಸಮಾಧಾನಗೊಳ್ಳಲು ಬಿಡಬಾರದು. ನೀನು ದೂರುವಂಥ ಆ ಚಲನೆಗಳು ಬಂದಾಗ, ನೀನು ಶಾಂತವಾಗಿರು ಮತ್ತು ಶ್ರೀಮಾತೆಯವರಿಗೆ ತೆರೆದುಕೊ ಮತ್ತು ಅವರನ್ನು ಕರೆ, ಸ್ವಲ್ಪ ಸಮಯದ ನಂತರ ಒಂದು ಬದಲಾವಣೆಯು ನಿನ್ನಲ್ಲಿ ಬರುವುದನ್ನು ನೀನು ಕಾಣುವಿ. ಧ್ಯಾನವೊಂದೇ ಸಾಲದು; ಶ್ರೀಮಾತೆಯವರ ಬಗ್ಗೆ ಯೋಚಿಸು ಮತ್ತು ನಿಮ್ಮ ಕೆಲಸ ಮತ್ತು ಕ್ರಿಯೆಗಳನ್ನು ಅವರಿಗೆ ಅರ್ಪಿಸು, ಅದು ನಿಮಗೆ ಒಳ್ಳೆಯ ರೀತಿಯಲ್ಲಿ ಸಹಾಯ ಮಾಡುತ್ತದೆ.

*

ಮಾನವ ಸ್ವಭಾವದಲ್ಲಿರುವ ಮಾನಸಿಕ ಮತ್ತು ಪ್ರಾಣಿಕ ದೋಷಗಳ ಆಟವು ಅಜ್ಞಾನಕ್ಕೆ ಸೇರಿದ್ದು – ಮತ್ತು ಅಸುರಿ ಶಕ್ತಿಗಳ ಆಕ್ರಮಣಗಳು ಮತ್ತು ಸಲಹೆಗಳು ಕೂಡ – ಇವುಗಳಿಗೆ ಪ್ರತಿಕ್ರಿಯಿಸುವ ಯಾವುದಾದರೂ ಪ್ರಕೃತಿಯಲ್ಲಿ ಇರುವ ತನಕ ಇವುಗಳನ್ನು ಅನುಮತಿಸಲಾಗುತ್ತದೆ. ಶ್ರೀಮಾತೆಯವರ ಸಮ್ಮುಖದಲ್ಲಿ ಅವುಗಳು ನಿಮ್ಮಲ್ಲಿ

ಮೇಲೆದ್ದರೆ, ಅವುಗಳ ಮೇಲೆ ಬಲವಾದ ಒತ್ತಡವಿರುವುದರಿಂದ, ಒಂದೊ ಅವುಗಳು ಹೊರಗೆ ಹೋಗಬೇಕು ಅಥವಾ ಅಸ್ತಿತ್ವಕ್ಕಾಗಿ ಹೋರಾಟ ಮಾಡಬೇಕಾಗುತ್ತದೆ. ಶ್ರೀಮಾತೆಯವರಿಗೆ ತೆರೆದುಕೊಳ್ಳುವುದು ಮತ್ತು ಸಂಪೂರ್ಣವಾಗಿ ಹಾಗೂ ಎಲ್ಲಾ ಸಮಯದಲ್ಲೂ ಉಳಿದೆಲ್ಲ ಶಕ್ತಿಗಳನ್ನು ತಿರಸ್ಕರಿಸುವುದು ಮತ್ತು ಅವುಗಳು ಹೆಚ್ಚು ಕ್ರಿಯಾಶೀಲವಾದಾಗ ಅವುಗಳನ್ನು ತಿರಸ್ಕರಿಸುವುದು ಪರಿಹಾರವಾಗಿದೆ. ನಂಬಿಕೆ, ಪ್ರಾಮಾಣಿಕತೆ, ಪರಿಶ್ರಮ ಉಳಿದ ಕೆಲಸವನ್ನು ಮಾಡುತ್ತವೆ.

*

ನಿನ್ನೆ ನಾನು ಪ್ರಾರ್ಥಿಸಿದೆ, "ಓ ದಿವ್ಯಮಾತೆಯೇ, ನಾನು ಯಾವಾಗಲೂ ನಿಮ್ಮಿಂದ ಮಾರ್ಗದರ್ಶನವನ್ನು ಪಡಿದಿದ್ದೇನೆ ಮತ್ತು ನಿಮ್ಮ ಇರುವಿಕೆಯು ಎಲ್ಲಾ ವಸ್ತುಗಳಲ್ಲಿ ಮತ್ತು ಎಲ್ಲೆಡೆ ಇದೆ ಎಂಬುದನ್ನು ನಾನು ಹೇಗೆ ಅರಿತುಕೊಳ್ಳಬಹುದು. ನಾನು ನಿಮ್ಮನ್ನು ಪ್ರೀತಿಸುವಂತೆ, ನಿಮ್ಮ ಮಗುವಾಗಿರುವಂತೆ ಮತ್ತು ನಿಮ್ಮ ಕಾರ್ಯಕ್ಕೆ ಒಂದು ಸಾಧನವಾಗಿರುವಂತೆ ನಾನು ಪ್ರಾರ್ಥಿಸುತ್ತೇನೆ."

ಹೌದು. ಶ್ರೀಮಾತೆಯವರ ಕ್ರಿಯೆಗೆ ಹೆಚ್ಚು ತೆರೆದುಕೊಂಡರೆ, ಕಷ್ಟಗಳು ಹೆಚ್ಚು ಸುಲಭವಾಗಿ ಪರಿಹರಿಸಲ್ಪಡುತ್ತವೆ ಮತ್ತು ಸರಿಯಾದ ಕೆಲಸವನ್ನು ಮಾಡಲಾಗುತ್ತದೆ.

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/303–04 – ಶ್ರೀ ಅರವಿಂದರು

– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು

ಬೇಡಿಕೆಗಳು ಇರಬಾರದು. ನೀನು ಶ್ರೀಮಾತೆಯಿಂದ ಸಹಜವಾಗಿ ಏನನ್ನು ಪಡೆಯುವಿಯೋ ಅದು ನಿನಗೆ ನೆರವಾಗುವದು, ನೀನು ಏನನ್ನು ಬೇಡುವೆಯೋ ಅಥವಾ ಯಾವುದಕ್ಕಾಗಿ ಆಕೆಯ ಮೇಲೆ ಒತ್ತಡ ಹೇರಲು ಪ್ರಯತ್ನಿಸುವೆಯೋ ಅದು ಆಕೆಯ ಶಕ್ತಿಯನ್ನು ಹೊಂದಿರುವದಿಲ್ಲ.

ಪ್ರತಿಯೊಬ್ಬರ ನೈಜ ಅವಶ್ಯಕತೆಗೆ ಅನುಗುಣವಾಗಿ ವಿಭಿನ್ನವಾಗಿ ಶ್ರೀಮಾತೆಯು ಅವರೊಂದಿಗೆ ಸ್ಪಂದಿಸುವಳು (ಆತನ ಅಪೇಕ್ಷೆಗೆ ಅನುಗುಣವಾಗಿ ಅಲ್ಲ). ಅಂದರೆ ಸಾಧನೆಯಲ್ಲಿನ ಪ್ರಗತಿ ಮತ್ತು ಸ್ವಭಾವಕ್ಕೆ ತಕ್ಕಂತೆ ಎಲ್ಲರೂ ಪಡೆಯುವರು.

ನೀನು ಸೂಕ್ಷ್ಮ ಅಂಶಗಳನ್ನು ಉಪೇಕ್ಷಿಸದೆ, ನಿಷ್ಠೆಯಿಂದ ಕೆಲಸ ಮಾಡುವದೇ ಅವಶ್ಯಕವಾದ ಶಕ್ತಿಯನ್ನು ಪಡೆಯಲು ನಿನಗಿರುವ ಅತ್ಯಂತ ಪರಿಣಾಮಕಾರಿಯಾದ ಹಾದಿಯಾಗಿದೆ. ಕಾರ್ಯವನ್ನು ನೆರವೇರಿಸುವಾಗ ಮತ್ತಿನ್ನೇನೂ ಮಧ್ಯೆ ಪ್ರವೇಶಿಸದಂತೆ ನೋಡಿಕೊಳ್ಳಬೇಕು. ನೀನು ಅದನ್ನು ಮಾಡಿದರೆ, ಜೊತೆಗೆ ಕೆಲಸದಲ್ಲಿರುವ ಸಮಯದಲ್ಲಿ ಶ್ರೀಮಾತೆಯವರತ್ತ ತೆರೆದುಕೊಂಡರೆ, ನೀನು ಹೆಚ್ಚು ನಿರಂತರವಾಗಿ ಆಕೆಯ ಅನುಗ್ರಹವನ್ನು ಪಡೆಯುವೆ ಮತ್ತು ನಿನ್ನ ಮೂಲಕ ಆಕೆಯ ಶಕ್ತಿಯು ಕೆಲಸ ಮಾಡುತ್ತಿರುವದನ್ನು ಅನುಭವಿಸುವೆ. ಈ ರೀತಿ ಆಕೆಯ ಸಾನ್ನಿಧ್ಯದ ಭಾವದೊಂದಿಗೆ ನೀನು ಸದಾ ಜೀವಿಸಲು ಸಾಧ್ಯವಾಗುವದು. ಇದಕ್ಕೆ ಬದಲಾಗಿ ಕಲ್ಪನೆಗಳು ಅಥವಾ ಆಸೆಗಳು ನಿನ್ನ ಕಾರ್ಯದಲ್ಲಿ ಹಸ್ತಕ್ಷೇಪ ಮಾಡಿದರೆ ಅಥವಾ ನೀನು ನಿರ್ಲಕ್ಷ್ಯತೆ ಮತ್ತು ತಾತ್ಸಾರದಿಂದ ಕೂಡಿದ್ದರೆ, ಆಕೆಯ ಅನುಗ್ರಹದ ಹರಿವನ್ನು ಅಡ್ಡಗಟ್ಟುವೆ. ಹಾಗು ದುಃಖ, ಅಸಮಾಧಾನ ಮತ್ತು ಇತರ ಪರಕೀಯ ಶಕ್ತಿಗಳು ನಿನ್ನೊಳಗೆ ಪ್ರವೇಶಿಸುವವು. ಅತ್ಯಂತ ಸುಲಭವಾದ ಮತ್ತು ಅತ್ಯಧಿಕವಾಗಿ ಪರಿಣಾಮಕಾರಿಯಾದ ಮಾರ್ಗವಾಗಿದೆ ಕಾರ್ಯಮುಖೇನ ಮಾಡುವ ಯೋಗ.

*

ನಾವು ಅಶಕ್ತತೆ, ಜಡತೆ ಮತ್ತು ನಿಷ್ಕ್ರಿಯತೆಯನ್ನು ಅಂಗೀಕರಿಸಿದರೆ ಅತ್ಯಂತ ಭೌತಿಕ ಮತ್ತು ಯಾಂತ್ರಿಕ ಕೆಲಸವನ್ನು ಸಹ ಸಮರ್ಪಕವಾಗಿ ಮಾಡಲಾಗುವದಿಲ್ಲ. ಇದಕ್ಕೆ ನಿನ್ನನ್ನು ನೀನು ಯಾಂತ್ರಿಕ ಕೆಲಸಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳುವದಲ್ಲ ಉಪಶಮನ. ಆದರೆ ಅಸಾಮರ್ಥ್ಯ, ಪ್ರತಿಭಟನೆ ಮತ್ತು ಜಡತೆಗಳನ್ನು ತಿರಸ್ಕರಿಸಿ ಶ್ರೀಮಾತೆಯವರ ಶಕ್ತಿಗೆ ನಿನ್ನನ್ನು ತೆರೆದುಕೊಳ್ಳಬೇಕು. ಅಹಂಕಾರ, ಮಹತ್ವಾಕಾಂಕ್ಷೆ ಮತ್ತು ಸೊಕ್ಕು ನಿನ್ನ ಹಾದಿಯಲ್ಲಿ ಅಡ್ಡವಾಗಿದ್ದರೆ ಅವುಗಳನ್ನು ನಿನ್ನಿಂದ ಬಹು ದೂರ ತಳ್ಳಿಬಿಡು. ಅವುಗಳು ಕಾಣದಾಗಲಿ ಎಂದು ಕಾಯುತ್ತಿದ್ದರೆ, ಅವುಗಳಿಂದ ದೂರ ಸರಿಯಲು ಸಾಧ್ಯವಾಗುವದಿಲ್ಲ. ಘಟನೆಗಳು ಸಂಭವಿಸಲೆಂದು ನೀನು ಕಾಯುವಿಕೆಯಲ್ಲಿ ತೊಡಗಿದರೆ, ಅವುಗಳು ಸಂಭವಿಸಲೇ ಬೇಕೆನ್ನಲು ಯಾವ ಕಾರಣವೂ ಇರುವದಿಲ್ಲ. ವಿರೋಧಿಸುತ್ತಿರುವದು ಅಶಕ್ತತೆ ಮತ್ತು ದುರ್ಬಲತೆಗಳಾಗಿದ್ದರೆ, ನೈಜವಾಗಿ ಮತ್ತು ಹೆಚ್ಚು ಹೆಚ್ಚಾಗಿ ಶ್ರೀಮಾತೆಯವರ ಶಕ್ತಿಗೆ ತೆರೆದುಕೊಂಡರೆ, ಕೆಲಸಕ್ಕೆ ಅವಶ್ಯಕವಾದ ಬಲ ಮತ್ತು ಸಾಮರ್ಥ್ಯಗಳನ್ನು ನೀಡಲಾಗುವದು ಮತ್ತು ಅವು ಆಧಾರದಲ್ಲಿ ವೃದ್ಧಿಸುವವು.

*

ಈ ಚುರುಕುತನ ಮತ್ತು ಕೆಲಸದ ಸಾಮರ್ಥ್ಯಗಳು ನಿನ್ನನ್ನು ಪ್ರವೇಶಿಸಲು ಉತ್ತಮವಾದ ಚೈತ್ಯದ ಅವಸ್ಥೆಯಲ್ಲಿ ನೀನೀಗ ಇರುವದೇ ಕಾರಣವಾಗಿದೆ: ಏಕೆಂದರೆ ನೀನು ಶ್ರೀಮಾತೆಯವರ ಶಕ್ತಿಗೆ ತೆರೆದುಕೊಂಡಿರುವೆ ಮತ್ತು ಅದೇ ನಿನ್ನಲ್ಲಿ ಕೆಲಸ ಮಾಡುತ್ತಿರುವದು, ಹೀಗಾಗಿ ನಿನಗೆ ದಣಿವಾಗುತ್ತಿಲ್ಲ. ಹಿಂದೆ ಕೆಲಸವು ಆದ ಮೇಲೆ ನಿನಗೆ ನಿಶ್ಯಕ್ತಿಯು ಉಂಟಾಗುತ್ತಿತ್ತು. ಏಕೆಂದರೆ ನಿನ್ನ ಪ್ರಾಣವು ತೆರೆದುಕೊಂಡಿತ್ತು ಮತ್ತು ಪ್ರಾಣ ಶಕ್ತಿಯು ಕಾರ್ಯದ ಉಪಕರಣವಾಗಿತ್ತು. ಆದರೆ ದೇಹದ ಚೇತನವು ತೆರೆದುಕೊಂಡಿರಲಿಲ್ಲ ಮತ್ತು ಸ್ವಲ್ಪ ನಿಶ್ಯಕ್ತಿಯನ್ನು ಹೊಂದಿತ್ತು. ಈಗ ಭೌತಿಕವೂ ಸಹ ತೆರೆದುಕೊಂಡಿರುವಂತೆ ಕಾಣುತ್ತಿದೆ.

*

ದೇಹದ ಸಾಮಾನ್ಯ ಪರಿಸ್ಥಿತಿಯಲ್ಲಿ, ನೀನು ದೇಹದ ಮೂಲಕ ಹೆಚ್ಚು ಕಾರ್ಯವನ್ನು ಮಾಡಲು ಪ್ರಯತ್ನಿಸಿದರೆ ಅದು ಪ್ರಾಣ ಶಕ್ತಿಯ ನೆರವಿನ ಮೂಲಕ ಕಾರ್ಯವನ್ನು ಮಾಡುವದು. ಆದರೆ ಕಾರ್ಯವು ಸಮಾಪ್ತವಾಗುತ್ತಿದ್ದಂತೆ ಪ್ರಾಣ ಶಕ್ತಿಯು ಹಿಂದೆ ಸರಿಯುವದು ಮತ್ತು ದೇಹಕ್ಕೆ ದಣಿವಾಗುವದು. ಆದರೆ ಇದನ್ನು ಅತಿ ಹೆಚ್ಚಾಗಿ ಮಾಡಿದರೆ ಮತ್ತು ಅಧಿಕ ಕಾಲ ಮಾಡಿದರೆ ಅತಿ ಹೆಚ್ಚಾದ ಒತ್ತಡದಿಂದ ಆರೋಗ್ಯ ಮತ್ತು ಬಲವು ಅಸ್ತವ್ಯಸ್ತವಾಗಬಹುದು. ಆಗ ಪುನಶ್ಚೇತನಗೊಳ್ಳಲು ವಿಶ್ರಾಂತಿಯು ಅವಶ್ಯಕವಾಗುವದು.

ಆದರೆ ಶ್ರೀಮಾತೆಯವರ ಶಕ್ತಿಗೆ ತೆರೆದುಕೊಳ್ಳುವ ಅಭ್ಯಾಸವನ್ನು ಮನಸ್ಸು ಮತ್ತು ಪ್ರಾಣವು ಮಾಡಿಕೊಂಡರೆ, ಆಗ ಆ ಶಕ್ತಿಯು ಅವುಗಳಿಗೆ ಆಧಾರ ನೀಡುವದು ಮತ್ತು ಅವು ಸಂಪೂರ್ಣವಾಗಿ ಆ ಶಕ್ತಿಯಿಂದ ತುಂಬಿಬಿಡಬಹುದು – ಶಕ್ತಿಯು ಕೆಲಸ ಮಾಡುವದು ಮತ್ತು ದೇಹವು ಕೆಲಸಕ್ಕೆ ಮೊದಲಾಗಲಿ ಅಥವಾ ನಂತರವಾಗಲಿ ಆಯಾಸವನ್ನು ಅನುಭವಿಸುವದಿಲ್ಲ. ಆದರೂ ಸಹ, ಸ್ವತಃ ದೇಹವೇ ತೆರೆದು ಶಕ್ತಿಯನ್ನು ಅಂತರ್ಗತಮಾಡಿಕೊಳ್ಳಬೇಕು. ಹಾಗಾಗುವವರೆಗೂ, ಕೆಲಸದ ಮಧ್ಯೆ ಸಾಕಷ್ಟು ವಿಶ್ರಾಂತಿಯು ಬೇಕೇ ಬೇಕು. ಇಲ್ಲದೆ ಹೋದರೆ ದೇಹವು ಕಾರ್ಯವನ್ನು ಬಹು ಕಾಲ ಮುಂದುವರಿಸಬಹುದು. ಆದರೆ ನಂತರ ದೇಹವು ಕುಸಿದು ಬೀಳುವ ಅಪಾಯವಿರುವದು.

ಸಂಪೂರ್ಣ ಪ್ರಭಾವವು ಇದ್ದಾಗ ದೇಹವನ್ನು ಹೆಚ್ಚು ಕಾಲ ಉಳಿಯುವಂತೆ ಮಾಡಬಹುದು. ಆದರೆ ಪ್ರಾಣ ಮತ್ತು ಮನಸ್ಸಿನಲ್ಲಿ ಕರೆಯಿದ್ದು ಏಕಾಗ್ರ ಚಿತ್ತದ ಶ್ರದ್ಧೆಯು ಸಹ ಇರಬೇಕು. ಇತರ ಪ್ರಭಾವಗಳಿಂದ ಮನಸ್ಸು ಅಥವಾ ಪ್ರಾಣವು ಗೊಂದಲಕ್ಕೊಳಗಾಗಿದ್ದರೆ ಅಥವಾ ಶ್ರೀಮಾತೆಯವರದಲ್ಲದ ಶಕ್ತಿಗಳಿಗೆ ತೆರೆದುಕೊಂಡಿದ್ದರೆ, ಆಗ ಒಂದು ಮಿಶ್ರಿತ ಅವಸ್ಥೆಯು ಉಂಟಾಗುವದು. ಕೆಲವೊಮ್ಮೆ ಬಲ, ಕೆಲವೊಮ್ಮೆ ದಣಿವು, ನಿತ್ರಾಣ ಅಥವಾ ಅನಾರೋಗ್ಯ ಅಥವಾ ಒಮ್ಮೆಲೆ ಎರಡರ ಮಿಶ್ರಣವು ಉಂಟಾಗಬಹುದು.

ಅಂತಿಮವಾಗಿ, ಮನಸ್ಸು ಮತ್ತು ಪ್ರಾಣ ಮಾತ್ರವಲ್ಲ, ಆದರೆ ದೇಹವು ಸಹ ತೆರೆದುಕೊಂಡು ಶಕ್ತಿಯನ್ನು ಅಂತರ್ಗತಮಾಡಿಕೊಂಡರೆ, ಅದು ಕಾರ್ಯದ ಹಾದಿಯಲ್ಲಿ ಶಿಥಿಲವಾಗದೆ ಅಸಾಮಾನ್ಯ ಕೆಲಸಗಳನ್ನು ಮಾಡಬಲ್ಲದು. ಆದರೂ ಸಹ ವಿಶ್ರಾಂತಿಯು ಅವಶ್ಯಕ. ಆದುದರಿಂದಲೇ ಕಾರ್ಯದ ಪ್ರೇರೇಪಣೆಯನ್ನು ಹೊಂದಿರುವವರಿಗೆ ನಾವು ವಿಶ್ರಾಂತಿ ಮತ್ತು ಶ್ರಮದ ನಡುವೆ ಒಂದು ಸಮರ್ಪಕವಾದ ಸಮತೋಲನವಿರಬೇಕೆಂದು ಒತ್ತಾಯಿಸುವದು.

ದಣಿವಿನಿಂದ ಸಂಪೂರ್ಣವಾದ ಸ್ವಾತಂತ್ರ್ಯಸಿಗುವದು ಸಾಧ್ಯ. ಆದರೆ ಭೂಮಿಯ ಸ್ವಭಾವದೊಳಗಡೆಗೆ ಒಂದು ಸುಪ್ರಮಾನಸ ಶಕ್ತಿ ಪೂರ್ಣವಾಗಿ ಅವರೋಹಿಸಿ ಅದರಿಂದ ದೇಹದ ನಿಯಮಗಳು ಪೂರ್ತಿಯಾಗಿ ಬದಲಾದಾಗ ಮಾತ್ರ ಹಾಗೆ ಆಗುವದು.

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/256–58

ದಿವ್ಯವು ಮುನ್ನಡೆಸುವದು, ಆತನು ಚಾಲನೆ ಮಾಡುವದಿಲ್ಲ. ದಿವ್ಯದ ಮುನ್ನಡೆಸುವಿಕೆಯನ್ನು ಅಂಗೀಕರಿಸುವ ಅಥವಾ ಅಂಗೀಕರಿಸದಿರುವ ಒಂದು ಆಂತರಿಕ ಸ್ವಾತಂತ್ರ್ಯದ ಅವಕಾಶವನ್ನು ಪ್ರತಿಯೊಬ್ಬ ಮಾನವನೆಂದು ಕರೆಯಲಾಗುವ ಮಾನಸಿಕ ಸತ್ತೆಗೂ ನೀಡಲಾಗಿದೆ – ಹಾಗಲ್ಲದೆ ಬೇರೆ ಇನ್ಯಾವ ರೀತಿಯಲ್ಲಿ ಯಾವುದೇ ನೈಜ ಆಧ್ಯಾತ್ಮಿಕ ವಿಕಸನವನ್ನು ಮಾಡಲು ಸಾಧ್ಯ?

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/144–45

ಈ ಪ್ರಪಂಚದಲ್ಲಿನ ಸಮಸ್ತ ಕ್ರೀಡೆಯು ವ್ಯಕ್ತಿಗತ ಸತ್ತೆಯಲ್ಲಿನ ಒಂದು ಖಾತ್ರಿಯಾದ ಪರಸ್ಪರ ಸಂಬಂಧಿತ ಸ್ವತಂತ್ರ ಸಂಕಲ್ಪವನ್ನು ಆಧರಿಸಿದೆ. ಸಾಧನೆಯಲ್ಲಿಯೂ ಸಹ ಅದು ಉಳಿದಿರುವದು. ಪ್ರತಿಯೊಂದು ಹೆಜ್ಜೆಯಲ್ಲಿಯೂ ಆತನ ಅನುಮತಿಯು ಅವಶ್ಯಕ – ಅಜ್ಞಾನ, ಭಿನ್ನತೆ ಮತ್ತು ಅಹಂಕಾರಗಳಿಂದ ಪಾರಾಗಬೇಕಾದರೆ ದಿವ್ಯಕ್ಕೆ ಶರಣಾಗಬೇಕು. ಆದರೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅದು ಒಂದು ಮುಕ್ತ ಶರಣಾಗತಿಯಾಗಿರಬೆಕು.

*

ದಿವ್ಯದ ಮೂಲಕ ಪ್ರತಿಯೊಂದನ್ನೂ ಮಾಡಲು ಸಾಧ್ಯ, ಹೃದಯ ಮತ್ತು ಸ್ವಭಾವವನ್ನು ಪರಿಶುದ್ಧಗೊಳಿಸಬಹುದು. ಆಂತರಿಕ ಚೇತನವನ್ನು ಜಾಗೃತ–ಗೊಳಿಸಬಹುದು, ತೆರೆಗಳನ್ನು ತೆಗೆಯಬಹುದು. ದಿವ್ಯಕ್ಕೆ ತನ್ನನ್ನು ತಾನು ದೃಢ ನಂಬಿಕೆ ಮತ್ತು ವಿಶ್ವಾಸಗಳೊಂದಿಗೆ ನೀಡಿದಾಗ ಇವೆಲ್ಲವನ್ನೂ ಮಾಡಬಹುದು – ಮತ್ತು ಒಮ್ಮೆಲೆ ನಮಗೆ ಇದನ್ನು ಮಾಡಲು ಸಾಧ್ಯವಾಗದಿದ್ದರೂ ಸಹ, ನಾವು ಇದನ್ನು ಅಧಿಕಗೊಳಿಸುತ್ತಿದ್ದರೆ, ಅಧಿಕ ಆಂತರಿಕ ನೆರವು ಮತ್ತು ಮಾರ್ಗದರ್ಶನವು ಆಗಮಿಸುವದು ದಿವ್ಯದ ಅನುಭವ ಮತ್ತು ಸಂಪರ್ಕವು ಆಂತರಿಕವಾಗಿ ವೃದ್ಧಿಸುವದು. ಪ್ರಶ್ನಿಸುವ ಮನಸ್ಸು ತನ್ನ ಚಟುವಟಿಕೆಯನ್ನು ಕಡಿಮೆ ಮಾಡಿ, ನಮ್ರತೆ ಮತ್ತು ಸಂಕಲ್ಪವು ನಿನ್ನಲ್ಲಿ ಅಭಿವೃದ್ಧಿಯಾದರೆ, ಇದೊಂದು ಪರಿಪೂರ್ಣ ಸಾಧ್ಯತೆಯಾಗುವದರಲ್ಲಿ ಸಂಶಯವೇ ಇಲ್ಲ. ಆಗ ಇದನ್ನು ಹೊರತುಪಡಿಸಿ ಇನ್ನು ಯಾವ ಬಲ ಮತ್ತು ತಪಸ್ಸಿನ ಅವಶ್ಯಕತೆಯೂ ಇರುವದಿಲ್ಲ.

*

ದಿವ್ಯದಲ್ಲಿ ಸಂಪೂರ್ಣ ಶ್ರದ್ಧೆ ಮತ್ತು ಭರವಸೆಗಳೇ ಈ ಆಂತರಿಕ ಶರಣಾಗತಿಯ ಮೂಲವಾಗಿರುವದು. "ನನಗೆ ದಿವ್ಯವು ಮಾತ್ರ ಬೇಕು ಮತ್ತಿನ್ನೇನೂ ಬೇಕಾಗಿಲ್ಲ" ಎಂಬ ಮನೋಭಾವನೆಯನ್ನು ನಾವು ಹೊಂದಬೇಕು. "ನಿನಗೆ ಅದನ್ನು ಸಹ ಬಿಟ್ಟುಬಿಡಲು ಹೇಳಬಹುದು ಎಂದು ನೀನೇಕೆ ಚಿಂತಿಸುತ್ತಿರುವೆ ಎಂಬುದು ನನಗೆ ಗೊತ್ತಿಲ್ಲ" – ಅದು ಇಲ್ಲದೆ ಹೋದರೆ, ಯೋಗವನ್ನು ಮಾಡಲು ಸಾಧ್ಯವೇ ಆಗುವದಿಲ್ಲ, ನನ್ನನ್ನು ಸಂಪೂರ್ಣವಾಗಿ ಆತನಿಗೆ ನೀಡಲು ಬಯಸುವೆ. ಏಕೆಂದರೆ ನನ್ನ ಜೀವಕ್ಕೆ ಬೇಕಾಗಿರುವದು ಅದೇ. ಹೀಗಾಗಿ ನಾನು ಆತನನ್ನು ಭೇಟಿ ಮಾಡುವೆ ಮತ್ತು ಆತನನ್ನು ಅರಿಯುವೆ. ನಾನು ಅದರ ಹೊರತಾಗಿ ಬೇರೇನನ್ನೂ

ಕೇಳುವದಿಲ್ಲ ಮತ್ತು ನನ್ನಲ್ಲಿಯ ಆತನ ಕ್ರಿಯೆಯು ನನ್ನನ್ನು ಆತನ ಬಳಿಗೆ ಕರೆತರಲಿ, ಆತನ ಕ್ರಿಯೆಯು ರಹಸ್ಯವಾಗಿರಲಿ ಅಥವಾ ಎಲ್ಲರಿಗೂ ತಿಳಿಯುವಂತಿರಲಿ, ತೆರೆಮರೆಯಲ್ಲಿರಲಿ ಅಥವಾ ಪ್ರಕಟವಾಗಿರಲಿ. ನಾನು ನನ್ನ ಕಾಲ ಮತ್ತು ಹಾದಿಯ ಬಗ್ಗೆ ಒತ್ತಾಯಿಸುವದಿಲ್ಲ. ಆತನು ತನ್ನದೇ ಆದ ಕಾಲ ಮತ್ತು ಹಾದಿಯಲ್ಲಿ ಎಲ್ಲವನ್ನೂ ಮಾಡಲಿ; ನನಗೆ ಆತನಲ್ಲಿ ನಂಬಿಕೆ ಇದೆ. ಆತನ ಸಂಕಲ್ಪವನ್ನು ಅಂಗೀಕರಿಸುವೆ. ಆತನ ಬೆಳಕು ಸನ್ನಿಧಿ, ಸಂತಸಗಳಿಗಾಗಿ ದೃಢ ಚಿತ್ತದಿಂದ ಅಭೀಪ್ಸಾಭರಿತನಾಗುವೆ, ಎಲ್ಲಾ ಕಷ್ಟಗಳು ಮತ್ತು ವಿಳಂಬಗಳ ಮೂಲಕ ಆತನ ಮೇಲೆ ಭಾರ ಹಾಕಿ ಸಾಗುವೆ. ಮತ್ತು ಎಂದೆಂದೂ ನನ್ನ ಗುರಿ ಸಾಧನೆಯನ್ನು ಬಿಡುವದಿಲ್ಲ. ನನ್ನ ಮನಸ್ಸು ಮೌನವಾಗಿರಲಿ ಮತ್ತು ಆತನ ಕಡೆ ತಿರುಗಲಿ. ಆತನು ಅದನ್ನು ತನ್ನ ಬೆಳಕಿನತ್ತ ತೆರೆಯಲಿ; ನನ್ನ ಪ್ರಾಣವು ಮೌನವಾಗಿರುವಂತಾಗಲಿ ಮತ್ತು ಆತನ ಕಡೆ ಮಾತ್ರವೇ ತಿರುಗಲಿ ಮತ್ತು ಆತನು ಅದನ್ನು ತನ್ನ ಪ್ರಶಾಂತತೆ ಮತ್ತು ಸಂತಸದ ಕಡೆ ತೆರೆಯಲಿ. ಎಲ್ಲವೂ ಆತನಿಗಾಗಿ ಮತ್ತು ನಾನು ಆತನಿಗಾಗಿ. ಏನೇ ಆದರೂ, ನಾನು ಈ ಅಭೀಪ್ಸೆ ಮತ್ತು ಸ್ವ–ಅರ್ಪಣೆಯಲ್ಲೇ ನಿಲ್ಲುವೆ ಮತ್ತು ಅದು ಖಂಡಿತವಾಗಿ ನೆರವೇರುವದು ಎನ್ನುವ ಪರಿಪೂರ್ಣ ನಂಬಿಕೆಯೊಂದಿಗೆ ಮುಂದುವರಿಯುವೆ. "ಆ ಮನೋಭಾವದ ಕಡೆ ನಾವು ವೃದ್ಧಿಸಬೇಕು; ಏಕೆಂದರೆ, ನಿಶ್ಚಿತವಾಗಿ, ಒಮ್ಮೆಲೆ ಅದನ್ನು ಪರಿಪೂರ್ಣವಾಗಿಸಲು ಸಾಧ್ಯವಿಲ್ಲ, ಮಾನಸಿಕ ಮತ್ತು ಭಾವನಾತ್ಮಕ ಚಲನೆಗಳು ಮಧ್ಯೆ ಬರುವವು, ಆದರೆ ನಾವು ಅದರ ಕಡೆ ಸಂಕಲ್ಪವನ್ನು ಹೊಂದಿದ್ದರೆ, ಅದು ಸತ್ತೆಯಲ್ಲಿ ವೃದ್ಧಿಸುವದು. ಉಳಿದುದು ಅದು ತನ್ನನ್ನು ತಾನು ಪ್ರಕಟಪಡಿಸಿದಾಗ ಮಾರ್ಗದರ್ಶನಕ್ಕೆ ವಿಧೇಯರಾಗಿರುವದು. ಆಗ ನಾವು ನಮ್ಮ ಮಾನಸಿಕ ಮತ್ತು ಭಾವನಾತ್ಮಕ ಚಲನೆಗಳು ಮಧ್ಯೆ ಪ್ರವೇಶಿಸಲು ಅನುಮತಿ ನೀಡಬಾರದು.

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/68–71

ಅತ್ಯಂತ ಮುಖ್ಯವಾದ ಶರಣಾಗತಿಯಾವುದೆಂದರೆ ನಿನ್ನ ವೈಯಕ್ತಿಕತೆಯ ಶರಣಾಗತಿ; ನಿನ್ನ ಸತ್ತೆಯ ಹಾದಿ, ಏಕೆಂದರೆ ಆ ಶರಣಾಗತಿಯಿಂದ ಅದು ಬದಲಾಗಬೇಕಾಗಿದೆ. ನಿನ್ನ ಸ್ವಂತ ಸ್ವಭಾವವನ್ನು ತ್ಯಾಗ ಮಾಡದಿದ್ದರೆ, ಆ ಸ್ವಭಾವವು ಎಂದೆಂದಿಗೂ ಬದಲಾಗುವದಿಲ್ಲ. ಇದೇ ಅತ್ಯಂತ ಪ್ರಮುಖವಾದ ವಿಷಯ. ನೀನು ಕೆಲವು

ನಿರ್ದಿಷ್ಟ ವಿಧಾನಗಳಲ್ಲಿ ಅರ್ಥಮಾಡಿಕೊಳ್ಳುವೆ; ಕೆಲವು ಖಾತ್ರಿಯಾದ ರೀತಿಗಳಲ್ಲಿ ಪ್ರತಿಕ್ರಿಯಿಸುವೆ, ನಿರ್ದಿಷ್ಟ ಭಾವನೆಗಳನ್ನು ಹೊಂದಿರುವೆ. ಕೆಲವು ನಿರ್ದಿಷ್ಟ ರೀತಿಗಳಲ್ಲಿ ಪ್ರಗತಿಯನ್ನು ಹೊಂದುವೆ ಮತ್ತು ಎಲ್ಲದಕಿಂತಲೂ ಹೆಚ್ಚಾಗಿ, ಜೀವನದ ಕಡೆ ಒಂದು ವಿಶೇಷವಾದ ನೋಟವನ್ನು ಹೊಂದಿ ಅದರಿಂದ ಕೆಲವು ಅಂಶಗಳನ್ನು ಅಪೇಕ್ಷಿಸುವೆ – ನಿಜ, ಇದನ್ನೇ ನೀನು ತ್ಯಾಗ ಮಾಡಬೇಕಾಗಿರುವದು. ಅಂದರೆ ನೀನು ನಿಜಕ್ಕೂ ದಿವ್ಯ ಪ್ರಕಾಶವನ್ನು ಸ್ವೀಕರಿಸಿ ಪರಿವರ್ತನೆಯಾಗಬೇಕೆಂದು ಬಯಸಿದರೆ, ನಿನ್ನ ಸತ್ತೆಯ ಇಡೀ ಹಾದಿಯನ್ನು ನೀನು ಅರ್ಪಿಸಬೇಕು – ಅದನ್ನು ತೆರೆಯುವ ಮುಲಕ ಅರ್ಪಿಸಬೇಕು. ಆ ಪ್ರಕ್ರಿಯೆಯಿಂದ ಸತ್ತೆಯು ಅತ್ಯಧಿಕ ಗ್ರಹಣಶೀಲತೆಯನ್ನು ಪಡೆಯುವದು. ಆಗ ನೀನು ಹೇಗಿರಬೇಕೆಂದು ನಿರ್ಧರಿಸುವ ದಿವ್ಯ ಚೇತನವು ನೇರವಾಗಿ ಕ್ರಿಯಾಶೀಲವಾಗುವದು. ಈ ಎಲ್ಲಾ ಚಲನೆಗಳನ್ನು ಹೆಚ್ಚು ನೈಜವಾದ ಚಲನೆಗಳಾಗಿ ಬದಲಾಯಿಸುವದು. ಅಂದರೆ ನಿನ್ನ ನಿಜವಾದ ಸತ್ಯಕ್ಕೆ ಅನುಗುಣವಾಗಿ ಪರಿವರ್ತಿಸುವದು. ನೀನೇನು ಮಾಡುತ್ತಿರುವೆಯೋ ಅದನ್ನು ತ್ಯಾಗಮಾಡುವದಕಿಂತಲೂ ಇದು ಅತ್ಯಂತ ಹೆಚ್ಚು ಮುಖ್ಯವಾದ ವಿಷಯ. ನಾವೇನು ಮಾಡುತ್ತಿರುವೆವೋ (ನಾವೇನು ಮಾಡುತ್ತಿರುವೆವೋ ಅದು ಮುಖ್ಯವೆಂಬುದು ಸ್ಪಷ್ಟವಾಗಿದೆ) ಅದು ಅತ್ಯಂತ ಪ್ರಮುಖವಾದ ವಿಷಯವಲ್ಲ ಆದರೆ ನಾವೇನಾಗಿರುವೆವೋ ಅದು ಬಹಳ ಮುಖ್ಯ. ಯಾವುದೇ ಚಟುವಟಿಕೆಯಾಗಿರಲಿ, ಅದನ್ನು ಯಾವ ರೀತಿಯಲ್ಲಿ ಮಾಡುತ್ತಿರುವೆವು ಎಂಬುದು ಮುಖ್ಯವಲ್ಲ ಆದರೆ ಚೇತನದ ಯಾವ ಅವಸ್ಥೆಯಲ್ಲಿ ಅದನ್ನು ನೆರವೇರಿಸುತ್ತಿರುವೆವು ಎಂಬುದು ಬಹಳ ಮುಖ್ಯ. ನೀನು ಕೆಲಸ ಮಾಡಬಹುದು, ವೈಯಕ್ತಿಕ ಲಾಭದ ಚಿಂತನೆಯಿಲ್ಲದೆ ಅನಾಸಕ್ತ ಕೆಲಸವನ್ನೇ ಕಾರ್ಯದ ಸಂತಸಕ್ಕಾಗಿ ಮಾಡಬಹುದು ಆದರೆ ಅದೇ ಸಮಯದಲ್ಲಿ ಈ ಕೆಲಸವನ್ನು ಬಿಡಲು ನಾವು ಸಿದ್ಧವಾಗಿಲ್ಲದಿದ್ದರೆ ಅಥವಾ ಕೆಲಸವನ್ನು ಬದಲಾಯಿಸಲು ಒಪ್ಪದಿದ್ದರೆ ಅಥವಾ ಕಾರ್ಯದ ವಿಧಾನವನ್ನು ಬದಲಾಯಿಸಲು ಅಂಗೀಕರಿಸದಿದ್ದರೆ, ನಿಮ್ಮದೇ ಆದ ಕಾರ್ಯ ವಿಧಾನಕ್ಕೆ ಅಂಟಿಕೊಂಡಿದ್ದರೆ, ನಿಮ್ಮ ಶರಣಾಗತಿಯು ಸಂಪೂರ್ಣವಾಗಿರುವದಿಲ್ಲ. ನಿನ್ನ ಆಂತರಿಕ ಭಾವನೆಗೆ ಅನುಗುಣವಾಗಿ ಎಲ್ಲವೂ ನೆರವೇರುತ್ತಿದೆ ಎನ್ನುವ ಅವಸ್ಥೆಗೆ ನೀನು ಬರಬೇಕು, ಸ್ಪಷ್ಟವಾಗಿ, ಹೆಚ್ಚು ಹೆಚ್ಚಾದ ಅವಶ್ಯಕತೆಗೆ ಹೊಂದುವಂತೆ, ಅಂದರೆ ಇದನ್ನೇ ಮಾಡಬೇಕಾಗಿದೆ ಮತ್ತು ಈ ನಿರ್ದಿಷ್ಟ ರೀತಿಯಲ್ಲಿ ಎಂಬಂತೆ

ಮತ್ತು ನೀನು ಅದೇ ಕಾರಣದಿಂದಲೇ ಆ ಕೆಲಸವನ್ನು ಮಾಡುವೆ. ಯಾವುದೇ ರೀತಿಯ ಚಟ ಅಥವಾ ರೂಢಿಗಾಗಿ, ಅಂಟಿಕೊಳ್ಳುವಿಕೆ ಅಥವಾ ಆದ್ಯತೆಗಾಗಿ ಮಾಡುತ್ತಿಲ್ಲ. ಹಾಗು ಯಾವುದೇ ಕಲ್ಪನೆಗಾಗಿಯೂ ಅಲ್ಲ, ಅದೇ ಮಾಡಲು ಅತ್ಯುತ್ತಮವಾದ ಕಾರ್ಯ ಎಂಬ ಕಲ್ಪನೆಗೆ ಆದ್ಯತೆ ನೀಡಿಯೂ ಅಲ್ಲ – ಇಲ್ಲವಾದಲ್ಲಿ ನಿನ್ನ ಶರಣಾಗತಿಯು ಪೂರ್ಣವಾಗಿಲ್ಲ ಎಂದೇ ಹೇಳಬೇಕಾಗುವದು. ಎಲ್ಲಿಯವರೆಗೂ ನೀನು ಯಾವುದಕ್ಕಾದರೂ ಅಂಟಿಕೊಂಡಿರುವೆಯೋ, ಎಲ್ಲಿಯವರೆಗೂ "ಇದು ಬದಲಾಗಬಹುದು, ಅದು ಬದಲಾಗಬಹುದು, ಆದರೆ ಅದು, ಅದು ಬದಲಾಗುವದಿಲ್ಲ" ಎನ್ನುವದೇನೋ ನಿನ್ನಲ್ಲಿ ಇರುವದೋ, ಯಾವುದರ ಬಗ್ಗೆ ಯಾದರೂ ನೀನು "ಅದು ಬದಲಾಗುವದಿಲ್ಲ" (ಅದು ಬದಲಾಗಲು ಅಂಗೀಕರಿಸುವದಿಲ್ಲ ಎಂಬ ಕಾರಣಕ್ಕಾಗಿಯಲ್ಲ, ಆದರೆ ಅದು ಬದಲಾಗುವದರ ಬಗ್ಗೆ ನೀನು ಚಿಂತಿಸಲಾರೆಯೋ), ನಿನ್ನ ಶರಣಾಗತಿಯು ಪೂರ್ಣವಾಗಿಲ್ಲ.

ನಿನ್ನ ಕ್ರಿಯೆಯಲ್ಲಿ, ನಿನ್ನ ಕಾರ್ಯದಲ್ಲಿ "ನಾನು ಆ ಕೆಲಸವನ್ನು ಮಾಡಬೇಕೆಂದು ಯಾರೋ ನನಗೆ ಹೇಳಿರುವರು ಅದರಿಂದ ಆ ಕೆಲಸವನ್ನು ಮಾಡುತ್ತಿರುವೆ" ಎಂಬ ಅಲ್ಪ ಸ್ವಲ್ಪ ಭಾವನೆಯೇನಾದರೂ ನಿನಗೆ ಇದ್ದರೆ ಮತ್ತು ಸತ್ತೆಯು ಪೂರ್ತಿಯಾಗಿ ಸಂಸಕ್ತವಾಗದಿದ್ದರೆ ಅಥವಾ ನಿಷ್ಠಾವಂತ ಪಾಲನೆಯನ್ನು ಮಾಡದಿದ್ದರೆ, ಮತ್ತು ನೀನು ಕೆಲಸವನ್ನು ಮಾಡುವದಿಲ್ಲ ಏಕೆಂದರೆ ನಿನಗೆ ಅದನ್ನು ಮಾಡಲೇಬೇಕು ಎಂಬ ಭಾವನೆಯು ಉಂಟಾಗಿದೆ ಮತ್ತು ನೀನು ಅದನ್ನು ಮಾಡಲು ಬಯಸುವೆ; ಏನಾದರೂ ತಡೆ ಹಿಡಿದರೆ, ದೂರ ನಿಂತರೆ, ವಿಭಿನ್ನವಾದರೆ, "ಅದನ್ನು ಅದೇ ರೀತಿಯಲ್ಲಿ ಮಾಡಬೇಕೆಂದು ನನಗೆ ಹೇಳಲಾಗಿತ್ತು ಅದರಿಂದ ನಾನು ಅದನ್ನು ಹಾಗೆ ಮಾಡಿದೆ", ಇದರ ಅರ್ಥ ನೀನು ಮತ್ತು ಶರಣಾಗತಿಯ ನಡುವೆ ಒಂದು ದೊಡ್ಡ ಕಂದರವಿದೆ ಎಂದು ನೈಜ ಶರಣಾಗತಿ ಯಾವುದೆಂದರೆ ನಮಗೆ ಈ ಪೂರ್ಣ ಆಂತರಿಕ ಸಂಸಕ್ತತೆಯು ಬೇಕು, ನಾವು ಅದನ್ನು ಹೊಂದಿದ್ದೇವೆ ಎಂಬ ಭಾವನೆ: ನೀನು ಅದಿಲ್ಲದೆ ನಿನಗೆ ಏನನ್ನು ಮಾಡಲು ಕೊಡಲಾಗಿದೆಯೋ ಅದನ್ನು ಮಾಡಲಾರೆ ಮತ್ತು ನಿನಗೆ ಏನನ್ನೂ ಮಾಡಲು ಕೊಡಲಾಗಿಲ್ಲವೋ ಅದನ್ನು ಮಾಡಲಾರೆ. ಆದರೆ ಮತ್ತೊಂದು ಕ್ಷಣದಲ್ಲಿ ಕಾರ್ಯವು ಬದಲಾಗಬಹುದು; ಅದು ಬೇರೆಯಾಗಬೇಕೆಂದು ನಿರ್ಧಾರಿತವಾಗಿದ್ದರೆ ಯಾವುದೇ

ಕ್ಷಣದಲ್ಲಿ ಅದು ಬೇರೆಯೇನೋ ಆಗಬಹುದು. ಅಲ್ಲಿಯೇ ಮಣಿಯುವ ಅಥವಾ ಬಗ್ಗುವ ಪ್ರಕ್ರಿಯೆಯು ಕಾಣಿಸಿಕೊಳ್ಳುವದು: ಅದು ಬಹಳ ದೊಡ್ಡ ಭಿನ್ನತೆಯನ್ನು ಉಂಟುಮಾಡುವದು. ಯಾರು ಕೆಲಸ ಮಾಡುವರೋ ಅವರಿಗೆ ಹೀಗೆ ಹೇಳಲಾಗುವದು **"ಹೌದು ಕಾರ್ಯ, ಅದೇ ನಿನ್ನ ಶರಣಾಗತಿಯ ವಿಧಾನ."** ಇದನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಳ್ಳಲಾಗಿದೆ, ಆದರೆ ಅದು ಪ್ರಾರಂಭ ಮಾತ್ರ. ಈ ಹಾದಿಯು ಪ್ರಗತಿಪರವಾಗಿರಬೇಕು. ಅದು ಪ್ರಾರಂಭ ಮಾತ್ರ. ನಿನಗೆ ಅರ್ಥವಾಯಿತೇ?

CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/372–73 – ಶ್ರೀಮಾತೆ

ದಯವಿಟ್ಟು ವಾಸ್ತವಿಕ ರೂಪದ ಒಂದು ಯೋಗದ ಕಡೆ ನನಗೆ ದೀಕ್ಷೆ ನೀಡಿ. ನಿಮ್ಮ ಆದೇಶಗಳನ್ನು ಅಕ್ಷರಶಃ ಪಾಲಿಸುವೆನೆಂದು ದೃಢವಾಗಿ ಮಾತು ಕೊಡುವೆ ಮತ್ತು ಹಾದಿಯಲ್ಲಿನ ಸಂಶಯಗಳು ಮತ್ತು ಕಷ್ಟಗಳ ಬಗ್ಗೆ ನಿಮ್ಮ ಸಲಹೆಯನ್ನು ಪಡೆಯುವೆ.

ಗಮನವನ್ನು ಕೇಂದ್ರೀಕರಿಸುವದರ ಹೊರತಾಗಿ ಈ ಯೋಗದಲ್ಲಿ ಮತ್ತಿನ್ಯಾವ ವಿಧಾನವೂ ಇಲ್ಲ. ಹೃದಯದಲ್ಲಿಯ ಧ್ಯಾನವು ಉತ್ತಮವಾದ ಅಯ್ಕೆ. ಶ್ರೀಮಾತೆಯ ಶಕ್ತಿ ಮತ್ತು ಸಾನ್ನಿಧ್ಯವನ್ನು ಆಹ್ವಾನಿಸಿ ಈ ಸತ್ತೆಯನ್ನು ಅವರ ಸುಪರ್ದಿಗೆ ತೆಗೆದುಕೊಂಡು ಮತ್ತು ಆಕೆಯ ಶಕ್ತಿಯ ಕಾರ್ಯಗಳ ಮೂಲಕ ಚೇತನವನ್ನು ಪರಿವರ್ತನೆಗೊಳಿಸಲು ಪ್ರಾರ್ಥಿಸಿ. ನಾವು ತಲೆ ಅಥವಾ ಹುಬ್ಬುಗಳ ಮಧ್ಯದಲ್ಲಿ ಸಹ ಗಮನವನ್ನು ಕೇಂದ್ರೀಕರಿಸಬಹುದು ಆದರೆ ಅನೇಕರಿಗೆ ಇದು ಬಹಳ ಕಷ್ಟಕರವಾದ ಮಾರ್ಗ. ಮನಸ್ಸು ಮೌನವಾಗಿ, ಕೇಂದ್ರೀಕರಣವು ಬಲವಾಗಿ ಮತ್ತು ಅಭೀಪ್ಸೆಯು ತೀವ್ರವಾದಾಗ ಅನುಭವವು ಉಂಟಾಗಲು ಪ್ರಾರಂಭವಾಗುವದು. ಶ್ರದ್ಧೆಯು ಹೆಚ್ಚಾದಷ್ಟು, ಫಲವು ಹೆಚ್ಚು ಕ್ಷಿಪ್ರವಾಗುವದು. ಉಳಿದುದಕ್ಕೆ ನಾವು ನಮ್ಮ ಪ್ರಯತ್ನಗಳನ್ನೇ ಸಂಪೂರ್ಣವಾಗಿ ಅವಲಂಬಿಸಿರಬಾರದು. ಆದರೆ ದಿವ್ಯದೊಂದಿಗೆ ಒಂದು ಸಂಪರ್ಕವನ್ನು ದೃಢಪಡಿಸಿಕೊಳ್ಳುವದರಲ್ಲಿ ಯಶಸ್ವಿಯಾಗಬೇಕು ಮತ್ತು ಶ್ರೀಮಾತೆಯವರ ಸಾಮರ್ಥ್ಯ ಮತ್ತು ಸನ್ನಿಧಿಯ ಒಂದು ಗ್ರಹಣ ಶಕ್ತಿಯನ್ನು ಪಡೆಯಬೇಕು.

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/216–17

ಸಾಧನೆಗೆ ಯಾರೂ ಯೋಗ್ಯರಾದವರಲ್ಲ – ಅಂದರೆ ತನ್ನದೇ ಏಕೈಕ ಸಾಮರ್ಥ್ಯದ ಮೂಲಕ ಯಾರೂ ಅದನ್ನು ಮಾಡಲು ಸಾಧ್ಯವಿಲ್ಲ. ನಮ್ಮ ಅಂಗೀಕಾರ ಮತ್ತು ಅಭೀಪ್ಸೆಯೊಂದಿಗೆ ತನ್ನದಲ್ಲದ ಈ ಕಾರ್ಯವನ್ನು ಮಾಡಬಲ್ಲ ಶಕ್ತಿಯನ್ನೂ ಸಂಪೂರ್ಣವಾಗಿ ಒಳಗೆ ತರಲು ನಮ್ಮನ್ನು ಸಿದ್ಧಪಡಿಸಿಕೊಳ್ಳುವದು ಮಾತ್ರವೇ ನಮ್ಮ ಕಾರ್ಯ.

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/32

ಬಲಿಷ್ಠತೆಯ ಬಗ್ಗೆ ಪ್ರಶ್ನಿಸುವದು ಉಪಯೋಗರಹಿತ. ಯಾರಿಗೂ ಆ ಸಾಮರ್ಥ್ಯವಿಲ್ಲ – ಏಕೆಂದರೆ ಎಲ್ಲಾ ಮಾನವ ಸತ್ತೆಗಳು ದೋಷಗಳು ಮತ್ತು ಅಸಾಮರ್ಥ್ಯಗಳಿಂದ ತುಂಬಿವೆ – ಅತ್ಯುನ್ನತ ಸಾಧಕರೂ ಸಹ ಇದಕ್ಕೆ ಹೊರತಾಗಿಲ್ಲ. ಇದು ಅಭೀಪ್ಸೆ, ದಿವ್ಯತೆಯ ಅನುಗ್ರಹದಲ್ಲಿ ನಂಬಿಕೆ ಮತ್ತು ದಿವ್ಯವು ನಿನ್ನಲ್ಲಿ ಕೆಲಸ ಮಾಡಲು ಅನುವು ಮಾಡಿಕೊಡುವದು ಮತ್ತು ತಿರಸ್ಕರಿಸದಿರುವದು.

*

ಯಾವುದೇ ನಿರ್ದಿಷ್ಟ ಗುಣದ ಇರುವಿಕೆಯು ಯಾರನ್ನಾದರೂ ಯೋಗ ಮಾಡಲು ಬಲಿಷ್ಠನನ್ನಾಗಿಸುವದೇ? ಅಥವಾ ಅದರ ಇಲ್ಲದಿರುವಿಕೆಯು ಅಸಮರ್ಥನನ್ನಾಗಿಸುವದೇ? ಎಂದು ಹೇಳುವದು ಕಷ್ಟ. ಯಾರಿಗಾದರೂ ಬಲವಾದ ಲೈಂಗಿಕ ಆಸಕ್ತಿಗಳು, ಸಂಶಯಗಳು, ಪ್ರತಿಭಟನೆಗಳು ಇರಬಹುದು ಆದರೂ ಕೊನೆಯಲ್ಲಿ ವಿಜಯಿಗಳಾಗಬಹುದು, ಇದ್ಯಾವುದೂ ಇಲ್ಲದ ಬೇರೆಯವರು ಜಯವನ್ನು ಪಡೆಯದಿರಬಹುದು. ನಮಗೆ ಒಂದು ಮೂಲಭೂತ ಪ್ರಾಮಾಣಿಕತೆಯು ಇದ್ದರೆ, ಏನೆಲ್ಲಾ ಆದರೂ ಅನುಭವಿಸಿ ಮುಂದೆ ಸಾಗುವ ಸಂಕಲ್ಪವಿದ್ದರೆ ಮತ್ತು ಮಾರ್ಗದರ್ಶನವನ್ನು ಅನುಸರಿಸಲು ಸನ್ನದ್ಧರಾಗಿದ್ದರೆ, ಅದೇ ಸಾಧನೆಯಲ್ಲಿ ಅತ್ಯುತ್ತಮ ರಕ್ಷಣೆ.

*

ತುಲನಾತ್ಮಕವಾದುದಾಗಿದೆ ಯೋಗ ಮಾಡಲು ಅವಶ್ಯಕವಾದ ಬಲಿಷ್ಠತೆ – ನೈಜ ಬಲಿಷ್ಠತೆಯು ಆತ್ಮದ ಕರೆಯಿಂದ ಮತ್ತು ದಿವ್ಯಕ್ಕೆ ನಮ್ಮನ್ನು ತೆರೆದುಕೊಳ್ಳುವ ಸಾಮರ್ಥ್ಯವನ್ನು ಅವಲಂಬಿಸಿದೆ. ನಿನಗೆ ಅದು ಇದ್ದರೆ, ನೀನು ಶಕ್ತನಾಗಿರುವೆ

ಮತ್ತು ನಿನ್ನ ಹಿಂದಿನ ಕ್ರಿಯೆಗಳು ಹಾದಿಗೆ ಅಡ್ಡಬರಲಾರವು. ನಿನ್ನ ಭೂತ ಕಾಲವು ಭವಿಷ್ಯತ್ತನ್ನು ಕಟ್ಟಿ ಹಾಕಲಾರದು. ಆದರೆ ನೀನು ಅದನ್ನು ಮುಗಿಸಬೇಕು ಎನ್ನುವದಂತೂ ನಿಜ. ಅದನ್ನು ತಿರಸ್ಕರಿಸಬೇಕು ಮತ್ತು ಹೊಸ ಹಾದಿಗಳಿಗೆ ತಿರುಗಬೇಕು. – ಇಲ್ಲದೆಹೋದರೆ ಭೂತ ಕಾಲವು ವರ್ತಮಾನ ಕಾಲವಾಗಿ ಉಳಿಯುವದು. ಆದರೆ ಅದು ನಿನ್ನಲ್ಲಿಯ ಸಂಕಲ್ಪ ಮತ್ತು ಆತ್ಮದ ಕರೆಯ ಪ್ರಶ್ನೆಯಾಗಿದೆ. ನಿನ್ನ ಆತ್ಮದ ಕರೆಯ ಬಗ್ಗೆ ನಿನಗೆ ನಂಬಿಕೆ ಇದ್ದರೆ ನೀನು ಯೋಗವನ್ನು ಮಾಡದೆ ಇರಲು ಯಾವ ಕಾರಣವೂ ಇಲ್ಲ. ನೀನು ಮಾಡಬೇಕಾದುದು ಇಷ್ಟೇ. ನಿನ್ನ ಅಭೀಪ್ಸೆಯನ್ನು ನೀನು ಇಟ್ಟುಕೊಂಡಿರಬೇಕು. ಮತ್ತು ಆಂತರಿಕ ಸಂಯೋಜನೆಯನ್ನು ಕಳೆದುಕೊಳ್ಳಬಾರದು – ನಂತರ ಶ್ರೀಮಾತೆಯವರ ಚಿಂತನೆ ಮತ್ತು ನೆರವು ನಿನ್ನೊಂದಿಗೆ ಇರುವದು ಮತ್ತು ನೀನು ನಿನ್ನ ಹಾದಿಯನ್ನು ಕಾಣುವೆ.

*

ನೀನು ಒಳಗಾಗಬಹುದಾದ ಅಸಮರ್ಥತೆಯ ಬಗ್ಗೆ ಮಾತನಾಡುವೆ. ಆದರೆ ಅದು ಬಲಿಷ್ಠತೆ ಅಥವಾ ಅಸಮರ್ಥತೆಯ ಪ್ರಶ್ನೆಯಲ್ಲ. ತನ್ನದೇ ಸ್ವಂತ ಬಲದಿಂದ ಮುಂದುವರೆಯಬಲ್ಲ ಯಾವ ಮಾನವನೂ ಇಲ್ಲ. ಅಥವಾ ತನ್ನ ಸ್ವಂತ ಬಲಿಷ್ಠತೆಯ ಮೂಲಕ ಸಾಧನೆಯ ಗುರಿಯನ್ನು ತಲುಪಲು ಸಾಧ್ಯವಿಲ್ಲ. ದಿವ್ಯವು ನೀಡುವ ಅನುಗ್ರಹದ ಮೂಲಕ ಮತ್ತು ದಿವ್ಯ ಅನುಗ್ರಹವನ್ನು ಅವಲಂಬಿಸುವದರ ಮೂಲಕ ಮಾತ್ರ ಗುರಿಯನ್ನು ತಲುಪಲು ಸಾಧ್ಯ. ನಿನಗಿಂತಲೂ ಹೆಚ್ಚು ಬಲಿಶಾಲಿಯಾದ ಶಕ್ತಿಯನ್ನು ನೀನು ಮೊದಲನೆಯದಾಗಿ ಹಾಗು ಕೊನೆಯದಾಗಿ ಅವಲಂಬಿಸಬೇಕು. ನಿನ್ನ ನಂಬಿಕೆಯು (ಶ್ರದ್ಧೆಯು) ಎಡವಿದರೆ ನಿನ್ನನ್ನು ಕಾಪಾಡಲು ಆ ಶಕ್ತಿಯನ್ನು ಆಹ್ವಾನಿಸಬೇಕು; ನಿನ್ನ ಸುತ್ತಲೂ ಇರುವ ದುಷ್ಟ–ಸಂಕಲ್ಪ ಮತ್ತು ವಿರೋಧವನ್ನು ಎದುರಿಸಲು ನಿನ್ನ ಶಕ್ತಿಯು ಸಾಕಾಗದಿದ್ದರೆ, ಅದರ ಜಾಗದಲ್ಲಿ ಆ ಶಕ್ತಿಯನ್ನು ಸ್ವೀಕರಿಸಲು ಸಾಧ್ಯವಾಗುವಂತೆ ನಿನ್ನನ್ನು ತೆರೆದುಕೋ.

ಶ್ರೀಮಾತೆಯವರ ಸಹಾಯ ಮತ್ತು ನನ್ನ ನೆರವು ನಿನ್ನೊಂದಿಗೆ ಯಾವಾಗಲೂ ಇರುವದು. ನೀನು ಸಂಪೂರ್ಣವಾಗಿ ಅದರ ಕಡೆ ತಿರುಗಬೇಕು ಅಷ್ಟೇ. ಮತ್ತು ಅದು ನಿನ್ನ ಮೇಲೆ ಕ್ರಿಯಾಶೀಲವಾಗುವದು.

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/33–34

ದಿವ್ಯ ಅನುಗ್ರಹದ ಬಗ್ಗೆ ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ – ನೀನು ಅದು ದಿವ್ಯ ತರ್ಕದಂತಿದ್ದು ಮಾನವರ ಬುದ್ಧವಂತಿಕೆಯ ರೀತಿಯಲ್ಲಿ ಕೆಲಸ ಮಾಡುವದು ಎಂದು ಯೋಚಿಸುತ್ತಿರುವಂತಿದೆ. ಆದರೆ ಅದು ಹಾಗಿಲ್ಲ. ಜೊತೆಗೆ ಅದು ವಿಶ್ವಾತೀತ ದಿವ್ಯ ಕರುಣೆಯೂ ಸಹ ಅಲ್ಲ, ಅದನ್ನು ಸಮೀಪಿಸುವ ಎಲ್ಲರ ಮೇಲೆ ನಿಷ್ಪಕ್ಷಪಾತವಾಗಿ ಕೆಲಸ ಮಾಡುವದು ಮತ್ತು ಎಲ್ಲರ ಪ್ರಾರ್ಥನೆಗಳನ್ನೂ ಸಹ ಅಂಗೀಕರಿಸುವದು. ಅದು ಉತ್ತಮರನ್ನು ಆರಿಸಿಕೊಂಡು ಪಾಪಿಗಳನ್ನು ತಿರಸ್ಕರಿಸುವದಿಲ್ಲ. ಹಿಂಸಕನಾದ Saul of Tarsusನಿಗೂ ದಿವ್ಯ ಅನುಗ್ರಹವು ನೆರವಾಯಿತು. ಅದು ವಿಷಯ ಲಂಪಟನಾದ St. Augustineನ ಬಳಿ ಸಹ ಬಂದಿತು. ಕುಖ್ಯಾತ Jagaiಮತ್ತು Madhaiರಿಗೂ ನೆರವಾಯಿತು. ಬಿಲ್ವ ಮಂಗಲ್ ಮತ್ತು ಇತರ ಅನೇಕರ ಬದಲಾವಣೆಗೂ ಕಾರಣವಾಯಿತು. ಮಾನವ ನೈತಿಕ ಮೇಧಾವಿತನದ ಮಡಿವಂತಿಕೆಗೆ ಇದು ಕಳಂಕವನ್ನು ಉಂಟುಮಾಡಬಹುದು ಸಹ. ಆದರೆ ಅದು ಉತ್ತಮವಾದವರನ್ನು ಸಹ ರಕ್ಷಿಸಬಹುದು – ಅವರನ್ನು ಸ್ವ–ಧರ್ಮಶೀಲತೆಯಿಂದ ಗುಣಪಡಿಸಬಹುದು ಮತ್ತು ಇವುಗಳ ಆಚೆಯಲ್ಲಿರುವ ಇನ್ನೂ ಹೆಚ್ಚು ಪರಿಶುದ್ಧ ಚೇತನರ ಕಡೆ ಕರೆದುಕೊಂಡು ಹೋಗಬಹುದು. ಯಾವುದೇ ನಿಯಮಕ್ಕಿಂತಲೂ ಅದು ಹಿರಿದಾದುದಾಗಿದೆ. ಅದು ಬ್ರಹ್ಮಾಂಡದ ನಿಯಮವನ್ನು ಸಹ ಮೀರಿದುದಾಗಿದೆ. – ಏಕೆಂದರೆ ಎಲ್ಲಾ ಆಧ್ಯಾತ್ಮಿಕ ಋಷಿಗಳು ನಿಯಮ ಮತ್ತು ಅನುಗ್ರಹದ ನಡುವಿನ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಅದು ಅವ್ಯವಸ್ಥಿತವಾದುದಲ್ಲ – ಏನೆಂದರೆ ಅದಕ್ಕೆ ತನ್ನದೇ ಆದ ವಿವೇಚನಾ ಶಕ್ತಿಯು ಇದೆ. ಆ ಶಕ್ತಿಯು ಮನಸ್ಸು ಅಥವಾ ಯಾವುದೇ (ಸಾಮಾನ್ಯ) ಸಾಮರ್ಥ್ಯದ ದೃಷ್ಟಿಕೋನವನ್ನು ಹೊಂದಿರದೆ ವಿಭಿನ್ನವಾದ ನೋಟದಿಂದ ವಸ್ತುಗಳು, ಜನರು, ಸಮರ್ಪಕವಾದ ಕಾಲ ಮತ್ತು ಋತುಗಳನ್ನು ವೀಕ್ಷಿಸುವದು. ಮನಸ್ಸಿನಿಂದ ಲೆಕ್ಕ ಹಾಕಲು ಅಸಾಧ್ಯವಾದ ಉಪಾಯಗಳ ಮೂಲಕ ಅನೇಕ ಸಲ ಗಾಢವಾದ ಅವಕುಂಠನಗಳ ಹಿಂದೆ ವ್ಯಷ್ಟಿಯಲ್ಲಿ ಅನುಗ್ರಹದ ಒಂದು ಅವಸ್ಥೆಯನ್ನು ಸಿದ್ಧಪಡಿಸಲಾಗುವದು ಮತ್ತು ಅನುಗ್ರಹದ ಅವಸ್ಥೆಯು ಆಗಮಿಸಿದಾಗ, ಸ್ವತಃ ಅನುಗ್ರಹವು ಕ್ರಿಯಾಶೀಲವಾಗುವದು. ಇಲ್ಲಿ ಒಟ್ಟು ಮೂರು ಶಕ್ತಿಗಳು ಇರುವವು: (1) ಕರ್ಮ ಅಥವಾ ಇನ್ಯಾವುದೋ ಬ್ರಹ್ಮಾಂಡದ ನಿಯಮ; (2) ದಿವ್ಯ ಕರುಣೆ,

ಅಂದರೆ ನಿಯಮದ ಜಾಲಗಳ ಮೂಲಕ ತಾನು ಸಂಪರ್ಕಿಸಲು ಸಾಧ್ಯವಾಗುವದೆಲ್ಲದರ ಮೇಲೆ ಕ್ರಿಯಾಶೀಲವಾಗಿ ಅವುಗಳಿಗೆ ಅವಕಾಶ ನೀಡುವ ಶಕ್ತಿ ಮತ್ತು (3) ದಿವ್ಯ ಅನುಗ್ರಹ, ಇದು ಹೆಚ್ಚು ತಡೆಯಲು ಅಸಾಧ್ಯವಾದುದು. ಆಹ್ವಾನಕ್ಕೆ ಪ್ರತಿಕ್ರಿಯಿಸಬಹುದಾದುದೇನಾದರೂ ಜೀವನದ ಎಲ್ಲಾ ಅಸಂಬದ್ಧತೆಗಳ ಹಿಂದೆ ಇದೆಯೇ ಎಂಬುದೇ ಈಗಿನ ಪ್ರಶ್ನೆ. ಜೊತೆಗೆ ದಿವ್ಯತೆಯ ಅನುಗ್ರಹದ ಪ್ರಕಾಶಕ್ಕೆ ಅದು ಸಿದ್ಧವಾಗುವವರೆಗೂ ಇರಬಹುದಾದ ಯಾವುದೇ ಕಷ್ಟದೊಂದಿಗೆ ತನ್ನನ್ನು ತಾನು ತೆರೆದುಕೊಳ್ಳುವದೇ? – ಅದು ಯಾವುದೋ ಒಂದು ಮಾನಸಿಕ ಅಥವಾ ಭಾವನಾತ್ಮಕ ಚಲನೆಯಾಗಿರಬಾರದು ಆದರೆ ಆಂತರಿಕವಾದುದೇನೋ ಆಗಿರಬೇಕು ಮತ್ತು ಅದನ್ನು ಆಂತರಿಕ ದೃಷ್ಟಿಯು ನೋಡುವಂತಿರಬೇಕು. ಅದು ಅಸ್ತಿತ್ವದಲ್ಲಿ ಇದ್ದು ಮುಂದುಗಡೆ ಕ್ರಿಯಾಶೀಲವಾದರೆ, ಅಗ ಅನುಕಂಪವು ಕೆಲಸ ಮಾಡುವದು, ಆದರೆ ಖಾತ್ರಿಯಾದ ನಿರ್ಧಾರ ಅಥವಾ ಬದಲಾವಣೆಗೆ ಎದುರು ನೋಡುತ್ತಾ ಅನುಗ್ರಹದ ಪೂರ್ಣ ಕ್ರಿಯೆಯು ಕಾಯಬಹುದು ಸಹ. ಏಕೆಂದರೆ ಇದನ್ನು ಭವಿಷ್ಯತ್ಕಾಲಕ್ಕೆ ಮುಂದೂಡಬಹುದು ಕೂಡ. ಉದಾಹರಣೆಗೆ ಸತ್ತೆಯ ಸ್ವೀಕರಿಸಲು ಸಿದ್ಧವಾಗಿಲ್ಲದಿರುವ ಯಾವುದೋ ಒಂದು ಭಾಗ ಅಥವಾ ಅಂಶವು ಮಧ್ಯೆ ಬರಬಹುದು.

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/169

ಬಲ ಮತ್ತು ಅನುಗ್ರಹದ ಬಗ್ಗೆ ನಾನು ಹೇಳುವದರಲ್ಲಿ ಅರ್ಥಮಾಡಿಕೊಳ್ಳಲಾಗದೆ ಇರುವದೇನು ಇಲ್ಲ. ಆಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆ ಬಲವು ಒಂದು ಮೌಲ್ಯವನ್ನು ಹೊಂದಿದೆ. ಆದರೆ ಅದನ್ನು ಬಲದಿಂದ ಮಾತ್ರ ಮಾಡಬಹುದು ಮತ್ಯಾವುದರಿಂದಲೂ ಮಾಡಲು ಸಾಧ್ಯವಿಲ್ಲ ಎಂದು ಹೇಳುವದು ಒಂದು ತೀವ್ರವಾದ ಉತ್ಪ್ರೇಕ್ಷೆ ಎಂದು ಮಾತ್ರ ಹೇಳಬಹುದು. ಅನುಗ್ರಹವು ಒಂದು ಅನ್ವೇಷಣೆಯಲ್ಲ ಅದು ಆಧ್ಯಾತ್ಮಿಕ ಅನುಭವದ ಒಂದು ಸತ್ಯ. ಮೇಧಾವಿಗಳು ಮತ್ತು ಬಲಿಷ್ಠರಾದವರು ಅನೇಕರನ್ನು ಉಪಯೋಗರಹಿತರೆಂದು ತಿಳಿದಿದ್ದರು. ಆದರೆ ಅವರು ಅನುಗ್ರಹದಿಂದ ದೊಡ್ಡ ಸಾಧನೆಗಳನ್ನು ಮಾಡಿರುವರು. ಅನಕ್ಷರಸ್ಥರು, ಮಾನಸಿಕ ಶಕ್ತಿ ಅಥವಾ ತರಬೇತಿ ಇಲ್ಲದವರು, ಸಂಕಲ್ಪ ಅಥವಾ ಸ್ವರೂಪ ಚಿತ್ರಣದ ಬಲವಿಲ್ಲದವರು ಸಹ ಅಭೀಪ್ಸೆಯನ್ನು ಹೊಂದಿ ಇದ್ದಕ್ಕಿದ್ದಂತೆ ಅಥವಾ ಶೀಘ್ರವಾಗಿ

ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಹೊಂದಿರುವರು. ಏಕೆಂದರೆ ಅವರು ಶ್ರದ್ಧಾಯುಕ್ತರಾಗಿದ್ದರು ಅಥವಾ ಅವರು ಪ್ರಾಮಾಣಿಕರಾಗಿದ್ದರು. ಈ ಅಂಶಗಳೆಲ್ಲವೂ ಆಧ್ಯಾತ್ಮಿಕ ಚರಿತ್ರೆಯ ಸತ್ಯಗಳಾಗಿದ್ದು ಅತ್ಯಂತ ಸಾಮಾನ್ಯ ಆಧ್ಯಾತ್ಮಿಕ ಅನುಭವಗಳೂ ಸಹ ಆಗಿವೆ; ಇವುಗಳು ಊಹೆಗಳು ಮಾತ್ರ ಎಂದು ಪರಿಗಣಿಸಿ ಅವುಗಳ ಬಗ್ಗೆ ವಾದ ಮಾಡಿ, ಚರ್ಚಿಸಿ ಅಲ್ಲಗೆಳೆಯುವ ಅವಶ್ಯಕತೆಯಾದರೂ ಏನು? ಎಂದು ನನಗೆ ಅರ್ಥವಾಗುತ್ತಿಲ್ಲ. ಬಲಾಢ್ಯತೆ, ಅದು ಆಧ್ಯಾತ್ಮಿಕವಾಗಿದ್ದರೆ, ಆತ್ಮ ಸಾಕ್ಷಾತ್ಕಾರದತ್ತ ಕೊಂಡೊಯ್ಯುವ ಒಂದು ಶಕ್ತಿಯಾಗಿರುವದು. ಪ್ರಾಮಾಣಿಕತೆಯು ಇದಕ್ಕಿಂತಲೂ ಒಂದು ಅಧಿಕವಾದ ಸಾಮರ್ಥ್ಯ. ಎಲ್ಲದಕಿಂತಲೂ ಒಂದು ದೊಡ್ಡ ಶಕ್ತಿ ಅನುಗ್ರಹ. ಯಾರಾದರೂ ಪ್ರಾಮಾಣಿಕವಾಗಿದ್ದರೆ, ಅವರು ದೀರ್ಘ ಕಾಲದ ವಿಳಂಬ ಮತ್ತು ಅಗಾಧವಾದ ಕಷ್ಟಗಳನ್ನು ಸಹ ಸಹಿಸಿಕೊಂಡು ಮುನ್ನಡೆಯುವರು ಎಂದು ನಾನು ಅನೇಕ ಸಲ ಹೇಳಿರುವೆ. ದಿವ್ಯತೆಯ ಅನುಗ್ರಹದ ಬಗ್ಗೆ ನಾನು ಪುನಃ ಪುನಃ ಮಾತನಾಡಿರುವೆ. ಗೀತೆಯ ಕೆಳಗಿನ ಸಾಲುಗಳನ್ನು ಬಹಳ ಸಲ ಸೂಚಿಸಿರುವೆ:

ಅಹಂ ತ್ವ "ಸರ್ವಪ" ಪೇಭ್ಯೋ ಮೋಕ್ಷಯಿ ಸ್ಯ "ಮಿಮ" ಶುಚಃ.

"ಎಲ್ಲಾ ಪಾಪ ಮತ್ತು ದುಷ್ಟತೆಗಳಿಂದ ನಿನ್ನನ್ನು ಸಂರಕ್ಷಿಸುವೆ ದುಃಖಿಸಬೇಡ."

CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/172 – ಶ್ರೀ ಅರವಿಂದರು

ಶ್ರೀ ಅರವಿಂದರ
'ಗೀತಾ ಪ್ರಬಂಧಗಳು'

– ಅನುವಾದ: ಜಾನ್ವಿ

41
ಎರಡನೆಯ ಸರಣಿ:
ಅಧ್ಯಾಯ – 5
ದೈವೀ ಸತ್ಯ ಮತ್ತು ಮಾರ್ಗ (5/4)

ಈಶ್ವರನು ಸಮಗ್ರ ವಿಶ್ವದ ಅಸ್ತಿತ್ವವನ್ನು ತನ್ನೊಳಗೆ ಭರಿಸಿದ್ದಾನೆ. ಎಲ್ಲವೂ ಅವನಲ್ಲಿ ಇವೆ, ಭೌತಿಕವಾಗಿ ಅಥವಾ ಶಾರೀರಿಕವಾಗಿ ಅಲ್ಲ ಆದರೆ ಸಾರ–ಸತ್ವದ ರೂಪದಲ್ಲಿ ಎಲ್ಲವೂ ಅವನಲ್ಲಿವೆ. ಈ ವಿಸ್ತೃತ ಆಧ್ಯಾತ್ಮಿಕ ಪರಿಕಲ್ಪನೆಯ ಪ್ರಕಾರ ಈ ಆತ್ಮ ಸತ್ತೆ (ವೈಯಕ್ತಿಕ ಆತ್ಮ) ಎಂಬುದು ನಿಜವಾಗಿ ಬಹಳ ಒರಟಾದ ಪರಿಕಲ್ಪನೆ, ಅಲ್ಲೇನೂ ಸ್ಥೂಲವಾದ ಭೌತಿಕ ವಿಭಜನೆ ಇರುವುದಿಲ್ಲ. ಅಂತರಿಕ್ಷದಲ್ಲಿ ನಾವು ವಿಭಜನೆ ಮಾಡಿ ಮಾತನಾಡುತ್ತೇವಲ್ಲ ಅದೆಲ್ಲ ಕೇವಲ ಪರಿಕಲ್ಪನೆ ಅಷ್ಟೇ, ಅಲ್ಲಿ ಯಾವ ವಾಸ್ತವಿಕ ವಿಭಜನೆಗಳಿರುವುದಿಲ್ಲ. ಅದೆಲ್ಲ ಕೇವಲ ನಮ್ಮ ಮನಸ್ಸು ಮತ್ತು ಇಂದ್ರಿಯಗಳ ಕಲ್ಪನೆ ಅಷ್ಟೇ. ನಿಜವಾಗಿ ನೋಡಿದರೆ ಇಲ್ಲಿ ಕೂಡ (ನಮ್ಮ ಪ್ರಪಂಚದಲ್ಲಿ ಸಹ) ಇರುವುದೆಲ್ಲವೂ ಆಧ್ಯಾತ್ಮಿಕ ಸಹವರ್ತಿ ಅಸ್ತಿತ್ವವೇ, ಆಧ್ಯಾತ್ಮಿಕ ಏಕಾತ್ಮತೆ ಮತ್ತು ಸಹಬಾಳ್ವೆಯೇ. ಎಲ್ಲದರಲ್ಲೂ ಒಂದು ಮೂಲಭೂತವಾದ ಸತ್ಯ ಇದೆ. ಆದರೆ ಅದನ್ನು ನಾವು ಪರಮ ಪುರುಷನ ಪ್ರಜ್ಞೆಗೆ ಹೋಗಿ ಮುಟ್ಟುವವರೆಗೆ ನಮ್ಮ ಜಗತ್ತಿಗೆ ಅನ್ವಯಿಸಲಾರೆವು. ಅಲ್ಲಿಯವರೆಗೆ ಇಂಥ ವಿಚಾರಗಳೆಲ್ಲ ಕೇವಲ ಬೌದ್ಧಿಕ ಪರಿಕಲ್ಪನೆಗಳಾಗಿಯೇ ತೋರುವುವು, ನಮ್ಮ ವಾಸ್ತವಿಕ ಪ್ರಪಂಚದ ಅನುಭವದ ಜೊತೆ ಹೊಂದಾಣಿಗೆ ಆಗುವುದಿಲ್ಲ. ಆಗ ದೇಶ ಕಾಲಗಳ ಭಾಷೆಯನ್ನೇ ಬಳಸಿ "ಆಕಾಶದ ಮೂಲ ಅವಕಾಶ ತತ್ವದಲ್ಲಿ ಎಲ್ಲವೂ ಹೇಗೆ ನೆಲೆಸಿರುವುದೋ ಹಾಗೆ ಸಮಗ್ರ ವಿಶ್ವವು ದಿವ್ಯ ಸ್ವಯಂ ಸ್ಥಿತ ಪುರುಷನಲ್ಲಿ ನೆಲೆಸಿರುತ್ತವೆ. ಸರ್ವತ್ರವೂ ಎಲ್ಲೆಲ್ಲೂ ಸಂಚರಿಸುವ, ಹರಡಿರುವ ವಾಯುವು ಆಕಾಶದ ಅವಕಾಶದಲ್ಲಿ ಇರುವಂತೆ ಎಲ್ಲವೂ ನನ್ನೊಳಗೆ ಎಂದು ತಿಳಿ ಎಂದು ಭಗವಂತ ಹೇಳಿದ್ದಾನೆ" ಎಂದು ಹೇಳುತ್ತೇವೆ (9.6). ಆತ್ಮ ಒಂದೇ, ಅಲ್ಲೇನೂ

ಅನೇಕತೆ ಇಲ್ಲ. ಆದರೆ ವಿಶ್ವವು ಎಲ್ಲವೂ ತಾನೇ, ಎಲ್ಲವೂ ತನ್ನದೇ ಪ್ರಕಟಣೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ವಿಶ್ವವು ಎಲ್ಲ ಅನಂತ ವೈವಿಧ್ಯಗಳ ಸಮೂಹ ರೂಪ ಎಂಬುದು ನಮಗೆ ವಿದಿತವಾಗುತ್ತದೆ. ಏಕ ಎಂಬುದು ಸತ್ತೆ ಅಥವಾ ಅಸ್ತಿತ್ವ; ಅನೇಕ ಎಂಬುದು ಆ ಸತ್ತೆಯ ಶಕ್ತಿ, ಈ ಶಕ್ತಿಯೇ ಚಲಿಸುತ್ತದೆ, ಸೃಷ್ಟಿಸುತ್ತದೆ, ಅವಿಕಾರಿಯಾದ ಪರಮ ಆತ್ಮನ ಕಾರ್ಯವನ್ನು ಬೆಂಬಲಿಸುತ್ತ ಎಲ್ಲ ಕೆಲಸಗಳನ್ನು ಮಾಡುತ್ತದೆ. ಪರಮ ಆತ್ಮವು ಎಲ್ಲ ಅಸ್ತಿತ್ವಗಳಲ್ಲಿ ಇರುವುದಿಲ್ಲ, ಅಥವಾ ಯಾವುದರಲ್ಲೂ ಇರುವುದಿಲ್ಲ. ಅಂದರೆ ಅದು ಸಂಪೂರ್ಣ ರೂಪದಿಂದ (ಪ್ರಮಾಣದಿಂದ) ಯಾವುದರಲ್ಲೂ ಇರಲಾರದು ಆಕಾಶವು ಎಲ್ಲೆಡೆ ಇದೆ, ಆದರೆ ಅದು ಸಂಪೂರ್ಣವಾಗಿ ಯಾವುದರಲ್ಲೂ ಇಲ್ಲ ಅಥವಾ ಎಲ್ಲವನ್ನೂ ಸೇರಿಸಿದರೆ ಆಕಾಶವಾಗಿ ಬಿಡುವುದು ಎಂದೂ ಇಲ್ಲ. ಎಲ್ಲ ರೂಪಾಕಾರಗಳು ಆಕಾಶದಿಂದಲೇ ನಿರ್ಮಾಣ ಹೊಂದಿದ್ದರೂ ಸಹ ಆಕಾಶವು ಸಂಪೂರ್ಣವಾಗಿ ಯಾವುದರಲ್ಲೂ ಇಲ್ಲ. ಹಾಗೆಯೇ ಭಗವಂತನು ಯಾವ ಪದಾರ್ಥದಲ್ಲಿಯೂ ಸಂಪೂರ್ಣವಾಗಿ ಇಲ್ಲ, ಯಾವ ಪದಾರ್ಥವೂ ಅವನನ್ನು ಇಡಿಯಾಗಿ ಪ್ರಕಟಿಸುವುದಿಲ್ಲ. ಆಕಾಶದಲ್ಲಿ ವಾಯು ಇದೆಯಾದರೂ ಎಲ್ಲ ವಾಯುವನ್ನು ಹಿಡಿದಿಟ್ಟರೆ ಆಕಾಶವಾಗಲಾರದು. ಅದೇ ರೀತಿ ಭಗವಂತನಾದರೂ ಚಲನೆ, ಗತಿ, ಅವನ ಎಲ್ಲದರಲ್ಲೂ ಎಲ್ಲರಲ್ಲೂ ಆ ಪದಾರ್ಥ ಅಥವಾ ಜೀವಿಯ ಒಡೆಯನಾಗಿ ಇದ್ದಾನೆ. ಇವೆರಡೂ ಅವನ ಸತ್ಯಗಳೇ – ಅವನು ಚಲನೆಯೂ ಹೌದು ನಿಶ್ಚಲನೂ ಹೌದು, ಏಕನೂ ಹೌದು ಅನೇಕನೂ ಹೌದು. ಒಂದು ವಿಶ್ವಾತ್ಮಕ ಚಲನೆಗೂ ಅವನ ಸ್ವಯಂ ಅಸ್ತಿತ್ವ ಇರುವ ಸಂಬಂಧವನ್ನು ತೋರಿಸಿದರೆ ಇನ್ನೊಂದು ವಿಶ್ವಾತ್ಮಕ ಚಲನೆಗೂ ಅವನ ನಿಶ್ಚಲ ಅಸ್ತಿತ್ವ ಇರುವ ಘನಿಷ್ಠ ಸಂಬಂಧವನ್ನು ತೋರಿಸುತ್ತದೆ. ಒಂದು ಎಲ್ಲವನ್ನೂ ತನ್ನೊಳಗೆ ಭರಿಸಿಕೊಂಡಿರುವ ಅವಿಕಾರಿ ಸತ್ತೆ, ಇನ್ನೊಂದು ಅದೇ ಸತ್ತೆಯ ಸ್ವಯಂಚಾಲಿತ, ಸ್ವಯಂ ಪ್ರೇರಿತ ಚಲನೆಯ, ಕಾರ್ಯದ ಪ್ರಕಟ ರೂಪವಾಗಿದೆ.

ಪುರುಷೋತ್ತಮನು ತನ್ನ ವಿಶ್ವಾತೀತ ಸ್ತರದಿಂದ ಕೆಳಕ್ಕೆ ದೃಷ್ಟಿ ಹರಿಸುತ್ತಾನೆ. ಪ್ರಕೃತಿಯ ಮೇಲೆ ಒತ್ತಡ ಹೇರಿ, ಪ್ರಪಂಚದಲ್ಲಿನ ಏನೆಲ್ಲ ಭೂತ ಗ್ರಾಮಗಳನ್ನು ತನ್ನೊಳಗೆ ಲಯಮಾಡಿ ವಿಲೀನಗೊಳಿಸಿಕೊಂಡಿರುವಳೋ ಅವೆಲ್ಲವನ್ನೂ ಪುನಃ ಪ್ರಕಟ ಮಾಡಿ ಸೃಷ್ಟಿಯಲ್ಲಿ ತರುವಂತೆ ಮಾಡುತ್ತಾನೆ. ಪ್ರಕೃತಿ ಎಲ್ಲವನ್ನೂ ಅಭಿವ್ಯಕ್ತಗೊಳಿಸಿ ಪ್ರಳಯ ಕಾಲದಲ್ಲಿ ತನ್ನೊಳಗೆ ಸಮಾಹಿಸಿಕೊಂಡಿತ್ತೋ ಅವೆಲ್ಲವನ್ನು

ಪುನಃ ಚಕ್ರಾನುವರ್ತಿ ಕ್ರಮದಲ್ಲಿ ವ್ಯಕ್ತವಾಗುವಂತೆ ಮಾಡುತ್ತಾನೆ. ಇದು ನಿರಂತರವಾದ ಕ್ರಿಯೆ – ಈ ವಿಶ್ವದಲ್ಲಿನ ಸಮಸ್ತ ವಸ್ತುಗಳು ಅಥವಾ ಇಡೀ ಸೃಷ್ಟಿಯ ಈ ಒತ್ತಾಯದ ಅಥವಾ ಬಲವಂತದ ಚಲನೆಗೆ ತಲೆಬಾಗಲೇಬೇಕು. ಅಭಿವ್ಯಕ್ತಿ ಅಥವಾ ಪ್ರಕಟೀಕರಣದ ನಿಯಮಗಳಿಗೆ ಎಲ್ಲವೂ ಅಧೀನವಾಗಿರಲೇ ಬೇಕಾಗುತ್ತದೆ. ಜೀವ (ಜೀವಾತ್ಮ) ತನ್ನ ಸಂಭೂತಿಯ (Becoming) ಚಕ್ರದಲ್ಲಿ ಸುತ್ತುತ್ತದೆ, ಅದು ದೈವೀ ಪ್ರಕೃತಿಯ ನಿಯಮವಾಗಿದೆ "ಪ್ರಕೃತಿಂ ಮಾಮಿಕಾಮ್" "ಸ್ವಾಂ ಪ್ರಕೃತಿಮ್" ಈ ಪ್ರಕೃತಿಯು ಈಶ್ವರನ ಶಕ್ತಿಯೇ ಈ ಸೃಷ್ಟಿ–ಸ್ಥಿತಿ–ಲಯ ಚಕ್ರ ಭ್ರಮಣದಲ್ಲಿ ಜೀವವು ಅದೋ ಅಥವಾ ಇದೋ ರೂಪ, ವ್ಯಕ್ತಿತ್ವ ತಾಳುತ್ತಲೇ ಇರುತ್ತದೆ. ಈ ಭ್ರಮಣದಲ್ಲಿ ಅದು ಪ್ರಕೃತಿಯಲ್ಲಿ ಪ್ರಕಟವಾದಾಗಿನ ತನ್ನ ಸತ್ತೆಯ ಸ್ವ–ಧರ್ಮವನ್ನು, ನಿಯಮವನ್ನು ಕೂಡ ಅನುಸರಿಸುತ್ತದೆ. ಅದು ಮೇಲಕ್ಕೇರಬಹುದು, ಸ್ವಲ್ಪ ಕೆಳಕ್ಕಿಳಿಯಬಹುದು, ಅವಿದ್ಯೆಯಲ್ಲಾಗಲಿ, ಜ್ಞಾನದಲ್ಲಾಗಲಿ, ನಿಶ್ಚಲತೆಯಲ್ಲಿಯೂ, ಸಕ್ರಿಯ ಸ್ಥಿತಿಯಲ್ಲಿಯೂ ಅಥವಾ ಈ ಚಕ್ರದ ಸುತ್ತುವಿಕೆಯಲ್ಲಿ ಶಾಂತವಾಗಿ ವಿರಮಿಸಬಹುದು. ಈ ಎಲ್ಲ ಅವಸ್ಥೆಗಳೂ, ಸ್ಥಿತಿಗಳೂ ಸಹಜವಾಗಿ ಬರುತ್ತವೆ. ಅಜ್ಞಾನದಲ್ಲಿದ್ದುದಾದರೆ ಅದು ಪ್ರಕೃತಿಯ ದುಂಡಾವರ್ತಿ ಸುಳಿಯಲ್ಲಿ ಸಿಕ್ಕಿ ಬಿದ್ದಿರುತ್ತದೆ, ಅಲ್ಲಿ ಅದು ಚಲನೆಯ ಅಧೀನವಾಗಿರುತ್ತದೆ, "ಅವಶಂ, ಪ್ರಕೃತೀರ್ವಶಾತ್" (9.8). ದೈವೀ ಪ್ರಜ್ಞೆಯನ್ನು ಆಧರಿಸಿದರೆ ಮಾತ್ರ ಜೀವವು ಸ್ವತಂತ್ರವಾಗಬಲ್ಲದು, ಪ್ರಭುತ್ವ ಸಾಧಿಸಬಲ್ಲದು. ಈಶ್ವರನೂ ಸಹ ಈ ಪರಿಭ್ರಮಣದಲ್ಲಿ ಇರುತ್ತಾನೆ, ಆದರೆ ಅದರ ಅಧೀನನಾಗಿ ಅಲ್ಲ, ಬದಲಾಗಿ ಅದರ ಮಾರ್ಗದರ್ಶಕನಾಗಿರುತ್ತಾನೆ, ಈಶ್ವರನ ಸಂಪೂರ್ಣ ಸತ್ತೆಯು ಈ ಚಕ್ರದಲ್ಲಿ ಬರುವುದಿಲ್ಲ ಬದಲಾಗಿ ಸತ್ತೆಯ (ಜೀವಿಯ) ಶಕ್ತಿಯಾಗಿ ಅದರ ಸಹವರ್ತಿಯಾಗಿ ಅದರ ನಿರೂಪಕನಾಗಿ ಬರುತ್ತಾನೆ, ಅವನು ತನ್ನ ಪ್ರಕೃತಿಯ ನಿಯಾಮಕ ಪ್ರಭುವಾಗಿರುತ್ತಾನೆ, ಅಧ್ಯಕ್ಷನಾಗಿ ಇರುತ್ತಾನೆ – ಪ್ರಕೃತಿಯಲ್ಲಿ ಜನಿಸಿದವನಾಗಿ ಅಲ್ಲ, ಬದಲಾಗಿ ಸೃಜನಶೀಲ ಆತ್ಮವಾಗಿ ಸೃಷ್ಟಿಯಲ್ಲಿನ ಎಲ್ಲ ವಸ್ತುಗಳನ್ನು ಪ್ರಕೃತಿಯು ಸೃಷ್ಟಿಸುವ ಹಾಗೆ ಮಾಡುತ್ತಾನೆ. ತನ್ನ ಶಕ್ತಿಯ ಮೂಲಕ ಪ್ರಕೃತಿಯ ಜೊತೆ ವ್ಯವಹರಿಸುತ್ತಾನೆ. ಆಕೆಯ ಎಲ್ಲ ಕಾರ್ಯಗಳಲ್ಲಿ ಅವನ ಪಾಲು ಇರುತ್ತದೆ ಅನ್ನುವುದು ನಿಜವಾದರೂ ಸಹ, ಅವನು ಪ್ರಕೃತಿ ಮತ್ತು ಅದರ ಎಲ್ಲ ಕಾರ್ಯಗಳಿಂದ ಅಲಿಪ್ತನಾಗಿದ್ದಾನೆ. ಅವನು ಅವೆಲ್ಲಗಳಿಂದ ಆಚೆ ಇದ್ದಾನೆ. ಪ್ರಕೃತಿಯ ವಿಶ್ವಾತ್ಮಕ ಕಾರ್ಯಗಳ ಮೇಲೆ ಅವನು ಆರೂಢನಾಗಿದ್ದಾನೆ, ಅವನು ಸಮಗ್ರ

ವಿಶ್ವದ ಒಡೆಯನಾಗಿದ್ದಾನೆ. ಪ್ರಕೃತಿಯ ಯಾವ ಕಾರ್ಯಗಳಲ್ಲಿಯೂ ಅವನು ಮುಳುಗಿ ಮಗ್ನನಾಗಿಲ್ಲ. ಅವನು ಬಯಕೆಗಳಿಂದ ಮುಕ್ತನಾಗಿದ್ದಾನೆ, ಪ್ರಕೃತಿಯ ಯಾವ ಕಾರ್ಯಗಳಿಂದಲೂ ಅವನು ಬಂಧಿತನಾಗಿರುವುದಿಲ್ಲ. ಅವನು ಪ್ರಕೃತಿಯ ಎಲ್ಲ ಕಾರ್ಯಗಳಿಂದಲೂ ಆಚೆಗಿದ್ದಾನೆ. ಅವನು ಅನಂತನು, ಅವನು ಪ್ರಕೃತಿಯ ಎಲ್ಲ ಕಾರ್ಯಗಳಿಗಿಂತಲೂ ಮೊದಲೇ ಉಪಸ್ಥಿತನಾಗಿರುವವನು. ಅವನು ಮೊದಲೂ ಇದ್ದಾನೆ, ಕಾರ್ಯಗಳು ನಡೆದಿರುವಾಗಲೂ ಇದ್ದಾನೆ. ಕಾಲ ಚಕ್ರದಲ್ಲಿ ಅವು ಕಣ್ಮರೆಯಾದರೂ ಅವನು ಇರುತ್ತಾನೆ. ಅವನು ಅವಿಕಾರಿ, ಅವಿಚಲ, ಯಾವ ವಿಕಾರ, ವಿಕೃತಿ ಮಾರ್ಪಾಡು ಏನೂ ಅವನನ್ನು ಸ್ಪರ್ಶಿಸಲಾರವು. ಅವನು ಶಾಂತನಾಗಿರುತ್ತ ಎಲ್ಲವನ್ನೂ ವ್ಯಾಪಿಸಿರುತ್ತಾನೆ. ಅವನೇ ವಿಶ್ವಾಧಾರನಾಗಿದ್ದಾನೆ, ಪ್ರಕೃತಿಯ ವಿಶ್ವದ ಯಾವ ಬದಲಾವಣೆಗಳೂ ಅವನನ್ನು ಸ್ಪರ್ಶಿಸುವುದಿಲ್ಲ. ಏಕೆಂದರೆ ಅವನು ಅವುಗಳ ಬೆಂಬಲಕ್ಕೆ ಸಹಾಯಕ್ಕೆ ಇದ್ದಾನೆಯೇ ಹೊರತು ಅವುಗಳಲ್ಲಿ ಭಾಗವಹಿಸುವುದಿಲ್ಲ. ಆ ಹಿರಿಯ ಉನ್ನತ ಪರಮ ಪುರುಷನು ಸದಾ ಅಬಾಧಿತನು, ಏಕೆಂದರೆ ಅವನು ಸದಾ ಎಲ್ಲವನ್ನೂ ಮೀರಿ ಆಚೆಗಿದ್ದಾನೆ.

ಆದರೆ ಈ ವಿಶ್ವಾತ್ಮಕ ಕರ್ಮವು ದಿವ್ಯ ಈಶ್ವರೀ ಪ್ರಕೃತಿಯ ಕರ್ಮವಾಗಿರುವುದರಿಂದ "ಸ್ವಾಂ ಪ್ರಕೃತಿಂ" (4.6) ಮತ್ತು ಈಶ್ವರನು ತನ್ನ ಪ್ರಕೃತಿಯಿಂದ ವಿಭಕ್ತನಾಗಿರುವುದು ಅಸಾಧ್ಯವಾಗಿರುವುದರಿಂದ ಪ್ರಕೃತಿಯು ಏನೆಲ್ಲ ಸೃಷ್ಟಿ ಮಾಡಿದರೂ ಅವನು ಅಂತರ್ನಿವಾಸಿಯಾಗಿ ಎಲ್ಲದರಲ್ಲೂ ಇರುತ್ತಾನೆ. ಈ ಅಂತರ್ನಿವಾಸಿ ಸಂಬಂಧವೇನೂ ಈಶ್ವರನ ಸಮಗ್ರ ಸ್ವರೂಪ ಸತ್ಯವಲ್ಲ. ಆದರೂ ನಾವು ಈ ಸತ್ಯವನ್ನು ಉಪೇಕ್ಷಿಸಬಾರದು. ಮಾನವ ಶರೀರದಲ್ಲಿ ಈಶ್ವರ ಇದ್ದೇ ಇರುತ್ತಾನೆ, ಅವನ ಈ ಅಂತರ್ನಿವಾಸಿ ಸಾನಿಧ್ಯವನ್ನು ನಿರ್ಲಕ್ಷಿಸುವುದು, ಮಾನವನ ರೂಪದಲ್ಲಿರುವ ಭಗವಂತನನ್ನು ವಿಕೃತ ಮುಖವಾಡವೆಂದು ತಿರಸ್ಕರಿಸುವುದು ಭ್ರಮೆ ಹಿಡಿದ ಮೂಢರ ಲಕ್ಷಣ. ಅವರು ಭಗವಂತನ ಉಪಸ್ಥಿತಿಯನ್ನು ಅರಿಯದೇ ಹೋಗುತ್ತಾರೆ. ಅವತಾರ ತಾಳಿ ಬಂದಾಗಲೂ ಭಗವಂತನು ಪ್ರಜ್ಞಾಯುಕ್ತ ಮಾನವನ ರೂಪದಲ್ಲಿದ್ದರೂ, ಮಾಯಾ ಸ್ವರೂಪದಿಂದ ಮರೆಯಲ್ಲಿದ್ದರೂ, ಅವನ ಇರುವಿಕೆಯ ಆಭಾಸ ಇಂಥ ಭ್ರಮಾಧಿಷ್ಠಿತ ಮೂಢರಿಗಾಗುವುದಿಲ್ಲ, ಎಲ್ಲೋ ಕೆಲ ಮಹಾತ್ಮರಿಗೆ, ತಮ್ಮ ಅಹಂನ ಪರಿಭಾವನೆಯಲ್ಲಿ ಯಾರು ಮುಳುಗಿ ಹೋಗಿರುವುದಿಲ್ಲವೋ ಹಾಗೂ ಯಾರು ಅಂತರ್ನಿವಾಸಿಯಾದ ಭಗವಂತನಿಗೆ ತೆರೆದುಕೊಂಡಿರುವರೋ

ಅವರಿಗೆ ಮಾತ್ರ ಗುಪ್ತ ರೂಪದಲ್ಲಿರುವ ಈಶ್ವರ ಬಗ್ಗೆ ಗೊತ್ತು. ತಾವು ಯಾರನ್ನು ಆರಾಧಿಸುತ್ತಾರೋ, ಎಲ್ಲದರ ಆಚೆಗಿರುವ ಪರಮ ದೈವತವನ್ನು ಕೊಂಡಾಡುತ್ತಾರೋ ಆ ಅನಿರ್ವಚನೀಯ ಪರಮಾತ್ಮನೇ ಇಲ್ಲಿರುವುನೆಂಬ ನಿತಾಂತ ಸತ್ಯವನ್ನು ಅವರು ಮಾತ್ರ ಬಲ್ಲರು. ಅವರು ಅವನ ಉಚ್ಚತಮ ಅವಸ್ಥೆಯನ್ನು ಬಲ್ಲರು, ಅವನೇ ಎಲ್ಲದರ ಪ್ರಭು, ಸಮಗ್ರ ಅಸ್ತಿತ್ವದ ಒಡೆಯನೇ ಅವನು, ಅವನ ಎಲ್ಲ ಪ್ರಕಟ ವಸ್ತುಗಳ ಅಂತರಂಗದಲ್ಲಿ ಇದ್ದಾನೆ, ಆದರೂ ಅವನು ಎಲ್ಲದಕ್ಕಿಂತ ಉಚ್ಚತಮ ಸತ್ತೆಯುಳ್ಳವನು, ಅವನು ಎಲ್ಲವನ್ನೂ ಮೀರಿದ ಪರಮ ಪುರುಷ, ಅವನೇ ಪರಮ ದೈವತ ಎಂಬುದನ್ನು ಅವರು ಗುರುತಿಸುತ್ತಾರೆ. ಉಳಿದಂತೆ ಪ್ರಕೃತಿಯಲ್ಲಿ ಪ್ರಕಟವಾಗಲೆಂದು ತನಗೆ ತಾನೇ ಹಾಕಿಕೊಂಡ ಮಿತಿ, ಸೀಮಿತತೆ, ವಿಶ್ವದಲ್ಲಿ ಪ್ರಕಟನಾಗಲು ಅದು ಬೇಕೆಂಬುದನ್ನು ಅವರು ಬಲ್ಲವರಿರುತ್ತಾರೆ. ಪ್ರಕೃತಿಯಲ್ಲಿ ಏನೇ ವೈವಿಧ್ಯಗಳಿರಲಿ, ಎಷ್ಟೇ ವೈವಿಧ್ಯಗಳಿರಲಿ ಎಲ್ಲವೂ ಆಂತರಿಕವಾಗಿ ಭಗವಂತನೇ, ಅವನ ಅಂಶವೇ ಸರ್ವಂ ವಾಸುದೇವಮಿದಮ್. ಅಂಥ ಮಹಾತ್ಮರು ಅವನನ್ನು ಕೇವಲ ವಿಶ್ವಾತೀತ ಪುರುಷನೆಂದು ಮಾತ್ರ ಅಲ್ಲ, ಅವನು ವಿಶ್ವದಲ್ಲಿ ಎಲ್ಲದರಲ್ಲೂ ಸಮಾಧಿಷ್ಠಿತನಾಗಿದ್ದಾನೆ, ಎಲ್ಲ ಚಲನೆಯ ಹಿಂದೆ ಆ ಭಗವಂತನೇ ಇದ್ದಾನೆ ಎಂದು ಅರಿತು ಆರಾಧಿಸುತ್ತಾರೆ. ಅವರು ಈ ಸತ್ಯವನ್ನು ಕೇವಲ ಅರಿತಿಲ್ಲ ಬದಲಾಗಿ ಈ ಸತ್ಯವನ್ನೇ ಜೀವಿಸುತ್ತಾರೆ. ಅವನನ್ನು ವಿಶ್ವಾತೀತನಾಗಿ ನಿರಾಕಾರನೆಂದೂ, ವಿಶ್ವ ಅಂತರ್ಯಾಮಿಯಾಗಿ ವಿಶ್ವಾತ್ಮಕನಾಗಿ ಸಗುಣ ಸಾಕಾರನೆಂದೂ ಅರಿತು ತಮ್ಮ ಕರ್ಮಗಳನ್ನು ಕರ್ಮ ಫಲಗಳನ್ನು ಅವನಿಗೆ ಅರ್ಪಿಸುತ್ತಾರೆ. ಎಲ್ಲೆಲ್ಲೂ ಎಲ್ಲದರಲ್ಲೂ ಅವರಿಗೆ ಅವನೇ ಕಾಣುತ್ತಾನೆ, ಅಂತರ್ಬಾಹ್ಯತಃ ವ್ಯಾಪ್ತನಾದ ಭಗವಂತನನ್ನೇ ಅವರು ಸದಾ ಕಾಣುತ್ತಿರುತ್ತಾರೆ. ಇದೇ ಅವನನ್ನು ಸಾಕ್ಷಾತ್ಕರಿಸಿಕೊಳ್ಳುವ ಸರಿಯಾದ ಮಾರ್ಗ ಎಂಬುದನ್ನವರು ಬಲ್ಲರು. ಇದೇ ನಿಜವಾದ ಸಮಗ್ರ ಸತ್ಯದ ದಾರಿ, ವಿಶ್ವಾತ್ಮಕನೂ ವಿಶ್ವಾತೀತನೂ ಹಾಗೂ ವೈಯಕ್ತಿಕ ಭಗವಂತನನ್ನು ತಿಳಿಯಲು ಇದೊಂದೇ ದಾರಿ.

(ಸಶೇಷ)

ಶ್ರೀ ಅರವಿಂದರ
'ಉರ್ವಶಿ'

– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ

9

ಅಧ್ಯಾಯ 3

ಬತ್ತಲ ದೇಹಕೆ ಪತ್ತಲನುಡಿಸಿ ಕತ್ತಲಿರದ ಹಿತ್ತಲಿನೊಳಕೊಯ್ದು ಮಿರಿಯ
ನೀರೆಯವಳನು ಬರಿಯ ನಾರಿಯಾಗಿಸಲಾಯಿತು.

ಇಂತು ಇಳಿವೇಳು–ಏರೇಳು ಲೋಕಗಳ ಲಾವಣ್ಯವನಿಂದು ಮರ್ತ್ಯನೋರ್ವನ
ಮನೆಯಂಗಳದಿ ಮುಚ್ಚಿಡಲಾಯಿತು.

ಪ್ರಚಂಚದ ಪುನಶ್ಚೇತನಕೆಂದಿರುವ ಪ್ರೇಮದ ಪಾರಾವಾರವನೆಲ್ಲ ಪುರೂರವನ
ಪ್ರಾಸಾದಕೆಂದಿರುವ ಪನ್ನೀರಾಗಿಸಲಾಯಿತು.

ಓ, ಅಪ್ಸರಲೋಕದಾ ಅಧಿದೇವಿಯನೇ ಅಂಗೈಯಲಿರಿಸಿಕೊಂಡಿರುವಾ
ಅಂದಗಾರನವನೆಷ್ಟು ಅದೃಷ್ಟಶಾಲಿ!

ಮನೋಕೋಶವೊಂದು ಮುಗಿಲಿಳಿದು ಮರ್ತ್ಯನ ಮನೆಯಾಳ್ತನಕೆಂದು
ಮೇಯ್ಯ್ ಮುರಿದಿಹುದು.

ದ್ಯುಲೋಕವನಿಳಿದ ದಿವ್ಯಾಂಗವದು ದಿನದಿನದ ದುಡಿಮೆಗಾಗೆಂದು ದಣಿದು
ದಂಡಿಸಿಹುದು.

ವೈಶ್ವಿಕ ವಿದ್ಯಮಾನಗಳಿಗೆ ಒಪ್ಪಿತವಿಹ ವಜ್ರಾಂಗನ ವಾರಾಂಗನೆಯಿಂದು
ಒಪ್ಪೊತ್ತಿನಾಸೆಗೆಂದಿಲ್ಲಿ ಒತ್ತೆಯಾಳಾಗಿಹಳು.

ತೋಷದ ತಪ್ಪಲುವೀಡಿನೊಳು ತಪ್ಪಡಿಯನಿಟ್ಟ ತಾರಕೆಯಿಂದು ತಿಂಗಳನೆದೆಯಲಿ
ತಲೆಯಿಟ್ಟು ತೂಣಗೊಂಡಿಹಳು.

ಆನಂದದ ಆಗರವಿಹ ಆಲಯದಿಂದಿಲ್ಲಿ ಆಗಮಿಸಿಹ ಆರುಷಿಯವಳು ಆಣ್ಮನ
ಆಲಿಂಗನದಿ ಆಮೋದದಲಿಹಳು.

ಮೈಯಿರದ ಮನದ ಮೌನದಿಂದಿಳಿದ ಮಾನಿನಿಯವಳು ಮದನನಿತ್ತ
ಮುತ್ತಿನೆರಕದಿ ಮಂತ್ರಮೋಹಿತಳಿಹಳು.

ಭೂ–ಭುವನಗಳ ಬಂಧುಗಳನೆಲ್ಲ ಬರಸೆಳೆವ ಭಾಮಿನಿಯವಳು ಬಾಲಕರನು ಹೆರುವ ಭಾರ್ಯೆಯಾಗಿಲ್ಲಿ ಬಂದಿಹಳು.

ಸುವರ್ಣಾಂಗಿಯೊಡನೆಯ ಸಂಸರ್ಗದಿಂದ ಸೋಮವಂಶದ ಸಂತತಿಯದು ಸಂತವಿಸಿತ್ತು. ಸಂಭವಿಸಿತ್ತು.

ಉನ್ನನದ ಉಪಾಧಿಗಳೆನಿಸಿರುವಾ ಉಷರ್ಬುಧರೇ ಉರ್ವಶಿಯ ಉದರದಿಂ ಉದಿಸಿಬಂದಿಲ್ಲಿ ಉತ್ಸರ್ಜಿಸಿಹರು.

ಪರಂಧಾಮದಿ ಪ್ರಜ್ವಲಿಸುವ ಪುಂಜತೇಜದಾ ಪೂರ್ಣತತಿಗಳೇ ಪುರೂರವನ ಪುತ್ರರಾಗಿಲ್ಲಿ ಪದವಿರಿಸಿಹರು.

ಚೈತ್ಯಲೋಕದಾ ಚೈತ್ರವನದಿ ಚರಿಸುವಾ ಚಾರುಮೂರ್ತಿಗಳೇ ಚಂದ್ರಾಮರಾಯನ ಚಿರಂಜೀವಿಗಳಾಗಿಲ್ಲಿ ಚಿತ್ರಿತರಿಹರು.

ಮನೋಮಯ ಮೇಲೆ ಮುಚ್ಚಿದ ಮರ್ತ್ಯವನೇ ಮೆಚ್ಚಿದ ಮಾನಿನಿಯವಳು ಮಂಡಲವನೇ ಮಂತ್ರಮಯವಾಗಿಸಿಹಳು.

ಆಯುಷ್ಮತಿಯವಳ ಆತ್ಮವದು ಆವಾಸಿಸಿದ ಆವರಣವನು ಆನಂದಮಯಗೊಳಿಸಿಹಳು ಆಹ್ಲಾದಮಯಗೊಳಿಸಿಹಳು.

ಪೂರ್ಣಚಂದ್ರನ ಪ್ರಾಣಕಾಂತೆಯಳು ಪರಿವೃತವಿಹ ಪ್ರಕೃತಿಯಲಿ ಪ್ರೇಮದ ಪೌರ್ಣಮಿಯನೇ ಪೂರೈಸಿಹಳು.

ಸೌದಾಮಿನಿಯನೇ ಸ್ನುಷೆಯಾಗಿ ಸಂಪಾದಿಸಿಹ ಸಾಮ್ರಾಜ್ಯದಲಿಂದು ಸಂಭ್ರಮದ ಸೆಳೆಮಿಂಚಾಡಿತ್ತು.

ಮುಗಿಲಕೊಂಬೆಯಿಂ ಮುರಿದುಬಿದ್ದ ಮಂದಾರಪುಷ್ಪದ ಮಧುವಿನೊಳು ಮಾನಗರವಿಂದು ಮುಳುಗೆದ್ದಿತ್ತು.

ಪಂಚಜನರಾಜ್ಯಕೆ ಪ್ರಾರಬ್ಧವಾಗಲಿಹ ಪುರಾತನ ಪಟ್ಟಣವಿಂದು 'ಪುಣ್ಯ'ಕೋಟಿಗಳಿಗೆಲ್ಲ 'ಪಣ್ಯ'ಕೋಟೆಯಾಗಿತ್ತು.

ದಂಡಕಾರಣ್ಯದಿ ಧ್ಯಾನದೊಳಿದ್ದ ದ್ರಷ್ಟಾರರಂದು ದ್ಯೌಮಂಡಲಕೇರಿ ದಿಗ್ವಲಯಗಳ ಧರಿಸಿನಿಂದ ದಿವ್ಯಮಾತೆಯ ದರ್ಶಿಸಿದರು.

ಕಾವ್ಯಸ್ಫುರಣಕಾಗಿ ಕಾಯುತಿಹ ಕವಿಯೋರ್ವನಲಿ ಕಲಾದೇವಿಯ ಕರಸ್ಪರ್ಶವಾದಂತೆ ಕೋಟಿಕೀರ್ತನೆಗಳ ಕಾರಂಜಿಯನೆಬ್ಬಿಸಿತ್ತು.

ವಾಸ್ತುಶಿಲ್ಪಿಗಳ ವಜ್ರಸಂಕಲ್ಪವದು ವಿರೂಪಗೊಂಡಿರುವ ವಿಲಾಸಗಳಿಗೆಲ್ಲ
ವಂದಿತರೂಪವನಿತ್ತು ವಿಸ್ತರಿಸಿತ್ತು.
ಬರಿಕಲ್ಪನೆಯಲ್ಲೇ ಬಂಧಿತವಾದ ಬಾಳಶಿಲ್ಪಗಳೆಲ್ಲ ಬಂಡೆಯನೆದೆಯ ಬಗೆದು
ಬೆಡುಗು–ಬಿನ್ನಾಣಗಳ ಬಿತ್ತರಿಸಿತ್ತು.
ಅಲ್ಪಕಾಲದೊರೆಗೆ ಅಲೆಮಾರಿಯಾಗಿದ್ದ ಅರಸನ ಅಭಾವದಿ ಅಲಕ್ಷಣವಾಗಿದ್ದ
ಅನಂತಸೇನೆಯಿಂದು ಅಬ್ಬರಿಸಿತ್ತು,
ಮುಗಿಲುಗೂಢಗಳನೇ ಮುಟ್ಟಿ ಮಣಿಸಿ ಮಾನಸರನೇ ಮಣ್ಮುಕ್ಕಿಸುವ
ಮಹಾವೀರರು ಮಿಂಚಿನಂತೆ ಮುನ್ನಡೆದಿಹರು,
ಸಮರಗೀತೆಯ ಸನ್ನಾಹದಿ ಸುಳಿದ ಸೈನ್ಯವದು ಸಾವಿರ ಸಾಮ್ರಾಜ್ಯಗಳ
ಸೋಲಿಸುತ ಸೀಮೆಗಳ ಸಂಚರಿಸಿತ್ತು.
ಬಹುಕಾಲದಿಂದ ಬರಡಾಗಿ ಬೇರಾಗಿ ಭಿನ್ನವಾದ ಬರ್ಬರರ ಬಯಲುಗಳೆಲ್ಲ
ಬಂದು ಬದುವಿನೊಳು ಬಂಧಿಯಾದವು.
ಸುತ್ತೇಳು ಸಾಮಂತರ ಸೊಕ್ಕಡಗಿಸಿದ ಸೇನೆಯದು ಸಪ್ತಸೈಂಧವವನೇ
ಸೋಮಕುಲದ ಸೀಮೆಯಾಗಿಸಿ ಸಂಭ್ರಮಿಸಿತ್ತು.
ಇಂತು ಇಬ್ಬರು ಮಾತೆಯರ ಮಡಿಲಿನೊಳು ಮಲಗಿ ಮೊಲೆಯೂಡಿ ಬೆಳೆದ
ಬಂಧುವಿನಂತೆ
ಸಿಂಧೂ–ಗಂಗೆಯರು ಹರಿದು ಹೊನ್ನವಾಗಿಹ ರನ್ನಜಗುಲಿಗೆ
ರಾಯನೋರ್ವನದೇ ರಾಜ್ಯಭಾರವಾಗಿತ್ತು.
ಸತತ ಸಪ್ತಸಂವತ್ಸರಗಳ ಸಂಸಾರದಲಿ ಸಪ್ತಸೈಂಧವವದು ಸಾನುಲೋಕವಾಗಿ
ಸಂಭ್ರಮಿಸಿತ್ತು.
ಉಂಡುಬಿಡುವ ಉಂಬಳಿಯಂತಿದ್ದ ಉರ್ವಿತಲವದು ಉರ್ವಶಿಯ ಉಪಸ್ಥಿತಿಯಲಿ
ಉತ್ಸರ್ಪಣದಿ ಉತ್ತುಂಗಕ್ಕೇರಿತ್ತು.

(ಸಶೇಷ)

ಮುಖಪುಟದ ಕವನಗಳು

– ಪುಟ್ಟು ಕುಲಕರ್ಣಿ

2

ಈ ಲೋಕವೀಗ ಅವಳ ಬಲುದೀರ್ಘ–ದೀರ್ಘಾತಿ ಯಾತ್ರೆಗಾಗಿ
ಘನತಿಮಿರದೆದೆಯ ಮೂಲಕವೆ ನಿತ್ಯ ಚಲನೆಯಲಿ ನಿಯತಿಯಾಗಿ,
ಕೋಟ್ಯಾನುಕೋಟಿ ಸೂರ್ಯ–ವೃಂದ ಜೊತೆ ಅನುಸ್ಪಂದ ಗ್ರಹದ ಮಾಲೆ
ಅವಳ ಪಥದುದ್ದ ಬೆಳಕು ಬೀರುತಿಹ ಸಾವಿರದ ದೀಪ–ಲೀಲೆ

ಅವಳ ಚಿಂತನದ ಉಸಿರುಸಿರಿಗೀಗ ನಮ್ಮ ಸಂವೇದ ವೃಂದ
ಇದು ಅವಳ ಆತ್ಮ–ಸಂಗಾತಿ ಸಖ್ಯದಲಿ ನಿತ್ಯ ನಿತ್ಯ–ಸ್ಪಂದ
ನಮ್ಮ ಅನುಭೂತಿ–ಸಂವೇದ–ಸರಣಿ–ಸರಣಿಗಳು ಮಾಲೆಯಲ್ಲಿ
ಇದು ಅವಳ ಸಾಕ್ಷ್ಯಮೇಳದಲಿ ನಿರತ ಪ್ರತಿಸ್ಪಂದ ಭೂಮದಲ್ಲಿ

(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 6 ಪುಟ 181)

3

ದಟ್ಟೈಸಿ ನಿಂತು ಒಟ್ಟೊಟ್ಟುತಿರುವ ಅವನ ದಿನಮಾನಗಳಲಿ
ಆ ತಪನ–ಸಾಧುತನವೀಗ ಹೀಗೆ ನಿರ್ವಸನಗೊಂಡು ಇಲ್ಲಿ
ಅವಕಾಶವಾಗಿ ಸುವಿಶಾಲವಾಗಿ ತೆರೆತೆರೆದು ಸಂಧ್ಯೆ–ಪೂರ್ವ
ಅದರೊಡನೆ ಮಿಳಿತು ಸಹವರ್ತಿಯಾಗಿ ಪದಪದದಿ ಬಂದ ಪರ್ವ

ಅತಿಸೂಕ್ಷ್ಮ ಸೂಕ್ಷ್ಮವಿದ್ದರೂ ಸಹಿತ ಕಿರಿದಾದ ದ್ವಾರ ತೆರೆಯೆ
ಹಸಿಹಸಿರು ವರ್ಣ ವಿಕಸನದ ಮುಕುಲದಾಳ ಸೀಳಿನಲ್ಲಿ
ಅನಿಮೇಷವಾಗಿ ದಿಟ್ಟಿಸುತಲಿರುವ ಆ ನಭದ ನೋಟದಿಂದ
ಮತ್ತಿದೋ ಬುವಿಯು ಒತ್ತಾಗಿ ನಿಲಲು ಉದಿಸಿರುವ ವರ್ಣ–ಬಂಧ

ಈ ಪಚ್ಚೆ–ಪೂರ್ಣ ಪರಿಪೂರ್ಣ–ಸಂಧ್ಯೆ ಸ್ವಚ್ಛಂದದಂದವಾಗಿ
ಮಾಬಲದ ಮೂಲ ತಾಣವಿದು ತಾನು ಎಂದರಿತು ಖಚಿತವಾಗಿ

(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 1 ಪುಟ 466)

ಟಿಪ್ಪಣಿ

ಪಚ್ಚೆ–ಪರಿಪೂರ್ಣ ಸಂಧ್ಯೆ: ದೇವಿಯನ್ನು ಸಂಧ್ಯಾ ಸ್ವರೂಪಳು ಎಂದು ಆರಾಧಿಸಲಾಗುತ್ತದೆ. ಆದಿತ್ಯನಲ್ಲಿರುವ ಚೈತನ್ಯ ಹಾಗೂ ನಮ್ಮಲ್ಲಿರುವ ಚೈತನ್ಯವೂ ಒಂದೇ ಇರುವದರಿಂದ ಈ ಹೆಸರಿದೆ. ಸಂಧ್ಯಾ ಎಂದರೆ ಸೂರ್ಯಗತವಾದ ಬ್ರಹ್ಮ ಎನ್ನುವದನ್ನು 'ಸಂಧ್ಯೇತಿ ಸೂರ್ಯಗಂ ಬ್ರಹ್ಮ' ಎಂದು ಮಹಾಭಾರತವು ಹೇಳಿದೆ. "ನ ಭಿನ್ನಾಂ ಪ್ರತಿಪದ್ಯೇತ ಗಾಯತ್ರೀ ಬ್ರಹ್ಮಣಾ ಸಹ। ಸಾ*ಹಮಸ್ಮೀತ್ಯುಪಾಸೀತ ವಿಧಿನಾ ಯೇನ ಕೇನಚಿತ್॥ ಎಂದು ವ್ಯಾಸ ಸ್ಮೃತಿಯು ಇದೇ ವಿಷಯವನ್ನು ಗಾಯತ್ರಿಯು ಬ್ರಹ್ಮನಿಂದ ಬೇರೆ ಎಂದು ತಿಳಿಯಬೇಡ ಎಂದೇ ಹೇಳುತ್ತದೆ. ಯಾವ ವಿಧದಿಂದಲಾದರೂ ಸರಿ 'ನಾನೇ ಅವಳು' ಎಂದು ಉಪಾಸಿಸಬೇಕು.

ಕರ್ಮಸಾಕ್ಷಿ ಹಾಗೂ ಭಾಸ್ವರೂಪಿಣಿಯಾದ ಈಶ್ವರ ಶಕ್ತಿಯು ಸಂಧ್ಯಾ ಎಂದು ವಿದ್ವಜ್ಜನರು ಉಪಾಸಿಸುತ್ತಾರೆ. (ಭಾರಧ್ವಾಜ ಸ್ಮೃತಿ)

ಸಂಧ್ಯೆಯು ಬ್ರಹ್ಮನ ಮಾನಸ ಪುತ್ರಿ. ಚಾರು ರೂಪಳಾದ, ಜಯಂತಿಕೆಯೂ ಆದ ಅವಳು ಬ್ರಹ್ಮನ ಮನಸ್ಸಿನಿಂದ ಜನಿಸಿದ ಕಾರಣ ಈ ಲೋಕದಲ್ಲಿ ಸಂಧ್ಯೆ ಎಂದು ಪ್ರಸಿದ್ಧಳಾಗಿದ್ದಾಳೆ ಎಂದು ಕಾಳಿಕಾ ಪುರಾಣವು ತಿಳಿಸುತ್ತದೆ.

ಇನ್ನು ರೇಣುಕಾ ಪುರಾಣದ ಪ್ರಕಾರ ಇಡಾ ನಾಡಿಯು ಮಹಾಕಾಳಿ. ಪಿಂಗಲಾ ನಾಡಿ ಮಹಾಲಕ್ಷ್ಮೀ. ಸುಷುಮ್ನೆಯು ಏಕಾವೀರಳು. ಹೀಗೆ ಸಂಧ್ಯೆಯು ಮೂರು ಸ್ವರೂಪದಲ್ಲಿ ಇರುತ್ತಾಳೆ.

ಈ ಎಲ್ಲ ವಿವರಗಳನ್ನು ಶ್ರೀ ಅರವಿಂದರು ತಮ್ಮ 'ಸಾವಿತ್ರಿ'ಯಲ್ಲಿ ವಿವರಿಸಿ, ಆ ಅಂತರ್ಜ್ಞಾನವನ್ನು ಸಾಕ್ಷಾತ್ಕರಿಸಿಕೊಳ್ಳುವ ಪಥ ತೋರಿದ್ದಾರೆ. ವೇದ, ಯೋಗ ಹಾಗೂ ವಿಜ್ಞಾನದ ಅತ್ಯಪೂರ್ವ ಸಂಗಮವನ್ನು ಶ್ರೀ ಅರವಿಂದರಲ್ಲಿ ಕಾಣಬಹುದು. ಬ್ರಹ್ಮ ಸತ್ಯ ಜಗನ್ಮಿಥ್ಯಾ ಎಂದು ಅದ್ವೈತ ಸಾರಿದರೂ , ಬ್ರಹ್ಮ ಸತ್ಯ ಜಗತ್ ನ ಮಿಥ್ಯಾ ಎನ್ನುವದು ಶ್ರೀ ಅರವಿಂದರ ತತ್ತ್ವ.

ಈ ವಿಷಯದ ವಿವರಗಳನ್ನು ಸಾವಿತ್ರಿಯ ಪುಟ 466 ರಲ್ಲಿ ಕಾಣಬಹುದು.

ವಾರ್ತಾಪತ್ರ

ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 29ನೇ ಮಾರ್ಚ್ 2026 ಭಾನುವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ ಶ್ರೀಮಾತೆಯವರು ಪಾಂಡಿಚೇರಿಗೆ ಮೊಟ್ಟಮೊದಲ ಆಗಮನದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 10.00 ರಿಂದ 10.20 ರವರೆಗೆ ಸಾಮೂಹಿಕ ಧ್ಯಾನ ಏರ್ಪಡಿಸಲಾಗಿತ್ತು. ನಂತರ 10.30 ರಿಂದ 12.00 ಗಂಟೆಯವರೆಗೆ ಡಾ॥ ಫಲ್ಗುಣಿ ಜಾನಿರವರು **"Self-Consecration in Integral Yoga"** ಎಂಬ ವಿಷಯ ಬಗ್ಗೆ ಉಪನ್ಯಾಸ ನೀಡಿದರು.

ದಿನಾಂಕ 04ನೇ ಏಪ್ರಿಲ್ 2026 ಶನಿವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ ಶ್ರೀ ಅರವಿಂದರು ಪಾಂಡಿಚೇರಿಗೆ ಆಗಮಿಸಿದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 10.00 ರಿಂದ 10.20 ರವರೆಗೆ ಸಾಮೂಹಿಕ ಧ್ಯಾನ ಏರ್ಪಡಿಸಲಾಗಿತ್ತು. ತತ್ಸಬಂಧ ಬೆಳಿಗ್ಗೆ 10.30 ರಿಂದ 11.30 ಗಂಟೆಯವರಗೆ **"Sri Aurobindo and The Earth's Future"** ಎಂಬ ವಿಷಯದ ಬಗ್ಗೆ ವೀಡಿಯೋ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ದಿನಾಂಕ 24ನೇ ಏಪ್ರಿಲ್ 2026 ಶುಕ್ರವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ ಶ್ರೀಮಾತೆಯವರು ಪಾಂಡಿಚೇರಿಗೆ ಆಗಮಿಸಿದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.30 ರಿಂದ 7.50 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರ ವಿತರಿಸಲಾಯಿತು. ತತ್ಸಬಂಧ ಸಾಯಂಕಾಲ 5.00 ರಿಂದ 6.30 ಗಂಟೆಯವರಗೆ **"'ದೇವ ಸಂಘ'ದ ಉದಯ – ಭಾರತದ ಭಾಗ್ಯ"** ಎಂಬ ವಿಷಯವಾಗಿ ಶ್ರೀ ರಮೇಶ್ ಸರಗೂರ್, ಶ್ರೀ ರಾಮಕೃಷ್ಣ ವಿದ್ಯಾಶಾಲ, ಮೈಸೂರು ಇವರು ಕನ್ನಡದಲ್ಲಿ ಉಪನ್ಯಾಸ ನೀಡಿದರು.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಆಸಕ್ತರು ಭಾಗವಹಿಸಿದ್ದರು.



ಫೋಟೊ: ಇಮೇಜಿಂಗ್ ಸಾವಿತ್ರಿ

RNI No. 22511/1971
No. of Pages **60 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.